## ಅಧ್ಯಾಯ 17

# ಪ್ರೇಕ್ಷಣೀಯ ಸ್ಥಳಗಳು*

ಭೌಗೋಳಿಕವಾಗಿ ಪಶ್ಚಿಮ ಘಟ್ಟಗಳ ಏರಿಳಿತಗಳಿಂದ ಆವರಿಸಿರುವ ಕೊಡಗು ಜಿಲ್ಲೆಯು ಪಶ್ಚಿಮ ಘಟ್ಟ ಪ್ರದೇಶದ ಭಾಗವನ್ನು ತನ್ನ ಬೆನ್ನುಮೂಳೆಯಾಗಿ ಹೊಂದಿದಂತಿದೆ. ಘಟ್ಟವು ವಾಯುವ್ಯದಿಂದ ದಕ್ಷಿಣಕ್ಕೆ, ಸುಬ್ರಹ್ಮಣ್ಯದಿಂದ ಬ್ರಹ್ಮಗಿರಿಯ ಪಶ್ಚಿಮಾಗ್ರದವರೆಗೆ ಹಬ್ಬಿದೆ. ಎತ್ತರವಾದ ಪುಷ್ಪಗಿರಿ, ತಡಿಯಂಡಮೋಳು, ಬ್ರಹ್ಮಗಿರಿ, ಪೆರೆಮಾಲೆಮಲೆ ಮುಂತಾದ ಶಿಖರಗಳು ಜಿಲ್ಲೆಗೆ ಅವಶ್ಯವಾದ ತಂಪು ವಾತಾವರಣವನ್ನು ಸದಾ ನೀಡಿರುವುದೇ ಅಲ್ಲದೇ, ಹಲವು ಪ್ರೇಕ್ಷಣೀಯ ನೈಸರ್ಗಿಕ ತಾಣಗಳನ್ನು ಒದಗಿಸಿದೆ. ಈ ಜಿಲ್ಲೆಯನ್ನು 'ದಕ್ಷಿಣ ಕಾಶ್ಮೀರ' ಎಂದು ಕರೆದಿರುವುದು ಅತಿಶಯೋಕ್ತಿಯಲ್ಲ. ಕೊಡಗಿನ ಇಳಿಜಾರು ಭೂಭಾಗಗಳಲ್ಲಿ ಹೇರಳವಾದ ಅರಣ್ಯಗಳೊಳಗೆ ಕಂಡುಬರುವ ಕಾಫಿತೋಟಗಳು ಆಕರ್ಷಣೀಯ ದೃಶ್ಯಗಳನ್ನು ಒದಗಿಸುತ್ತವೆ. ಕಾವೇರಿ ನದಿಯನ್ನು ಕೊಡಗಿನ ಜೀವನಾಡಿ ಎನ್ನಬಹುದು. ಬ್ರಹ್ಮಗಿರಿಯಲ್ಲಿ ಉದ್ಭವವಾಗಿ ಕಾವೇರಿಯು ಆಗ್ನೇಯ ಮುಖವಾಗಿ ಹರಿದು ಅಲ್ಲಿಂದ ಈಶಾನ್ಯಕ್ಕೆ ದಿಕ್ಕು ಬದಲಿಸುತ್ತದೆ. ಕಾವೇರಿ ನದಿಯ ಎರಡೂ ದಂಡೆಗಳಲ್ಲಿ ಹಲವಾರು ರಮ್ಯತಾಣಗಳು ಕಂಡುಬರುವುದು ಸಹಜವೇ ಆಗಿದೆ. ಇದರ ಆಕರ್ಷಕವಾದ ಉಪನದಿಗಳೂ ಜಿಲ್ಲೆಯಲ್ಲಿವೆ. ವೀರರಾಜಪೇಟೆ ತಾಲೂಕಿನಲ್ಲಿರುವ ಮಾಲ್ದರೆಯ ಬಳಿ ಕಾವೇರಿಯು ಕವಲೊಡೆದು ಒಂದು ದ್ವೀಪವನ್ನು ಸೃಷ್ಟಿಸಿರುವ ಸ್ಥಳದಲ್ಲಿದ್ದ ಕೊಡಗಿನ ಶ್ರೀರಂಗಪಟ್ಟಣವು ಈಗ ಖಾಸಗಿ ತೋಟದಲ್ಲಿ ಸೇರಿಹೋಗಿದೆ. ನಂಜರಾಜಪಟ್ಟಣದಲ್ಲಿ ಕಾವೇರಿಯು ಅರ್ಧಚಂದ್ರಾಕಾರವಾಗಿ ಹರಿದು ಎರಡು ಸಣ್ಣ ಸಣ್ಣ ದ್ವೀಪಗಳನ್ನು ಸೃಷ್ಟಿಸಿದೆ. ಕುಶಾಲನಗರದ ಬಳಿಯೂ ಸುಂಟಿಗುತ್ತಿ ಎಂಬ ಸ್ಥಳದ ಸಮೀಪ ಕಾವೇರಿಯು ಮತ್ತೊಂದು ದ್ವೀಪವನ್ನು ಸೃಷ್ಟಿಸಿದೆ. ಈಗ ಈ ದ್ವೀಪವನ್ನು ಪ್ರವಾಸಿ ಕೇಂದ್ರವನ್ನಾಗಿ ರಾಜ್ಯ ಸರ್ಕಾರವು ಪರಿವರ್ತಿಸುತ್ತಿದೆ. ಹೀಗೆ ಕೊಡಗಿನಾದ್ಯಂತ ಹಲವಾರು ನೈಸರ್ಗಿಕ ರಮ್ಯ ತಾಣಗಳು ಕಂಡುಬರುತ್ತವೆ. ನಾಗರಹೊಳೆಯಂತಹ ನಿತ್ಯಹರಿದ್ವರ್ಣದ ಕಾಡುಗಳಿಂದ ಕೂಡಿರುವ ವನ್ಯಧಾಮವು ಕರ್ನಾಟಕದ ಅತಿಮುಖ್ಯವಾದ ಪ್ರಾಕೃತಿಕ ಸಂಪತ್ತೆಂದು ಪರಿಗಣಿಸಲಾಗಿದೆ. ಕೊಡಗಿನಲ್ಲಿ ಹಲವಾರು ಸುಂದರ ಜಲಪಾತಗಳು ಕಾಣಸಿಗುತ್ತವೆ. ಅವುಗಳಲ್ಲಿ ಮುಖ್ಯವಾದುವೆಂದರೆ ಸಾರತಬ್ಬಿ (ಬರಪೊಳೆ), ಇರುಪು, ಅಬ್ಬಿ ಮುಂತಾದವುಗಳು. ಹಲವಾರು ಗಿರಿಧಾಮಗಳೂ, ಸೂರ್ಲಬ್ಬಿಯಂತಹ ಆಕರ್ಷಕ ಕಣಿವೆಗಳೂ, ದುರ್ಗಮವಾದ ದಟ್ಟವಾದ ಅರಣ್ಯಪ್ರದೇಶಗಳೂ ಉತ್ತರ ಮತ್ತು ದಕ್ಷಿಣ ಕೊಡಗಿನಾದ್ಯಂತ ಕಾಣಸಿಗುತ್ತವೆ. ಈ ಜಿಲ್ಲೆಯಲ್ಲಿ ಕಂಡು ಬರುವ ಕೆಲವು ಸ್ಥಳಗಳು ಐತಿಹಾಸಿಕ ಪ್ರಾಧಾನ್ಯವನ್ನು ಪಡೆದಿರುವುದರಿಂದ ಮುಖ್ಯವಾಗಿವೆ. ಮತ್ತೆ ಕೆಲವು ಸ್ಥಳಗಳು ತೀರ್ಥಯಾತ್ರಾ ಕೇಂದ್ರಗಳಾಗಿರುವುದರಿಂದ ಜನಪ್ರಿಯವಾಗಿವೆ. ಇನ್ನೂ ಹಲವು ಸ್ಥಳಗಳು ನೈಸರ್ಗಿಕ ರಮ್ಯತಾಣಗಳಾಗಿರುವುದರಿಂದ

* ಸ್ಥಳಗಳ ಜನಸಂಖ್ಯೆ ಪಟ್ಟಣಗಳಾದರೆ 1991ರ ಜನಗಣತಿಯಂತೆ, ಗ್ರಾಮಗಳಾದರೆ 1981ರಂತೆ ಕೊಡಲಾಗಿದೆ.

ಜನರನ್ನು ಆಕರ್ಷಿಸುತ್ತವೆ. ಕೊಡಗಿನ ಪವಿತ್ರ ಕ್ಷೇತ್ರಗಳಾದ ತಲಕಾವೇರಿ, ಭಾಗಮಂಡಲ, ಪಾಡಿ, ಬಲಮುರಿ, ಹರಿಹರ ಮುಂತಾದ ಸ್ಥಳಗಳು ಅಸಂಖ್ಯಾತ ಯಾತ್ರಿಕರಿಗೆ ತಮ್ಮ ಜೀವಿತದ ಅವಧಿಯಲ್ಲಿ ನೋಡಲೇಬೇಕಾದ ಸ್ಥಳಗಳಾಗಿವೆ. ಈ ಅಧ್ಯಾಯದಲ್ಲಿ ಕೊಡಗು ಜಿಲ್ಲೆಯ ಪ್ರಮುಖ ಸ್ಥಳಗಳನ್ನು ಸ್ಥೂಲವಾಗಿ ಪ್ರಸ್ತಾಪಿಸಲಾಗಿದೆ.

ಅಂಜನಗೇರಿ–ಬೆಟ್ಟಗೇರಿ

ಸುಂಟಿಕೊಪ್ಪದಿಂದ ಮೂರು ಕಿ.ಮೀ. (ಸೋಮವಾರಪೇಟೆ ತಾಲೂಕು, ಜನಸಂಖ್ಯೆ : 1,915) ದೂರದಲ್ಲಿ ಖಾಸಗಿ ಕಾಫಿ ತೋಟ ಒಂದರ (ಡಿ. ಶಿವಪ್ಪ ಎಸ್ಟೇಟ್) ಮಧ್ಯದಲ್ಲಿರುವ ಐತಿಹಾಸಿಕ ಸ್ಥಳವಾಗಿದೆ. ಕಾಫಿ ತೋಟದ ಮಧ್ಯದ ಖಾಸಗಿ ದಾರಿಯಿಂದ ಇದನ್ನು ತಲುಪಬೇಕು. ಇದು ಚಂಗಾಳ್ವ ವಂಶದ ಮಾಂಡಲಿಕರೊಬ್ಬರ ರಾಜಧಾನಿಯಾಗಿತ್ತು. ಇದೇ ಸ್ಥಳದಲ್ಲಿ ದೊರೆತಿರುವ ಕ್ರಿ. ಶ. 1544ರ ಶಾಸನದ ಪ್ರಕಾರ ಅಂಜನಗಿರಿಯು ಒಂದು ಪ್ರಮುಖ ಜೈನಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ಪ್ರಸ್ತುತ ಊರಿನ ಬಹುಪಾಲು ಭಾಗ ನಾಶವಾಗಿದ್ದು, ವಿಗ್ರಹಗಳಿಲ್ಲದ ಬಸದಿಯ ಕಟ್ಟಡವು ಒಂದು ಗರ್ಭಗೃಹ, ನವರಂಗ ಹಾಗೂ ಮುಖಮಂಟಪಗಳಿಂದ ಕೂಡಿದೆ. ವಾಸ್ತುಶಿಲ್ಪ ದೃಷ್ಟಿಯಿಂದ ಈ ಕಟ್ಟಡವು ವಿಜಯನಗರೋತ್ತರ ಶೈಲಿಯಲ್ಲಿದ್ದು, ಸುಸ್ಥಿತಿಯಲ್ಲಿದೆ. ಗರ್ಭಗೃಹವು ಆಯತಾಕಾರವಾಗಿದ್ದು ಮೂರು ದೇವಪೀಠಗಳಿಂದ ಅಲಂಕೃತವಾಗಿದೆ. ನವರಂಗದ ಕಂಬಗಳಲ್ಲಿ ಎರಡು ಭಕ್ತ ವಿಗ್ರಹಗಳು ಕಂಡುಬರುತ್ತವೆ. ಗರ್ಭಗೃಹದಲ್ಲಿದ್ದ ವಿಗ್ರಹಗಳನ್ನು ಮಡಿಕೇರಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿ ಬಲಬದಿಗೆ ನಿಲ್ಲಿಸಿರುವ ಶಿಲಾಶಾಸನದ ಪ್ರಕಾರ, ಕ್ರಿ. ಶ. 1544ಕ್ಕೆ (ಶಾಸನ ಸಂ. 19)* ಸಲ್ಲುವ ಕಾರ್ತಿಕ ಮಾಸದಲ್ಲಿ (ಶ್ರವಣ) ಬೆಳಗೊಳದ ಚಾರುಕೀರ್ತಿ ಪಂಡಿತದೇವ ಮತ್ತು ಅವರ ಶಿಷ್ಯರ ಹೆಸರುಗಳು ಮಾತ್ರ ಕಂಡುಬರುತ್ತವೆ. ಯಾವುದೇ ರಾಜ ಅಥವಾ ರಾಜವಂಶದ ಹೆಸರುಗಳೂ ಇದರಲ್ಲಿ ಕಂಡುಬರುವುದಿಲ್ಲ. ಇದರಲ್ಲಿ, ಸುವರ್ಣವತಿ ನದಿಯ ಪಡದಲ್ಲಿ ತಾತಂಗಿಯಲ್ಲಿದ್ದ ಶಾಂತಿ ತೀರ್ಥೇಶ್ವರ ಮತ್ತು ಅನಂತಸ್ವಾಮಿ ತೀರ್ಥಂಕರರುಗಳ (ಸುಮಾರು 12ನೇಯ ಶತಮಾನದ ಹೊಯ್ಸಳ ಶೈಲಿಯ) ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತೆಂದು ಉಕ್ತವಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ತಾತಂಗಿ ಪಟ್ಟಣ ಇಂದಿನ ಹಾರಂಗಿ ಸುವರ್ಣಾವತಿಯ ದಡದಲ್ಲಿತ್ತೆಂದು ಗುರುತಿಸಲಾಗಿದೆ. ಅಂಜನಗೇರಿಯಿಂದ ಕೇವಲ ಐದು ಕಿ. ಮೀ. ದೂರದಲ್ಲಿ ಉತ್ತರಕ್ಕೆ ಹಾರಂಗಿ ನದಿಯು ಹರಿಯುತ್ತದೆ. ಈ ಜಾಗದಿಂದ ತೀರ್ಥಂಕರರುಗಳ ವಿಗ್ರಹಗಳನ್ನು ಅಂಜನಗಿರಿಗೆ ತರಲಾಗಿತ್ತು. ಪ್ರಾರಂಭದಲ್ಲಿ ಈ ಬಸದಿಯನ್ನು ಮರದಲ್ಲಿ ನಿರ್ಮಿಸಲಾಗಿ, ಕಾಲಕ್ರಮೇಣ ಇದನ್ನು ಕ್ರಿ. ಶ. 1544ರಲ್ಲಿ ಚೆಂಗಾಳ್ವ ವಂಶದ ಶ್ರೀಕಂಠರಸು ಕಟ್ಟಿಸಿದನೆಂದು ಇದೇ ಶಾಸನವು ತಿಳಿಸುತ್ತದೆ. ಇಷ್ಟೇ ಅಲ್ಲದೆ ಬಸದಿಯ ದೈನಂದಿನ ನಡವಳಿಕೆಗಳಿಗೆ ಅನುಕೂಲವಾಗುವಂತೆ ನಂಜರಾಯಪಟ್ಟಣಕ್ಕೆ ಸಲ್ಲುವ ಬೆಮ್ಮತ್ತಿ, ಬೂತನಹಳ್ಳಿಗಳ ಸುತ್ತಮುತ್ತಲ ಪ್ರದೇಶಗಳ ಭೂದಾನವನ್ನು ನೀಡಿದ ಬಗೆಗೆ ತಿಳಿಸುತ್ತದಲ್ಲದೆ, ಕೋಣಸನಗರದ ಶಾಂತೋಪಾಧ್ಯಾಯರ ಕೈಯಿಂದ ಪ್ರತಿಷ್ಠಾಪನೆ ಮಾಡಿಸಲಾಯಿತೆಂದೂ ಉಲ್ಲೇಖಿಸುತ್ತದೆ. ಈಗ ಮಡಿಕೇರಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಅನಂತೇಶ್ವರ, ಶಾಂತಿತೀರ್ಥೇಶ್ವರ ಹಾಗೂ ಪದ್ಮಾವತಿ ಯಕ್ಷಿಯ ವಿಗ್ರಹಗಳು ಕ್ರಿ. ಶ. 12 ನೇಯ ಶತಮಾನದ ಶಿಲ್ಪ ಶೈಲಿಯನ್ನು ಹೋಲುತ್ತವೆ. ಮಡಿಕೇರಿಯಲ್ಲಿರುವ ಮೊದಲನೇಯ ಜಿನ ಬಿಂಬದ ಪೀಠದ ಮೇಲಿರುವ ಶಾಸನದ ಪ್ರಕಾರ ಮೂಲ ಸಂಘ, ದೇಸೀಯ ಗಣದ ತಾತಂಗಿಯ ನ್ಯಾಯಕೀರ್ತಿಯ ಶಿಷ್ಯರಾದ ಮಾಘನಂದಿಭಟ್ಟಾರಕರು ಶಾಂತಿನಾಥ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂದು ತಿಳಿದು ಬರುತ್ತದೆ. ಇದೇ ಜಿನ ಬಿಂಬದ ಪ್ರಭಾವಳಿಯ ಬಲಭಾಗದಲ್ಲಿರುವ ಶಾಸನವು ಬಹುತೇಕವಾಗಿ ಅಳಿಸಿಹೋಗಿದೆ. ಅದುದರಿಂದ ಪೂರ್ಣಪಾಠ ಲಭ್ಯವಿಲ್ಲ. ಎರಡನೇಯ ಜಿನಬಿಂಬ ಪೀಠದ ಮೇಲಿರುವ ಶಾಸನವು ಸಹ ಇದೇ ಕಾಲದ್ದಾಗಿದ್ದು, ತಾತಂಗಿಯ ಭಟ್ಟಾರಕರ ಶಿಷ್ಯರಲ್ಲಿ ಒಬ್ಬನಾದ ಹೆರಗು ಗ್ರಾಮದ ಹರಿಶ್ಚಂಪ್ರ ದೇವರು ಎನ್ನುವವರು ಈ ಶಾಂತಿನಾಥ ತೀರ್ಥಂಕರರ ವಿಗ್ರಹವನ್ನು ಮಾಡಿಸಿಕೊಟ್ಟನೆಂದು ತಿಳಿಸುತ್ತದೆ. ಈ ಶಿಲಾಮೂರ್ತಿಯೂ ಸಹ ಹೊಯ್ಸಳ ಕಲಾಶೈಲಿಯನ್ನು ಹೋಲುತ್ತದೆ. ಮೂರನೇಯ ಜಿನಬಿಂಬದ ಪೀಠದ ಮೇಲಿರುವ ಶಾಸನವು ಮಾಘನಂದಿಯ ವಿವರಗಳನ್ನು ನೀಡುತ್ತದೆ ಹಾಗೂ ಈ ವಿಗ್ರಹವನ್ನು ಹರಿಯಣ್ಣ ಹೆಗ್ಗಡೆ ಎಂಬ ಅಧಿಕಾರಿಯು ಮಾಡಿಸಿದನೆಂದು ತಿಳಿಸುತ್ತದೆ. ನ್ಯಾಯಕೀರ್ತಿ ಸಿದ್ಧಾಂತ ಚಕ್ರವರ್ತಿಯ ಶಿಷ್ಯನಾದ ಹರಿಯಣ್ಣನು ಪ್ರಭಾವಶಾಲಿ ರಾವುತ ನಾಯಕನಾಗಿದ್ದನೆಂದು ಈ ದಾಖಲೆಯು ತಿಳಿಸುತ್ತದೆ. ಆದರೆ, ಯಾವ ರಾಜನ ಅಧೀನದಲ್ಲಿ ಈ ಅಧಿಕಾರಿಯು ಸೇವೆ ಸಲ್ಲಿಸುತ್ತಿದ್ದನೆಂದು ತಿಳಿದು ಬರುವುದಿಲ್ಲ.

* ಶಾಸನ ಸಂಖ್ಯೆಗಳನ್ನು ಎಪಿಗ್ರಾಫಿಯಾ ಕರ್ನಾಟಿಕಾ ಸಂ. I, 1972ರ ಆವೃತ್ತಿಯಂತೆ ಕೊಟ್ಟಿದೆ.

### ಅಂದಗೋವೆ_ಕಲ್ಲೂರು

ಸುಂಟಿಕೊಪ್ಪದಿಂದ ಐದು ಕಿ.ಮೀ. ದೂರದಲ್ಲಿರುವ ಅಂದಗೋವೆ_ಕಲ್ಲೂರು (ಸೋಮವಾರಪೇಟೆ ತಾಲೂಕು; ಜನಸಂಖ್ಯೆ 1,563) ಪ್ರತ್ಯೇಕವಾಗಿಯೇ ಕಾಡಿನ ಮಧ್ಯದಲ್ಲಿ ಉಳಿದಿರುವ ಒಂದು ಪ್ರಾಚೀನ ಇತಿಹಾಸ ಪೂರ್ವ ಸಂಸ್ಕೃತಿಯ ಸ್ಥಳ. ಈ ಊರಿನ ಸಮೀಪ ತೋಟಗಳ ನಡುವೆ ಶಿಲಾಗೋರಿಗಳು ಕಂಡುಬರುತ್ತವೆ. ಶಿಲೆಯ ನಾಲ್ಕು ಚಪ್ಪಡಿಗಳನ್ನು ಆಯತಾಕಾರವಾಗಿ ಗೋಡೆಗಳಂತೆ ನಿಲ್ಲಿಸಿ, ಒಂದು ಅಥವಾ ಎರಡು ಬೃಹದಾಕಾರವಾದ ಟೊಪ್ಪಿಗೆ ಕಲ್ಲು(ಕ್ಯಾಪ್‌ಸ್ಟೋನ್) ಗಳಿಂದ ಮುಚ್ಚಿರುತ್ತಾರೆ. ಮುಂಭಾಗದ ಚಪ್ಪಡಿಯ ಮೇಲ್ಭಾಗದಲ್ಲಿ ಅರ್ಧಚಂದ್ರಾಕಾರವಾದ ಕಿಂಡಿಯನ್ನು ಕಲ್ಲಿನಲ್ಲಿ ಕೊರೆದಿರುವುದು ಕಂಡುಬರುತ್ತದೆ. ಈ ರೀತಿಯ ಕಿಂಡಿಸಹಿತ ಶಿಲಾಗೋರಿಗಳು (ಪ್ಯಾಸೇಜ್ ಚೇಂಬರ್ಸ್) ಅಂದಗೋವೆಯಲ್ಲಿ ಮಾತ್ರವಲ್ಲದೇ ಸೋಮವಾರಪೇಟೆ ತಾಲೂಕಿನ ಇತರೆ ಭಾಗಗಳಲ್ಲೂ ಹೇರಳವಾಗಿ ಕಂಡುಬರುತ್ತವೆ (ಪುಟ 68 ನೋಡಿ). ಸ್ಥಳೀಯವಾಗಿ ಈ ಶಿಲಾಗೋರಿಗಳನ್ನು ಪಾಂಡವರ ಗುಡಿಗಳೆಂದೂ ಕರೆಯಲಾಗುತ್ತದೆ. ಆದರೆ ಇವು ಬೃಹತ್ ಶಿಲಾಯುಗದ (ಮೆಗಾಲಿಥಿಕ್) ಗೋರಿಗಳು. ಊರಿನಲ್ಲಿ ಒಂದು ವೀರಗಲ್ಲು ಇದ್ದು, ಅದರಲ್ಲಿರುವ ಶಾಸನದ ಪ್ರಕಾರ ಬಾಚಗನೆಂಬ ವೀರನೊಬ್ಬನು ತಲೆಕೆಡಿಸಿಕೊಂಡು ಆತ್ಮಾರ್ಪಣೆ ಮಾಡಿದಾಗ, ಅವನ ಸ್ಮರಣೆಗಾಗಿ ಆತನ ಸಂತತಿಯವರು ಹಾಕಿಸಿದ ಸ್ಮಾರಕ ಶಿಲೆ ಇದಾಗಿದೆ. ಶಾಸನದ ಬಹುತೇಕ ಭಾಗವು ಅಳಿಸಿಹೋಗಿದ್ದರೂ ಇದರ ಕಾಲವು ಕ್ರಿ.ಶ. 944ಕ್ಕೆ ಸಲ್ಲುತ್ತದೆಂದು ಹೇಳಲಾಗಿದೆ. ಈ ಶಾಸನವನ್ನು ಬಾವಣಯ್ಯನೆಂಬುವನು ಬರೆದನೆಂದು ತಿಳಿದು ಬರುತ್ತದೆ.

### ಅಬ್ಬಿ ಜಲಪಾತ

ಮಡಿಕೇರಿಯಿಂದ ಪಶ್ಚಿಮಕ್ಕೆ ಗಾಳೀಬೀಡಿನ ಮಾರ್ಗದಲ್ಲಿ (ಮಡಿಕೇರಿಯಿಂದ ಆರು ಕಿ.ಮೀ.) ಮಡಿಕೇರಿ ಅಥವಾ ಮುತ್ತರಮುಟ್ಟು ತೊರೆಯಿಂದ ಪ್ರಾಕೃತವಾಗಿ ಉಂಟಾಗಿರುವ ಜಲಪಾತಕ್ಕೆ 'ಅಬ್ಬಿ ಜಲಪಾತ' (ಮಡಿಕೇರಿ ತಾಲೂಕು)ವೆಂದು ಕರೆಯಲಾಗಿದೆ. ಕೊಡವರ ಭಾಷೆಯಲ್ಲಿ 'ಅಬ್ಬಿ' ಎಂದರೆ ಜಲಪಾತ ಎಂದು ಅರ್ಥ. ಆದರೆ, ಅಬ್ಬಿ ಜಲಪಾತಕ್ಕೆ ಹಿಂದೆ ಕೆಲಕಾಲ 'ಜೆಸ್ಸಿ ಜಲಪಾತ'ವೆಂದು ಕರೆಯಲಾಗುತ್ತಿತ್ತು. ಮಡಿಕೇರಿಯ ಪ್ರಥಮ ಚಾಪ್ಲಿನ್‌ರಾಗಿದ್ದವರ ಮಗಳಾದ 'ಜೆಸ್ಸಿ'ಯ ಜ್ಞಾಪಕಾರ್ಥವಾಗಿ ಈ ಹೆಸರನ್ನು ಇಡಲಾಗಿತ್ತೆಂದು ತಿಳಿದು ಬರುತ್ತದೆ. ಕರ್ನಾಟಕದ ರಾಜ್ಯಪಾಲರಾಗಿದ್ದ ಧರ್ಮವೀರ ಅವರ ಪ್ರಯತ್ನದಿಂದಾಗಿ ಈ ಸ್ಥಳವನ್ನು ಸುಲಭವಾಗಿ ಕಾಲ್ನಡಿಗೆಯಲ್ಲಿ ತಲುಪಲು ಸಿಮೆಂಟ್ ಮೆಟ್ಟಿಲುಗಳನ್ನು ನಿರ್ಮಿಸಲಾಯಿತು. ಭೂಮಿಯ ಹಂತದಿಂದ ಪ್ರಪಾತಕ್ಕೆ ತೋಟಗಳ ಮಧ್ಯದಲ್ಲಿ ಇಳಿದು ಹೋದರೆ ಜಲಪಾತವನ್ನು ನಿಂತು ನೋಡಬಹುದಾದ ಸಮತಟ್ಟಾದ ಬಯಲಿದೆ. ಎದುರಿಗೆ ಎತ್ತರವಾದ ಬಂಡೆಗಳ ಕೊರಕಲುಗಳ ನಡುವಿನಿಂದ(ಸುಮಾರು 70 ಅಡಿ ಎತ್ತರದಿಂದ) ಕಲ್ಲುಗುಂಡುಗಳಿರುವ ಪ್ರಪಾತಕ್ಕೆ ಹಂತ ಹಂತವಾಗಿ ಭೋರ್ಗರೆಯುತ್ತಾ ಧುಮುಕುವ ಜಲಪಾತದ ರಮಣೀಯ ದೃಶ್ಯವನ್ನು ನೋಡಬಹುದು. ಸುತ್ತಲೂ ನಿತ್ಯಹರಿದ್ವರ್ಣದ ವನಸಿರಿಯ ಸಂಪತ್ತು ಈ ಸ್ಥಳವನ್ನು ತಂಪಾಗಿರುವ ಪ್ರವಾಸಿ ಸ್ಥಾನವನ್ನಾಗಿಸಿದೆ. ಮಡಿಕೇರಿಗೆ ಸಮೀಪದಲ್ಲಿರುವುದರಿಂದ ಈ ಸ್ಥಳವನ್ನು ವೀಕ್ಷಿಸಲು ಯಾತ್ರಿಕರು ರಜೆಯ ದಿನಗಳಲ್ಲಿ ವಿಶೇಷವಾಗಿ ಬರುತ್ತಾರೆ.

### ಅಬ್ಬಿಮಠ

ಸೋಮವಾರಪೇಟೆಯಿಂದ ಸುಮಾರು ಆರು ಕಿ.ಮೀ. ದೂರದಲ್ಲಿ ರಮ್ಯವಾದ ಅರಣ್ಯಗಳ ನಡುವೆ ಇರುವ ಸ್ಥಳ. ಇಲ್ಲಿರುವ ಅಬ್ಬಿಮಠವು ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಶಾಖೆಯಾಗಿದೆ. ಭೌಗೋಳಿಕವಾಗಿ ಈ ಪ್ರದೇಶವು ಹಸಿರಾದ ಬೆಟ್ಟಗುಡ್ಡಗಳ ನಡುವೆ ಇರುವ ಸುಂದರ ಕಣಿವೆಯಾಗಿದೆ. ಇಲ್ಲಿರುವ ಮಠದ ಕಟ್ಟಡದ ಸ್ವಲ್ಪ ಭಾಗ ಕಲ್ಲಿನಿಂದ ನಿರ್ಮಿತವಾಗಿದ್ದು, ಉಳಿದ ಭಾಗವನ್ನು ಗಾರೆ ಮತ್ತು ಇಟ್ಟಿಗೆಯಿಂದ ಕಟ್ಟಲಾಗಿದೆ. ಆದರೆ ಈಗ ಕಟ್ಟಡದ ಬಹುಪಾಲು ಭಾಗ ಶಿಥಿಲವಾಗಿದೆ. ಗೋಡೆಗಳಲ್ಲಿ ಕಂಡುಬರುವ ಮರದ ಕಿಟಕಿ_ಬಾಗಿಲುಗಳು ವಿಪುಲವಾದ ಮರದ ಕೆತ್ತನೆಯ ಅಲಂಕಾರವನ್ನು ಹೊಂದಿವೆ. ಮಹಾದ್ವಾರದಿಂದ ಒಳಗೆ ಪ್ರವೇಶಿಸಿದರೆ ವಿಶಾಲವಾದ ತೆರೆದ ಹಜಾರವಿದೆ; ಹಾಗೂ ಎದುರಿಗೆ ಸಾಲಾಗಿ ಮೂರು ಕೊಠಡಿಗಳಿವೆ. ಇವುಗಳಲ್ಲಿ ಮಧ್ಯದ ಕೊಠಡಿಯಲ್ಲಿ ಶಾಂತವೀರಸ್ವಾಮಿ, ಎಡಗಡೆ ಕೊಠಡಿಯಲ್ಲಿ ವೀರಭದ್ರಸ್ವಾಮಿ ಹಾಗೂ ಬಲಗಡೆ ಕೊಠಡಿಯಲ್ಲಿ ಚನ್ನವೀರರುದ್ರಸ್ವಾಮಿಗಳ ಗದ್ದುಗೆಗಳಿವೆ. ಮಠದ ವಶದಲ್ಲಿದ್ದ ತಾಮ್ರಪಟ ಶಾಸನದ ಪ್ರಕಾರ (ನಂ. 63) ಕೊಡಗಿನ ದೊಡ್ಡವೀರಪ್ಪನು ಕ್ರಿ.ಶ. 1728ರಲ್ಲಿ ಎಡವನಾಡಿನಲ್ಲಿರುವ ಅಬ್ಬಿಮಠಕ್ಕೆ ಮೂರು ಗ್ರಾಮಗಳಾದ ಹೊಸಹಳ್ಳಿ, ಜಿಗಟ್ಟಹಳ್ಳಿ ಮತ್ತು ಬಾಚಳ್ಳಿಗಳನ್ನು ದಾನ ನೀಡಿದ್ದು,ಕ್ರಿ.ಶ. 1796ರಲ್ಲಿ ದೊಡ್ಡವೀರರಾಜೇಂದ್ರನು ಈ ದಾನವನ್ನು ನವೀಕರಿಸಿದ ಬಗೆಗೆ ತಿಳಿಸುತ್ತದೆ. ಇಲ್ಲಿ ಶಿವರಾತ್ರಿಯ ವೇಳೆಗೆ ಜಾತ್ರೆ ನಡೆಯುತ್ತದೆ. ಮಠದ ಮೂಲ ಕಟ್ಟಡದಿಂದ ಉತ್ತರಕ್ಕೆ ಸುಮಾರು 300 ಮೀಟರ್ ದೂರದಲ್ಲಿ ಅಂಕುಡೊಂಕಾದ ಬಂಡೆಗಳ ಕೊರಕಲು ನಡುವೆ ಅಬ್ಬಿಜಲಪಾತವನ್ನು (ಬೇಸಿಗೆಯಲ್ಲಿ) ಆಚೆಯ ದಡಕ್ಕೆ

ಬಂಡೆಗಳ ಮೇಲಿನಿಂದ ದಾಟಿ ಕೆಳಕ್ಕೆ ಇಳಿದು ಹೋದರೆ ವಿಜಯನಗರೋತ್ತರ ಕಾಲದ ಕಲ್ಲಿನ ಮಲ್ಲಿಕಾರ್ಜುನ ದೇವಾಲಯವು ಗೋಚರವಾಗುತ್ತದೆ. ಈ ದೇವಾಲಯವು ಒರಟಾದ ಕಲ್ಲಿನಿಂದ ನಿರ್ಮಿತವಾಗಿದ್ದು,ಮಟ್ಟಸವಾದ ಛಾವಣಿಯನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಹಾಗೂ ಸಪ್ತ ಮಾತೃಕೆಯರ ಜೋಡುಶಿಲ್ಪವಿದೆ. ಹೊರಗೆ ಒಂದು ಅಪ್ರಕಟಿತ ಶಾಸನವೂ ಇದೆ. ಇದು ಮಲ್ಲಪ್ಪನಾಯಕ ಎಂಬಾತನು 1464 ರಲ್ಲಿ ದೇವರಿಗೆ ನೀಡಿದ ದತ್ತಿಯನ್ನು ಸೂಚಿಸುವ ಶಾಸನವೆಂದು ಎಂ.ಜಿ. ನಾಗರಾಜ್ ತಿಳಿಸಿದ್ದಾರೆ. ಈ ದೇವಾಲಯದ ಪಕ್ಕದಲ್ಲೇ ಅಬ್ಬಿ ಜಲಪಾತವು ಇರುವುದರಿಂದ ಇದರ ಪ್ರಾಕೃತಿಕ ಸೌಂದರ್ಯವು ಅತ್ಯಂತ ರಮಣೀಯವಾಗಿದೆ. ಈ ರಮ್ಯ ನೈಸರ್ಗಿಕ ತಾಣವನ್ನು ಕೇವಲ ಬೇಸಿಗೆ ಕಾಲದಲ್ಲಿ ಮಾತ್ರ ನೋಡಬಹುದಾಗಿದೆ. ಜಲಪಾತವು ಎರಡು ಹಂತಗಳಲ್ಲಿದ್ದು ಮಳೆಗಾಲದಲ್ಲಿ ಉಗ್ರರಮ್ಯತೆಯನ್ನು ಪಡೆಯುತ್ತದೆ. ಮಳೆಗಾಲದಲ್ಲಿ ಈ ದೇವಾಲಯದ ಬಳಿಹೋಗಲು ಸಾಧ್ಯವಿಲ್ಲ. ಬಲದಂಡೆಯಲ್ಲಿನ ಸೇತುವೆ ದಾಟಿ ಗದ್ದೆಗಳ ನಡುವೆ ನಡೆದು ಬಂದರೆ ಈ ಜಲಪಾತವನ್ನು ಎದುರು ದಡದಿಂದ ವೀಕ್ಷಿಸಲು ಸಾಧ್ಯವಾಗುತ್ತದೆ. ಅಲ್ಲಿ ಸಂದರ್ಶಕರಿಗೆ ನಿಲುಜಗಲಿ ಇಲ್ಲ. ಮುಖ್ಯ ರಸ್ತೆಯಿಂದ ತಿರುವು ರಸ್ತೆಯಲ್ಲಿ ಸುಮಾರು ಎರಡು ಕಿ.ಮೀ. ಕಾಲ್ನಡಗೆಯಲ್ಲೇ ಹೋಗಬೇಕಾಗುತ್ತದೆ. ಅಬ್ಬಿ ಮಠವು ನಿರ್ಜನವಾದ ಪ್ರದೇಶದಲ್ಲಿರುವ ರಮ್ಯ ಕ್ಷೇತ್ರವಾಗಿದೆ. ಮಠದ ಹಿಂಭಾಗದಲ್ಲಿ ಕೋಟೆಯೊಂದರ ಅವಶೇಷಗಳಿವೆ.

### ಆಲೂರು – ಸಿದ್ದಾಪುರ

ಶನಿವಾರಸಂತೆಯಿಂದ 13 ಕಿ.ಮೀ. ದೂರದಲ್ಲಿರುವ ಆಲೂರು ಸಿದ್ದಾಪುರವು (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 550) ಒಂದು ಪ್ರಾಚೀನ ಸ್ಥಾನ. ಈ ಊರಿನ ಮುಂದೆ ಖಾಸಗಿ ಜಮೀನಿನಲ್ಲಿ ಶಾಸನವಿರುವ ನಿಷಿಧಿ ಕಲ್ಲೊಂದು ಅರ್ಧಭಾಗ ನೆಲದಲ್ಲಿ ಹೂತುಹೋಗಿದೆ. ಮೂರು ಹಂತಗಳಿರುವ ಈ ಕಲ್ಲಿನ ಕೆತ್ತನೆಯು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಚಾಮರಧಾರಿಣಿಯರ ಉಬ್ಬುಶಿಲ್ಪಗಳು ಹಾಗೂ ಮುಕ್ಕೊಡೆಯ ಚಿತ್ರಣಗಳು ಪ್ರಧಾನವಾಗಿ ಕಂಡುಬರುತ್ತವೆ. ಇದರ ಮೇಲಣ ಶಾಸನದ ಪ್ರಕಾರ ಮೂಲ ಸಂಘ ದೇಸೀಯಗಣ ಪುಸ್ತಕಗಚ್ಛದ ಶುಭ ಚಂದ್ರದೇವರ ಶಿಷ್ಯ ಪ್ರಭಾಚಂದ್ರ ದೇವರೆಂಬ ಜೈನಮುನಿಯು ನಿಷಿಧಿ ಹೋದುದನ್ನು ತಿಳಿಸುತ್ತದೆ. ದಾಖಲೆಯಲ್ಲಿ ಸೂಚಿಸಿರುವಂತೆ ತಾರಣ ಸಂವತ್ಸರವು ಕ್ರಿ.ಶ. 1044ರ ಸುಮಾರಿಗೆ ಹೊಂದುತ್ತದೆ (ಶಾ. ಸಂ. 89). ಇದರ ಸಮೀಪವೇ ಅರ್ಧ ಬಿದ್ದಿರುವ ಬಸವನಗುಡಿ ಇದೆ. ಇದು ವಾಸ್ತುಶಿಲ್ಪ ದೃಷ್ಟಿಯಿಂದ ಅಷ್ಟು ಪ್ರಮುಖವಲ್ಲ. ಅದರ ಹತ್ತಿರವೇ ಕಣಗಾಲ ರಸ್ತೆಯಲ್ಲಿ ಆಲೂರು ಕೆರೆ ಇದೆ ; ಹಾಗೂ ದಡದ ಮೇಲೆ ಬಂಡಿಯಮ್ಮನ ದೇವಾಲಯವಿದೆ. ದೇವಾಲಯಕ್ಕೆ ಯಾವುದೇ ರೀತಿಯ ಕಟ್ಟಡವಿಲ್ಲ, ಅದರೆ, ಬೃಹದಾಕಾರವಾದ ಕಲ್ಲಿನ ಚಪ್ಪಡಿಯನ್ನು ಬಂಡಿಯಮ್ಮನೆಂದು ಸ್ಥಳೀಕರು ಪೂಜಿಸುತ್ತಾರೆ. ವೈಶಾಖಮಾಸದ ಕೊನೆಯ ವಾರದಲ್ಲಿ ಜಾತ್ರೆ ನಡೆಯುತ್ತದೆ. ದೊಡ್ಡಕಣಗಾಲು (ಸೋಮವಾರಪೇಟೆ ತಾ|| ; ಜನಸಂಖ್ಯೆ : 568) ಆಲೂರು – ಸಿದ್ದಾಪುರದಿಂದ ಎರಡು ಕಿ.ಮೀ. ದೂರದಲ್ಲಿರುವ ಮತ್ತೊಂದು ಆಸಕ್ತಿಯ ಸ್ಥಳ. ಈ ಊರಿನ ಹಿಂಭಾಗದಲ್ಲಿ ದೇಯ್ಗಲ್ ಬೆಟ್ಟವು ಪ್ರಧಾನವಾಗಿ ಕಂಡುಬರುತ್ತದೆ. ಹಾಗೂ ಊರಿನಲ್ಲಿ ಎರಡು ಕೆರೆಗಳಿವೆ. ಊರ ಹೊರಗೆ ಗದ್ದೆಯ ಬಯಲಿನಲ್ಲಿರುವ ಬಸವಣ್ಣನ ಗುಡಿಯ ಬಳಿ ಹಲವು ವೀರಗಲ್ಲುಗಳಿವೆ. ಇವುಗಳಲ್ಲಿ ಒಂದು ದೊಡ್ಡದಾಗಿದ್ದು (1.05 ಮೀ. ಉದ್ದ, 1.02 ಮೀ. ಅಗಲವಿದೆ) ಭಾರಿ ಯುದ್ಧದ ಚಿತ್ರಣವನ್ನು ಹೊಂದಿದೆ. ಕಾದಾಡುತ್ತಿರುವ ಇಬ್ಬರು ಯೋಧರುಗಳನ್ನು, ಮೃತಸೈನಿಕರನ್ನೂ ಪರಿಣಾಮಕಾರಿಯಾಗಿ ಕೆತ್ತಲಾಗಿದೆ; ಹಾಗೂ ವೀರನಿಗೆ ಐವರು ಸತಿಯರು ಮತ್ತು ಮಗ ಸಹ ಇರುವಂತೆ ಚಿತ್ರಿಸಲಾಗಿದೆ. ವೀರನ ಕೈಯಲ್ಲಿ ಕಡಿದ ತಲೆಯಭಾಗ ಕಂಡುಬರುತ್ತದೆ. ಸ್ತ್ರೀ ವಿಗ್ರಹಗಳ ರಚನೆಯಲ್ಲಿ ಅಂದಿನ ಸಾಮಾಜಿಕ ಜೀವನ ಹಾಗೂ ಉಡುಪುಗಳ ವಿನ್ಯಾಸ, ಆಭರಣಗಳ ವೈವಿಧ್ಯ ಜೀವಂತವಾಗಿ ಅಭಿವ್ಯಕ್ತವಾಗಿದೆ. ಈ ವೀರಗಲ್ಲು ಸುಮಾರು ಕ್ರಿ.ಶ. 17 ನೇಯ ಶತಮಾನದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಇದರ ಸಮೀಪವೇ ಒಂದು ಮುರಿದಿರುವ ವೀರಗಲ್ಲಿನಲ್ಲಿ ವೀರ, ಆತನ ಸತಿ ಮತ್ತು ಒಬ್ಬ ಸೇವಕನು ಇರುವ ದೃಶ್ಯವನ್ನು ಕೆತ್ತಲಾಗಿದೆ. ಇದೇ ಜಾಗದಲ್ಲಿರುವ ಮೂರನೇಯ ವೀರಗಲ್ಲಿನಲ್ಲಿ ಇಬ್ಬರು ವೀರರು ಮತ್ತು ಒಬ್ಬಳು ಸ್ತ್ರೀ ದರ್ಪಣವನ್ನು ಕೈಯಲ್ಲಿ ಹಿಡಿದಿರುವಂತೆ ಅತ್ಯಂತ ಸುಂದರವಾಗಿ ರೂಪಿಸಲಾಗಿದೆ. ನಾಲ್ಕನೇಯ ವೀರಗಲ್ಲಿನಲ್ಲಿ ಒಬ್ಬ ಸ್ತ್ರೀ ವೀರನ ಪಕ್ಕದಲ್ಲಿ ನಿಂತು ಕೈಯಲ್ಲಿ ದರ್ಪಣ ಹಿಡಿದಿರುವಂತೆ ಅತ್ಯಂತ ನೈಜ ಚಿತ್ರವನ್ನು ವ್ಯಕ್ತಪಡಿಸುತ್ತದೆ. ವೀರನು ಒಂದು ಕೈಯಲ್ಲಿ ಕಡಿದ ತಲೆ ಮತ್ತು ಇನ್ನೊಂದರಲ್ಲಿ ದುಂಡನೆಯ ಗುರಾಣಿ ಹಿಡಿದಿದ್ದಾನೆ. ಹಲವಾರು ವೀರಗಲ್ಲುಗಳು ತುಂಡುಗಳಾಗಿ ಅಲ್ಲಲ್ಲಿ ಬಿದ್ದಿವೆ. ಈ ಊರಿನ ಸಮೀಪವೇ ದೊಡ್ಡಹಳ್ಳಿ– ಕಣಗಾಲು ರಸ್ತೆಯ ಪಕ್ಕದ ಬಾಣೆಯಲ್ಲಿ ಮರದ ಕೆಳಗೆ ಭಿನ್ನವಾದ ಪ್ರಾಚೀನ ಗಣಪತಿಯ ಶಿಲಾಮೂರ್ತಿಯೂ ಕಂಡುಬರುತ್ತದೆ. ಹಾಗೂ ಸಮೀಪದಲ್ಲೇ ಗಂಗರ ಶೈಲಿಯ

ಸ್ತಂಭದ ಭಾಗವು ಇರುವುದನ್ನು ನೋಡಿದರೆ ಇದು ಬಹುತೇಕವಾಗಿ ಗಂಗರ ಕಾಲದ ದೇವಾಲಯದ ನಿವೇಶನವಿದ್ದಿರಬಹುದೆಂದು ಹೇಳಬಹುದಾಗಿದೆ.

**ಇರುಪು**

ವೀರರಾಜಪೇಟೆಯಿಂದ ಸುಮಾರು 45 ಕಿ.ಮೀ. ದೂರದಲ್ಲಿರುವ ಇರುಪು (ಇರ್ಪು) (ವೀರರಾಜಪೇಟೆ ತಾಲೂಕು) ಒಂದು ಜನಪ್ರಿಯ ಯಾತ್ರಾ ಸ್ಥಳವಾಗಿದೆ. ಕುರ್ಚಿಗ್ರಾಮದ ಪರಿಮಿತಿಗೆ ಈ ಸ್ಥಳವು ಒಳಪಟ್ಟಿದೆ. ಇಲ್ಲಿಗೆ ತಲುಪಬೇಕಾದರೆ ಕುಟ್ಟ-ಶ್ರೀಮಂಗಲ ರಸ್ತೆಯಿಂದ ಎಡಭಾಗಕ್ಕೆ ತಿರುಗಿ ಕಚ್ಚಾರಸ್ತೆಯ ಮೂಲಕ ಐದು ಕಿ.ಮೀ. ಸಾಗಬೇಕು; ಅಥವಾ ಕುರ್ಚಿಗ್ರಾಮದ ಮೂಲಕವೂ ಹೋಗಬಹುದಾಗಿದೆ. ಭೌಗೋಳಿಕವಾಗಿ ಬೆಟ್ಟಗಳಿಂದ ಆವೃತವಾಗಿರುವ ಪ್ರತ್ಯೇಕ ಕಣಿವೆಯ ಭಾಗದಲ್ಲಿ ಪೌರಾಣಿಕ ಹಿನ್ನೆಲೆಯನ್ನು ಪಡೆದಿರುವ ರಾಮೇಶ್ವರ ದೇವಾಲಯದಿಂದ ಮತ್ತು ಸಮೀಪವೇ ಬ್ರಹ್ಮಗಿರಿ ಬೆಟ್ಟಗಳಿಂದ ಮೂಡಿಬಂದ ಲಕ್ಷ್ಮಣತೀರ್ಥ ನದಿಯಿಂದ ಸಹಜವಾಗಿ ಉಂಟಾಗಿರುವ ಜಲಪಾತವಿರುವುದರಿಂದ ಇರುಪುವಿಗೆ ಜನಪ್ರಿಯತೆ ಬಂದಿದೆ ಎನ್ನಬಹುದು. ಪೌರಾಣಿಕವಾಗಿ ಶ್ರೀರಾಮನು ಸ್ವತಃ ತಾನೇ ಲಕ್ಷ್ಮಣತೀರ್ಥದ ದಡದಲ್ಲಿ ರಾಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದನೆಂದು ಸ್ಥಳ ಪುರಾಣದಿಂದ ತಿಳಿದು ಬರುತ್ತದೆ. ಪ್ರಸ್ತುತ ಇಲ್ಲಿರುವ ರಾಮೇಶ್ವರ ದೇವಾಲಯದ ವಿಶಾಲವಾದ ಆವರಣವು ವಿವಿಧ ಕಟ್ಟಡಗಳ ಸಮುಚ್ಚಯವಾಗಿದೆ. ವೃತ್ತಾಕಾರವಾದ ಗರ್ಭಗೃಹ, ಅರ್ಧಮಂಟಪ ಹಾಗೂ ಮುಕ್ತ ಮುಖಮಂಟಪವನ್ನು ಹೊಂದಿರುವ ರಾಮೇಶ್ವರ ದೇವಾಲಯದ ಕಟ್ಟಡವು ಕೇರಳದ ವಾಸ್ತುಶಿಲ್ಪ ಶೈಲಿಯನ್ನು ಬಹುತೇಕವಾಗಿ ಹೋಲುತ್ತದೆ. ಗರ್ಭಗೃಹಕ್ಕೆ ಸಾಂಧಾರ ಪ್ರದಕ್ಷಿಣಾಪಥವಿದೆ ಹಾಗೂ ಮೇಲ್ಭಾಗದಲ್ಲಿ ಹೆಚ್ಚು ಎತ್ತರವಲ್ಲದ ಶಂಕುವಿನಾಕಾರದ ಶಿಖರವಿದೆ. ಈ ದೇವಾಲಯದ ಹೊರ ಪ್ರಕಾರದಲ್ಲಿ ಕೆಲವು ಸಣ್ಣಪುಟ್ಟ ಗುಡಿಗಳಿವೆ. ಅವುಗಳೆಂದರೆ, ಗಂಧರ್ವ, ಭೈರವ, ಕುರ್ಚಿ ಮಹಾದೇವ, ಗಣಪತಿ ಮತ್ತು ಪಾರ್ವತಿ. ದೇವಾಲಯದ ಎದುರಿಗೆ ಜಗಲಿಯ ಮೇಲೆ ಗಂಧರ್ವ ಹಾಗೂ ಭೈರವರ ಸಣ್ಣ ಗುಡಿಗಳು ಮತ್ತು ಎಡಭಾಗದಲ್ಲಿ ಪಾರ್ವತಿಯ ಹಾಗೂ ಗಣಪತಿಯ ಗುಡಿಗಳು ಕಂಡುಬರುತ್ತವೆ. ಇದಲ್ಲದೆ, ಒಂದು ಸಣ್ಣ ಜಂಬಿಟ್ಟಿಗೆಯ ದೇವಾಲಯದಲ್ಲಿ ಖಾಲಿಯಿರುವ ಪಾಣಿಪೀಠವು ಕಂಡುಬರುತ್ತದೆ. ಎರಡು ಕಂಚಿನ ವಿಗ್ರಹಗಳಿವೆ; ಒಂದು ಕುದುರೆಯ ಮೇಲೆ ಕೂತ ಹೆಣ್ಣುಮೂರ್ತಿ ದ್ವಿಬಾಹುಗಳಲ್ಲಿ ಪಾನಪಾತ್ರೆ ಮತ್ತು ಖಡ್ಗ ಹಿಡಿದಿದೆ; ಮತ್ತು ಇನ್ನೊಂದು ಗಂಡು ಮೂರ್ತಿ ತನ್ನ ಎರಡು ಕೈಗಳಲ್ಲಿ ಖಡ್ಗ (ಭಿನ್ನವಾಗಿದೆ) ಮತ್ತು ಫಲಕ ಹಿಡಿದಿದೆ. ರಾಮೇಶ್ವರ ದೇವಾಲಯದಲ್ಲಿ ವಾರ್ಷಿಕ ಜಾತ್ರೆಯು ಶಿವರಾತ್ರಿ ಸಂದರ್ಭದಲ್ಲಿ ನಡೆಯುವಾಗ ನಾನಾ ಭಾಗಗಳಿಂದ ಸಾವಿರಾರು ಜನರು ಸೇರುತ್ತಾರೆ. ಈ ದೇವಾಲಯದ ಆವರಣದಲ್ಲಿರುವ ಶಿಲಾ ಶಾಸನವು ಶಾರ್ವರಿ ಸಂವತ್ಸರದ ಕ್ರಿ.ಶ. 1840–41ಕ್ಕೆ ಸೇರಿದೆ. ಈ ಶಾಸನವು ಲಕ್ಷ್ಮಣತೀರ್ಥದ 'ಇರ್ಪಿ'ನ ರಾಮೇಶ್ವರ ದೇವಾಲಯವನ್ನು ಕಿಗ್ಗಟ್ಟು ಮತ್ತು ಹತ್ತುನಾಡಿನ ಸಮಸ್ತ 'ರೈಹಿತರು' (ರೈತರು) ಜೀರ್ಣೋದ್ಧಾರ ಮಾಡಿಸಿದುದರ ಬಗೆಗೆ ಉಲ್ಲೇಖಿಸುತ್ತದೆ. ಈ ದೇವಸ್ಥಾನದಿಂದ ದಕ್ಷಿಣಕ್ಕೆ ಕುರ್ಚಿಗ್ರಾಮದಲ್ಲಿ ಅರಮನೆ ಇತ್ತು. ದೊಡ್ಡ ವೀರರಾಜೇಂದ್ರನು ಪಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಬಂದಾಗ ಮೊದಲು ಈ ಆಯಕಟ್ಟಿನ ಸ್ಥಳದಲ್ಲಿ ಚಿಕ್ಕ ಅರಮನೆ ಕಟ್ಟಿಕೊಂಡನು. ಆದನ್ನು ಕೇರಳದ ಅವನ ಶತ್ರುಗಳು ಸುಟ್ಟು ಹಾಕಿದರು (ಪು. 92 ನೋಡಿ) ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರದ 1174ರ ಶಾಸನದಲ್ಲಿ(ಎ.ಕ., ಸಂ. 4, ಸಂಖ್ಯೆ 118) ಹೇಳಿರುವ ಚಂಗಾಳ್ವರ ಮಾಂಡಲೀಕ ಉದಯಾದಿತ್ಯನ ರಾಜಧಾನಿ 'ಕುರುಚಿ' ಇದೇ ಎಂದು ಭಾವಿಸಲಾಗಿದೆ. ಅಲ್ಲಿ ಈಗ ಅಜ್ಜಮಾಡ ಕುಟುಂಬಕ್ಕೆ ಸೇರಿದ ದೊಡ್ಡದಾದ ಮನೆ ಇದೆ; ಹಾಗೂ ಎರಡು ಹಳೆಯ ತಾಳವಾರಗಳಿವೆ.

ದೇವಾಲಯದಿಂದ ವಾಯುವ್ಯಕ್ಕೆ ಗದ್ದೆಗಳ ನಡುವೆ ಕ್ರಮಿಸಿ ಸುಮಾರು ಒಂದು ಕಿ. ಮೀ. ದೂರ ಏರುದಾರಿಯಲ್ಲಿ ಹೋದರೆ ಇರುಪು ಜಲಪಾತವನ್ನು ತಲುಪಬಹುದಾಗಿದೆ. ಜಲಪಾತಕ್ಕೆ ಸ್ವಲ್ಪ ದೂರದಲ್ಲಿ ವೈನಾಡಿನ ಕಡೆಯಿಂದ ಚಾಚಿಕೊಂಡಿರುವ ಬ್ರಹ್ಮಗಿರಿ ಪರ್ವತಶ್ರೇಣಿ ಮತ್ತು ಎದುರಿಗೆ ಎತ್ತರವಾದ ಸಣ್ಣ ಬೆಟ್ಟದ ಮೇಲಿರುವ ವಿಶ್ರಾಂತಿ ಭವನವಿದೆ. ಇಲ್ಲಿಂದ ನಿಸರ್ಗ ಸೌಂದರ್ಯವನ್ನು ವೀಕ್ಷಿಸಿದರೆ ಇರುಪುವಿನ ಸುತ್ತಲೂ ಇರುವ ಬೆಟ್ಟಗುಡ್ಡಗಳ ತುಂಬು ಸೌಂದರ್ಯವನ್ನು ಸವಿಯಬಹುದಾಗಿದೆ. ಇಂಥ ಕಡಿದಾದ ಕೋನಾಕಾರವಾದ ಬೆಟ್ಟಗಳ ನಡುವೆ ಸುಮಾರು 100 ಅಡಿ ಮತ್ತು 70 ಅಡಿ ಎತ್ತರಗಳಿಂದ ಎರಡು ಹಂತಗಳಲ್ಲಿ ಲಕ್ಷ್ಮಣತೀರ್ಥ ನದಿಯು ಭೋರ್ಗರೆಯುತ್ತಾ ಬಂಡೆಗಳ ಪ್ರಪಾತಕ್ಕೆ ಧುಮುಕುವ ದೃಶ್ಯವನ್ನು ಜಲಪಾತದ ಕೆಳಭಾಗದಲ್ಲಿ ನಿಂತು ನೋಡಬಹುದಾಗಿದೆ. ಬೇಸಿಗೆಯಲ್ಲಿ ಮಾತ್ರ ನೀರು ಧುಮುಕುವ ಪಾದದವರೆಗೂ ನಡೆದು ಹೋಗಬಹುದಾಗಿದೆ. ಎತ್ತರವಾದ ಕಲ್ಲುಬಂಡೆಯಿಂದ ಧುಮುಕಿ ಲಕ್ಷ್ಮಣತೀರ್ಥವು ವಾಯುವ್ಯಕ್ಕೆ ಹರಿದು ರಾಮತೀರ್ಥವೆಂಬ ಸಣ್ಣ ಹೊಳೆಯನ್ನು ಕೂಡಿಕೊಂಡು ಮುಂದಕ್ಕೆ ಈಶಾನ್ಯ ದಿಕ್ಕಿಗೆ ಹರಿದು ಮೈಸೂರು ಜಿಲ್ಲೆಯಲ್ಲಿ ಕಾವೇರಿಯನ್ನು ಸೇರುತ್ತದೆ. ಶಿವರಾತ್ರಿಯ ಮರುದಿನ

ರಾಮತೀರ್ಥದಲ್ಲಿ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ. ಇರುಪುವಿಗೆ ಬಂದ ಯಾತ್ರಿಕರು ವಿಶೇಷವಾಗಿ ರಜಾದಿನಗಳಲ್ಲಿ ವಿಹಾರಾರ್ಥವಾಗಿ ಜಲಪಾತಕ್ಕೆ ಭೇಟಿ ನೀಡುವರು. ಇಲ್ಲಿಯ ಹಸಿರು ನಿಸರ್ಗದ ದೃಶ್ಯವು ಮನಸ್ಸಿಗೆ ಆಹ್ಲಾದಕರವಾಗಿರುತ್ತದೆ. ಈ ಜಲಪಾತವನ್ನು ನೋಡಲು ಸೂಕ್ತವಾದ ಸಮಯವೆಂದರೆ ಅಕ್ಟೋಬರ್–ನವೆಂಬರ್ ತಿಂಗಳುಗಳು.

### ಕಲ್ಕಂದೂರು

ಸೋಮವಾರಪೇಟೆಯಿಂದ ಆರು ಕಿ.ಮೀ. ದೂರದಲ್ಲಿರುವ ಕಲ್ಕಂದೂರು (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 1,270) ಒಂದು ಪುರಾತನ ಜೈನ ಕೇಂದ್ರ. ಇದು ಎತ್ತರವಾದ ಸ್ಥಳದಲ್ಲಿ ಇದೆ. ಈ ಊರಿನಲ್ಲಿರುವ ಪಾರ್ಶ್ವನಾಥ ಬಸದಿಯನ್ನು ಬಹುತೇಕವಾಗಿ ಕ್ರಿ. ಶ. 14ನೇಯ ಶತಮಾನದಲ್ಲಿ ನಿರ್ಮಿಸಿರಬಹುದಾಗಿದೆ. ಈಗ ಬಸದಿಯು ಹೆಂಚಿನ ಛಾವಣಿಯ ಆಧುನಿಕ ಕಟ್ಟಡವಾಗಿದ್ದು, ಗರ್ಭಗೃಹದಲ್ಲಿರುವ ಮೂಲ ವಿಗ್ರಹವು ಕುಳಿತ ಭಂಗಿಯಲ್ಲಿರುವ ಹೊಯ್ಸಳ ಶೈಲಿಯ ಕಪ್ಪು ಶಿಲೆಯ ಪಾರ್ಶ್ವನಾಥ. ಇದರ ಹಿಂಭಾಗದಲ್ಲಿ ಅಲಂಕೃತವಾದ ಪ್ರಭಾವಳಿಯಿದೆ. ಈ ವಿಗ್ರಹವು ಸುಮಾರು ಒಂದು ಮೀಟರ್ ಎತ್ತರವಿದೆ. ಬಸದಿಯ ಮುಂದೆ ಎರಡು ಅಪ್ರಕಟಿತ ಶಾಸನಗಳಿವೆ. ಅದರಲ್ಲಿ ಒಂದರಲ್ಲಿ ಅರ್ಧಭಾಗ ಅಳಿಸಿ ಹೋಗಿದೆ. ಇಲ್ಲಿರುವ ಬ್ರಹ್ಮಯಕ್ಷ ಒಂದು ಸುಂದರ ಹೊಯ್ಸಳ ಮೂರ್ತಿಯಾಗಿದ್ದು ಇದರ ದ್ವಿಬಾಹುಗಳಲ್ಲಿ ಅಂಕುಶ ಮತ್ತು ಶ್ರೀಫಲವಿದೆ. ಪಕ್ಕದಲ್ಲಿ ಬ್ರಹ್ಮದೇವರ ಸನ್ನಿಧಿಯಲ್ಲಿ ಹೊಯ್ಸಳ ಶೈಲಿಯ ಆದಿನಾಥ ಪೀಠವಿದೆ, ಆದರೆ ವಿಗ್ರಹವಿಲ್ಲ. ಗೆಜ್ಜೆನಕೋಡು ಎಂಬಲ್ಲಿಂದ ತಂದಿರಲಾಗಿರುವ ಮತ್ತೊಂದು ಹೊಯ್ಸಳ ಶೈಲಿಯ ಪಾರ್ಶ್ವನಾಥ (ಸುಮಾರು ಒಂದು ಮೀಟರ್ ಎತ್ತರ) ಮತ್ತು ಆದಿನಾಥರ ಕಪ್ಪು ಶಿಲೆಯ ವಿಗ್ರಹಗಳಿವೆ ; ಆದಿನಾಥ ವಿಗ್ರಹದ ಪ್ರಭಾವಳಿಯಲ್ಲಿ ಹೊಯ್ಸಳ ಶೈಲಿಯ ವಿಪುಲ ಅಲಂಕಾರವಿದೆ. ಬ್ರಹ್ಮದೇವರ ಪೀಠದ ಮೇಲಿರುವ ಶಾಸನವು 14 ನೇಯ ಶತಮಾನದ ಲಕ್ಷಣವನ್ನು ಹೊಂದಿದ್ದು, ಮಾಣಿಕದೇವರು ಎಂಬ ಜೈನ ಮುನಿಯು ಈ ವಿಗ್ರಹವನ್ನು ಪ್ರತಿಷ್ಠಾಪಿಸಿದರೆಂದು ತಿಳಿಸುತ್ತದೆ. ಇಲ್ಲಿರುವ ಜಾಗಟೆಯ ಮೇಲೆ ಶಾಸನವಿದ್ದು, ಒಬ್ಬ ಹೊಯ್ಸಳ ಅಧಿಕಾರಿ ಚಂದಣ್ಣನೆಂಬುವನು ಚಂದ್ರನಾಥ ಬಸದಿಗೆ ಇದನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ. ಆದುದರಿಂದ ಈಗಿರುವ ಬಸದಿಯು ಪಾರ್ಶ್ವನಾಥ ಎಂದು ಸ್ಥಳೀಕರು ಹೇಳಿದರೂ ಬಹುಶಃ ಇದನ್ನು ಮೊದಲು ಚಂದ್ರನಾಥ ಬಸದಿ ಎಂದು ಕರೆದಿರಬಹುದು ಎಂಬುದು ಮೇಲಿನ ಶಾಸನದಿಂದ ವ್ಯಕ್ತವಾಗುತ್ತದೆ. ಗೌಡ ಜನಾಂಗದವರು ಈ ಬಸದಿಗೆ ಭಕ್ತರಾಗಿರುವುದು ಇಲ್ಲಿಯ ಒಂದು ವಿಶೇಷವಾಗಿದೆ (ಹಿಂದೆ ಅವರೆಲ್ಲ ಜೈನರಿದ್ದಿರಬಹುದು). ಬಸದಿಯ ಸಮೀಪದಲ್ಲಿ ಈಶ್ವರ ದೇವಾಲಯವಿದೆ ಹಾಗೂ ಇದರ ಕಟ್ಟಡವು ಸಹ ಸಾಧಾರಣ ಶೈಲಿಯದಾಗಿದೆ. ಬಹುಶಃ ಹಿಂದೆ ಈ ಸ್ಥಳಕ್ಕೆ ಕೋಟೆ ಇದ್ದಿರಬೇಕು ; ಏಕೆಂದರೆ, ಬಸದಿಗೂ ಮೊದಲು ಹೆಬ್ಬಾಗಿಲಿನ ಭಾಗವಿದ್ದು ಕೋಟೆಯ ಕಲ್ಲುಗಳ ಅವಶೇಷವಿದೆ. ಊರಿನಲ್ಲಿ ಹಲವಾರು ವೀರಗಲ್ಲುಗಳಿವೆ. ಈ ಊರಿನಲ್ಲಿ ಒಂದು ಸರಕಾರಿ ಮೀನು ಮರಿಗಳ ಸಾಕಣೆಯ ಕೇಂದ್ರವಿದೆ.

### ಕಲ್ಲುಡೇಶ್ವರ

ಗೋಣಿಕೊಪ್ಪಲಿನ ಸಮೀಪವಿರುವ ಬಾಳೆಲೆಯಿಂದ ಸುಲಭವಾಗಿ ಸೇರಬಹುದಾದ ಕಲ್ಲುಡೇಶ್ವರ (ವೀರರಾಜಪೇಟೆ ತಾಲೂಕು) ಬೆಳ್ಳೂರು ಗ್ರಾಮದ ಪರಿಮಿತಿಯೊಳಗಿರುವ ಸ್ಥಳ. ಇಲ್ಲಿ ಕೊಡಗಿನ ರಾಜರು ಕಟ್ಟಿಸಿದ ಅಷ್ಟಕೋನಾಕಾರವಾದ ತಳ ವಿನ್ಯಾಸವಿರುವ ಕಲ್ಲುಡೇಶ್ವರ ದೇವಾಲಯವಿದೆ. ವಿಶಾಲವಾದ ಛಾವಣಿಯಿರುವ ಪ್ರಾಕಾರವನ್ನು ಹೊಂದಿರುವ ಈ ದೇವಾಲಯಕ್ಕೆ ಸಾಂಧಾರ ಪ್ರದಕ್ಷಿಣಾಪಥವಿದೆ. ಮುಂದೆ ಇರುವ ವೃತ್ತಾಕಾರವಾದ ಮುಕ್ತ ಮುಖಮಂಟಪದಲ್ಲಿ ಗಣಪತಿ, ಕಾರ್ತಿಕೇಯ, ಉಮಾಮಹೇಶ್ವರ ಮತ್ತು ಪಾರ್ವತಿಯರ ಶಿಲಾ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲಿರುವ ಶಿಖರವು ಶಂಕುವಿನಾಕಾರವಿದೆ. ಮತ್ತು ಅದರ ಕೆಳಗೆ ವೃತ್ತಾಕಾರವಾದ ಗಾರೆಯ ಪೀಠವನ್ನು ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿಯೂ ಭಕ್ತಾದಿಗಳು ಮಣ್ಣಿನ ನಾಯಿಗಳ ಮಾದರಿಗಳನ್ನು ಮುಡಿಪು ಕಾಣಿಕೆಯಾಗಿ ನೀಡುತ್ತಾರೆ. ವೈಶಾಖ ಮಾಸದ ಭರಣಿ ನಕ್ಷತ್ರದಲ್ಲಿ ವಾರ್ಷಿಕವಾಗಿ ಜಾತ್ರೆ ನಡೆಯುವಾಗ ಸಾವಿರಾರು ಜನರು ಸೇರುತ್ತಾರೆ.

### ಕುಂದಗಿರಿ

ಗೋಣಿಕೊಪ್ಪಲು–ವೀರರಾಜಪೇಟೆ ಮುಖ್ಯ ರಸ್ತೆಯಲ್ಲಿ ಗೋಣಿಕೊಪ್ಪಲಿನಿಂದ ಐದು ಕಿಲೋಮೀಟರ್ ದೂರದ ಹಾತೂರು ಗ್ರಾಮದ ಬಳಿ ಎಡ ಪಾರ್ಶ್ವದಲ್ಲಿ ಸುಮಾರು ಒಂದು ಕಿ.ಮೀ. ನಡೆದು ಉತ್ತರ ಭಾಗಕ್ಕೆ ಹೋದರೆ ಕುಂದ ಬೆಟ್ಟದ (ವೀರರಾಜಪೇಟೆ ತಾಲೂಕು) ಬುಡವನ್ನು ತಲುಪುತ್ತೇವೆ. ದಕ್ಷಿಣ ಹಾಗೂ ಪಶ್ಚಿಮದ ಪಾರ್ಶ್ವಗಳಿಂದ ಈ ಗಿರಿಗೆ ಹಸಿರು ತುಂಬಿದ ಹಾದಿ ಇದೆ. ಕೆಳಭಾಗದಿಂದ ಬೆಟ್ಟದ ತುದಿಯನ್ನು ನೋಡಿದರೆ ಬೆಂಗಳೂರು ಬಳಿಯಿರುವ ನಂದಿಬೆಟ್ಟದಂತೆ ಕಾಣುವ ಇಲ್ಲಿ ಕಾಫಿ ಗಿಡಗಳ ಮತ್ತು ಅರಣ್ಯಗಳ ಹಸಿರಾದ ನಿಸರ್ಗದ ಆಕರ್ಷಣೆ ಕಂಗೊಳಿಸುತ್ತದೆ. 'ಕುಂದ್' ಎಂದರೆ ಕೊಡವ ಭಾಷೆಯಲ್ಲಿ ಬೆಟ್ಟವೆಂದರ್ಥ. ವೀರರಾಜೇಂದ್ರ

ಒಡೆಯನು ಕ್ರಿ.ಶ. 1787ರಲ್ಲಿ ಪಿರಿಯಾಪಟ್ಟಣದ ಸೆರೆಯಿಂದ ತಪ್ಪಿಸಿಕೊಂಡು ಬಂದು ಇಲ್ಲಿ ಒಂದು ಗುಡಿಸಿಲಿನಲ್ಲಿ ವೇಷ ಮರೆಸಿಕೊಂಡಿದ್ದನೆಂದೂ ಆತನಿಗೆ ಆಶ್ರಯ ಕೊಟ್ಟ ಕಾರಣ ತಮ್ಮ ಮನೆತನಕ್ಕೆ 'ಮನೆಯಪ್ಪಂಡ' ಎಂಬ ಹೆಸರು ಬಂದಿತೆಂದೂ ಈಗ ಅಲ್ಲೇ ವಾಸಿಸುತ್ತಿರುವ ಅದೇ ವಂಶದವರು ಹೇಳಿಕೊಳ್ಳುತ್ತಾರೆ.[1] ಕಠಿಣವಾದ ಮಾರ್ಗದಲ್ಲಿ ಸುಮಾರು 900 ಅಡಿ ಎತ್ತರ ಹತ್ತಿಹೋದರೆ ಮೇಲ್ಭಾಗದಲ್ಲಿ ಮಹಾದೇವನ ದೇವಾಲಯವಿದೆ. ಇದನ್ನು ಬೆಟ್ಟಯತ್‌ನಾಡಿನ 'ಕುಂದಕ್ಷೇತ್ರ' ಅಥವಾ 'ಮಹಾದೇವ ಕ್ಷೇತ್ರ' ಎಂದೂ ಸ್ಥಳೀಯವಾಗಿ ಕರೆಯುತ್ತಾರೆ. ಸ್ಥಳ ಪುರಾಣದ ಪ್ರಕಾರ ಪಾಂಡವರು ತಮ್ಮ ವನವಾಸದ ಅವಧಿಯಲ್ಲಿ ಇಲ್ಲಿಯ ಮಹಾದೇವನಿಗೆ ಒಂದೇ ರಾತ್ರಿಯಲ್ಲಿ ಈ ದೇವಾಲಯವನ್ನು ನಿರ್ಮಿಸಿದರೆಂದು ಪ್ರತೀತಿಯಿದೆ. ಅವರೇ ಗರ್ಭಗುಡಿಯಲ್ಲಿರುವ ಶಿವಲಿಂಗವನ್ನು ಕಾಶಿಯಿಂದ ತಂದು ಪ್ರತಿಷ್ಠಾಪಿಸಿದರೆಂದೂ, ತಲಕಾವೇರಿಯ ಸಂಕ್ರಮಣದ ಉದ್ಭವ ತೀರ್ಥವನ್ನು ತಂದು ಅಭಿಷೇಕ ಮಾಡಿದರೆಂದೂ ಪ್ರತೀತಿಯಿದೆ. ಕೊಡವರು ಈ ದೇವರನ್ನು ಕುಂದದ ಅಯ್ಯಪ್ಪ ಅಥವಾ ಮಹಾದೇವನೆಂದು ಭಕ್ತಿ ಗೌರವಗಳಿಂದ ಸಂಬೋಧಿಸುತ್ತಾರೆ. ಕೊಡಗಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಕೇರಳ ಶೈಲಿಯ ದೇವಾಲಯಕ್ಕೆ ಬದಲು ಚತುರಸ್ರ ಮಾದರಿಯ ಶಿಲಾಗೋಡೆಯುಳ್ಳ ಗರ್ಭಗೃಹವನ್ನು ಇದು ಹೊಂದಿದೆ. ಗರ್ಭಗೃಹದ ಬಾಗಿಲು ಮರದಲ್ಲಿ ಮಾಡಿದೆ ಮತ್ತು ಮುಂಭಾಗದಲ್ಲಿ ಒಂದು ಎತ್ತರವಾದ ಜಗತಿಯ ಮೇಲೆ ಸುಂದರ ನಂದಿ ವಿಗ್ರಹವನ್ನು ಇರಿಸಲಾಗಿದೆ. ದೇವಾಲಯವು ಎತ್ತರವಾದ ಜಗತಿಯ ಮೇಲಿದ್ದು, ಸುತ್ತಲೂ ಪ್ರದಕ್ಷಿಣೆ ಬರಲು ಅವಕಾಶವಿದೆ. ಈ ದೇವಾಲಯದ ಕಂಬದ ಮೇಲೆ ಒಂದು ಶಾಸನವಿದ್ದು, ಇದರ ಪ್ರಕಾರ ಕ್ರಿ.ಶ. 1854ರಿಂದ 1857ರ ನಡುವೆ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಯಿತೆಂದು ತಿಳಿದುಬರುತ್ತದೆ. ಹಾಗೆಯೇ, ಆಗ ಕುಂದಗ್ರಾಮದ ಜಾಹಗೀರದಾರನಾಗಿದ್ದ ಹಯಾತ್‌ಖಾನ್ ಎಂಬ ದಾನಿಯು ಈ ಪುರಾತನ ದೇವಾಲಯವನ್ನು ನವೀಕರಣ ಮಾಡಿ ನಂದಿಯನ್ನು ತನ್ನ ಹೆಸರಿನಲ್ಲಿ ಪ್ರತಿಷ್ಠಾಪಿಸಿದನೆಂದೂ ಈ ದಾಖಲೆಯು ತಿಳಿಸುತ್ತದೆ. ಬೆಟ್ಟದ ಮೇಲೆ ದೇವಾಲಯದ ಸಮೀಪವೇ ಕುದುರೆ ಜೋಡು ಕಳಿ, ಭೀಮನ ಕಲ್ಲು, ದೇರಟ್ ಕಲ್ಲು ಮುಂತಾದ ತಾಣಗಳಿವೆ. ತುಲಾ ಸಂಕ್ರಮಣದ ಸಮಯದಲ್ಲಿ ಇಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಆಗ ಅನೇಕ ಜಾನಪದ ಕಲೆಗಳನ್ನು ನೋಡಬಹುದು. ಸಂಕ್ರಮಣಕ್ಕೆ ಏಳು ದಿನಗಳು ಮುಂಚೆ ಬೇಡು ಕಟ್ಟುವುದು (ಹರಕೆಯ ಹಾಡು) ಆಚರಿಸಿದರೆ ಸಂಕ್ರಮಣದ ಹಿಂದಿನ ಸಂಜೆ 'ಬೆತ್ತಲೆ ಕಳಿ' ಎಂಬ ಜಾನಪದ ನೃತ್ಯದಲ್ಲಿ ಹಸಿರು ಎಲೆಗಳಿಂದ ದೇಹವನ್ನು ಮುಚ್ಚಿಕೊಂಡು ಹರಕೆ ಒಪ್ಪಿಸುತ್ತಾರೆ. ಇದೇ ರೀತಿ 'ಕುದುರೆ ಜೋಡು ಕಳಿ' (ಕುದುರೆ ಕುಣಿತ) ಆರಂಭಿಸುತ್ತಾರೆ. ಮಹಾದೇವ ಗುಡಿಯ ಎಡಕ್ಕೆ ಸು. 50 ಅಡಿ ದೂರದಲ್ಲಿ ಚಾಚಿದ ಬಂಡೆಯ ಕಿರು ಕೋಡೊಂದಿದೆ. ಇದು ಮುಕ್ಕಾಲು ಅಡಿ ಉದ್ದ, ಅರ್ಧ ಅಡಿ ಅಗಲವಾಗಿದ್ದು ಇದನ್ನು ಕೊಡವರು 'ದೇವರ ಪಾರೆ' ಅಥವಾ 'ದೇರಟ್‌ಕಲ್ಲು' ಎನ್ನುತ್ತಾರೆ. ಸಂಕ್ರಮಣದ ಜಾತ್ರೆಯ ದಿನ ಕೊಡವ ಹಿರಿಯರು ಮತ್ತು ಕಿರಿಯರು ಈ ಕಲ್ಲಿನ ಮೇಲೆ ನಿಂತು ಮೂರು ಸುತ್ತು ನಿಂತಲ್ಲಿಯೇ ತಿರುಗುತ್ತಾರೆ. ಇದರ ಹಿಂಭಾಗದಲ್ಲಿ ಸುಮಾರು 900 ಅಡಿಗಳಷ್ಟು ಆಳವಿರುವ ಅಪಾಯಕಾರಿ ಪ್ರಪಾತವಿದೆ. ಇಂತಹ ಅಪಾಯ ಕಲ್ಲಿನ ಮೇಲೆ ಕೊಡವ ಹಿರಿಯರು ಮತ್ತು ಕಿರಿಯರು ಲೀಲಾಜಾಲವಾಗಿ ತಿರುಗುವುದನ್ನು ನೋಡುವ ಹೊಸಬರಿಗೆ ಭಯವಾಗುತ್ತದೆ. ಕುಂದಬೆಟ್ಟದಿಂದ ನಿಂತು ಸಂಜೆಯ ವೇಳೆ ರಮ್ಯ ಸೂರ್ಯಾಸ್ತವನ್ನು ವೀಕ್ಷಿಸಬಹುದು. ಈ ಸ್ಥಳವು ದುರ್ಗಮವಾಗಿದೆ.

## ಕುಟ್ಟ

ಪೊನ್ನಂಪೇಟೆಯಿಂದ 24 ಕಿ.ಮೀ. ದೂರದಲ್ಲಿರುವ ವೀರರಾಜಪೇಟೆ–ನಾಗರಹೊಳೆ ರಸ್ತೆಯ ಮಧ್ಯದಲ್ಲಿ ಕುಟ್ಟ ಊರಿದೆ (ವೀರರಾಜಪೇಟೆ ತಾಲೂಕು ; ಜನಸಂಖ್ಯೆ : 5,251). ಈ ಊರಿನ ಪಶ್ಚಿಮದ ಅಂಚಿಗೆ ವೈನಾಡಿನ ಗಡಿ ಮತ್ತು ಮುಂಚಳ್ಳಿ ಕಾಡು ಆವರಿಸಿರುವ ಬ್ರಹ್ಮಗಿರಿ ಪರ್ವತವು ಈ ಸ್ಥಳಕ್ಕೆ ಹಸಿರಾದ ವನಸಿರಿಯ ಸೊಬಗನ್ನು ಒದಗಿಸಿವೆ. ಈ ಬ್ರಹ್ಮಗಿರಿ ಪರ್ವತವು ತಲಕಾವೇರಿಯ ಬ್ರಹ್ಮಗಿರಿಗಿಂತಲೂ ಭಿನ್ನವಾದುದೆಂಬುದು ಇಲ್ಲಿ ಗಮನೀಯ. ಕುಟ್ಟದ ಗ್ರಾಮದೇವತೆಯನ್ನು ಕಾಳಿಕಾದೇವಿ ಅಥವಾ ಕುಟ್ಟದಮ್ಮ ಎಂದೂ ಕರೆಯುತ್ತಾರೆ. ಹಾಗೂ ಈ ದೇವಿಯ ವಾರ್ಷಿಕ ಜಾತ್ರೆಯು ಮಾರ್ಚ್–ಏಪ್ರಿಲ್ ನಡುವೆ ನಡೆಯುತ್ತದೆ. ಈ ಜಾತ್ರೆಯ ವಿಶೇಷವೆಂದರೆ, ಪಂಜರಿ ಯೆರವರು, ಕುರುಬರು, ಪಣಿಯರು ಮುಂತಾದ ಬುಡಕಟ್ಟು ಜನಾಂಗದವರು ಬಹುಸ್ಫೂರ್ತಿಯಿಂದ ಭಾಗವಹಿಸುತ್ತಾರೆ. ಇದೇ ಸಂದರ್ಭದಲ್ಲಿ ಆಸಕ್ತಿಯುತ ಜಾನಪದ ಚಟುವಟಿಕೆಗಳು ಜರಗುವುದರಿಂದ ಕುಟ್ಟ ಜಾತ್ರೆಯನ್ನು ಜಿಲ್ಲೆಯ ಪ್ರಮುಖ ಸಾಂಸ್ಕೃತಿಕ ಘಟನೆ ಎಂದು

---

* ಎಂ. ಜಿ. ನಾಗರಾಜ, "ಕುಂದಗಿರಿ, ದಕ್ಷಿಣ ಕೊಡಗಿನ ನಂದಿ", ಉದಯವಾಣಿ, 19-10-1980.

ಪರಿಗಣಿಸಲಾಗಿದೆ. ಕಟ್ಟದ ಸಮೀಪ (ಮೂರು ಕಿ.ಮೀ. ದೂರದಲ್ಲಿ) ಕರುಂಗಾಳಿ ವನದೇವತೆಯ ಗುಡಿಯಿದೆ. ಇದು ಸುರ್ಗಮವಾದ ಅರಣ್ಯದ ಮಧ್ಯದಲ್ಲಿ ಶಾಂತ ಪರಿಸರದಲ್ಲಿದೆ. ಒಂದು ಎತ್ತರವಾದ ಕಟ್ಟೆಯ ಮೇಲೆ ಛಾವಣಿ ರಹಿತ ಮಂಟಪ ದಲ್ಲಿ ತ್ರಿಶೂಲವನ್ನು ನಿಲ್ಲಿಸಿದ್ದಾರೆ. ಹಲವಾರು ಹರಕೆಯ ಆಯುಧಗಳಿಂದ ಆವೃತಗೊಂಡಿರುವ ಈ ಜಾಗದಲ್ಲಿ ಸಾವಿರಾರು ಕಪ್ಪು ಬಳೆಗಳನ್ನು ಇರಿಸಲಾಗಿದೆ. 'ಕರುಂಗಾಳಿ' ಅಥವಾ ವನದೇವತೆ ಎಂದು ಭಕ್ತಿಭಾವದಿಂದ ಈ ಸ್ಥಳದಲ್ಲಿ ಪೂಜೆ ನಡೆಸುತ್ತಾರೆ. ಬಳಿಯಲ್ಲೇ ಕಾಡು ಸಂಪಿಗೆ ಮರದ ಕೆಳಗೆ ಹಲವಾರು ಆಮೆಗಳನ್ನೂ ಮತ್ತು ಕೆಲವು ಮಣ್ಣಿನ ಶಿಲ್ಪಗಳನ್ನೂ ಇರಿಸಿದೆ. ಇಲ್ಲಿ ವರ್ಷಕ್ಕೊಮ್ಮೆ 15 ದಿನಗಳ ಭಾರಿ ಜಾತ್ರೆಯು ನಡೆಯುತ್ತದೆ.

**ಕುಮಾರಳ್ಳಿ**

ಸೋಮವಾರಪೇಟೆಯಿಂದ 21 ಕಿ.ಮೀ. ದೂರದಲ್ಲಿ ಅರಣ್ಯಾವೃತ್ತ ಪ್ರದೇಶದ ನಡುವೆ ಇರುವ ಕುಮಾರಳ್ಳಿಯು (ಸೋಮವಾರಪೇಟೆ ತಾಲೂಕು : ಜನಸಂಖ್ಯೆ: 834) ರಮ್ಯ ವಾದ ಪುಣ್ಯಕ್ಷೇತ್ರ. ಊರ ಹೊರಗೆ ರಸ್ತೆಯ ಬದಿಯಲ್ಲಿ ಏಳು ಕೊಲೆಗಲ್ಲುಗಳು ಕಂಡುಬರುತ್ತವೆ. ಈ ಕೊಲೆಗಲ್ಲುಗಳ ಸಂಪ್ರದಾಯವು ಸೋಮವಾರಪೇಟೆ ತಾಲೂಕಿನಲ್ಲಿ ಹೆಚ್ಚಾಗಿ ಇರುವಂತಿದೆ. ಕುಮಾರಳ್ಳಿಯಲ್ಲಿ 'ಸುಗ್ಗಿ ಕಟ್ಟೆ'ಯೆಂಬ ಎತ್ತರ ವಾದ ಉಯ್ಯಾಲೆ ಕಂಬಗಳು ಕಂಡುಬರುತ್ತವೆ. ಈ ಸುಗ್ಗಿ ಕಟ್ಟೆಯು ಕುಂದಳ್ಳಿ-ಹೆಗ್ಗಡೆ ಮನೆ ಹಾದಿಯಲ್ಲಿ ಕುಮಾರಳ್ಳಿ ಗ್ರಾಮದ ಪರಿಮಿತಿಯಲ್ಲಿದೆ. ಇದರ ಎತ್ತರ ಸುಮಾರು 20 ಅಡಿಗಳು ಮತ್ತು ಅಡ್ಡ ತೊಲೆಯ ಉದ್ದ ಸುಮಾರು 10 ಅಡಿಗಳು ಹಾಗೂ ನಾಗಶಿಲ್ಪವೂ ಜೊತೆಗಿದೆ. ಸ್ತಂಭದ ಪಶ್ಚಿಮ ಪಾರ್ಶ್ವದ ಬುಡದಲ್ಲಿ ತ್ರಿಶೂಲ, ಡಮರು, ಗದೆ ಮತ್ತು ಅಭಯಗಳನ್ನು ಹೊಂದಿರುವ ಚತುರ್ಭುಜ ಸ್ಥಾನಕ ಮೂರ್ತಿ ಗಳಾದ ದ್ವಾರಭದ್ರರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಉಗಾದಿಯ ನಂತರ 15 ದಿನಕ್ಕೆ ನಡೆಯುವ ಇಲ್ಲಿನ ಸುಗ್ಗಿ ದೇವರ ಹಬ್ಬದಲ್ಲಿ ದೀಪ, ಬತ್ತಗಳನ್ನಿಟ್ಟು, ಭದ್ರಕಾಳಿಯ ಮುಖವಾಡವಿಟ್ಟು ಪೂಜೆ ಸಲ್ಲಿಸುತ್ತಾರೆ. ಇದು ಕೊಡಗಿನ ಒಂದು ವಿಶೇಷ ಪದ್ಧತಿಯಾಗಿದ್ದು, ಕೇವಲ ಈ ಭಾಗದಲ್ಲಿ ವಾಸಿಸುತ್ತಿರುವ ಗೌಡ ಜನಾಂಗದವರು ಪ್ರಮುಖವಾಗಿ ಆಚರಿಸುತ್ತಾರೆ.* ಸುಗ್ಗಿಕಟ್ಟೆಯ ಕಲ್ಪನೆ ಹಾಗೂ ಆರಾಧನೆ ಕೊಡಗಿನ ಹಲವಾರು ಪ್ರಾಚೀನ ಸಂಪ್ರದಾಯಗಳಲ್ಲಿ ಒಂದೆಂದು ಹೇಳಬಹುದಾಗಿದೆ. ಪುಷ್ಪಗಿರಿ ಅಥವಾ ಸುಬ್ರಹ್ಮಣ್ಯ ಪರ್ವತ (5,626 ಅಡಿ ಎತ್ತರ)ವು ಕುಮಾರಳ್ಳಿಯಿಂದ ಎರಡು ಕಿ.ಮೀ. ದೂರದಲ್ಲಿದೆ. ಎರಡು ಪರ್ವತಗಳ ಉನ್ನತ ವಾದ ಸಮ್ಮಿಲನದ ಸಮತಟ್ಟಾದ ಮೈದಾನದಿಂದ ನಿಸರ್ಗವನ್ನು ವೀಕ್ಷಿಸಿದರೆ ಕಣ್ಮನ ಸೆಳೆಯುವ ಭೂ ವಿಸ್ತಾರದ ದೃಶ್ಯವು ಅತ್ಯಂತ ಮನಮೋಹಕವಾಗಿರುತ್ತದೆ. ಮೇಲ್ಭಾಗಕ್ಕೆ ಹತ್ತಿ ಹೋಗುವ ಮಾರ್ಗವು ತಡಿಯಂಡಮೋಳು ಬೆಟ್ಟಕ್ಕಿಂತಲೂ ಕಿರಿದಾದ ಅಂಕುಡೊಂಕಾದ ಮಾರ್ಗವಾಗಿದೆ. ಪುಷ್ಪಗಿರಿಯ ಪಾದದಲ್ಲಿರುವ ಹೆಗ್ಗಡೆಮನೆ-ಭಾಗತಿಯ ಮೂಲಕ ಕಾಲ್ನಡಿಗೆ ಯಲ್ಲಿ ಹೋದರೆ ಬೆಟ್ಟದ ಶಿಖರವು ಸುಮಾರು 10 ಕಿ. ಮೀ. ದೂರವಾಗುತ್ತದೆ. ಈಗ ಸಧ್ಯದಲ್ಲಿ ಹೆಗ್ಗಡೆಮನೆಯಿಂದ ಸುಬ್ರಹ್ಮಣ್ಯಕ್ಕೆ ಹೊಸ ರಸ್ತೆಯ ನಿರ್ಮಾಣ ಕಾರ್ಯ ನಡೆಯು ತ್ತಿದೆ; ಇದು ಪೂರ್ಣವಾದಲ್ಲಿ ಸುಬ್ರಹ್ಮಣ್ಯಕ್ಕೆ ಸೋಮವಾರ ಪೇಟೆಯಿಂದ ಅತ್ಯಂತ ಸಮೀಪ ಮಾರ್ಗವಾಗುತ್ತದೆ. ದಟ್ಟವಾದ ಅರಣ್ಯದಲ್ಲಿ ಕಾಡಾನೆಗಳ ಹಾಗೂ ಇತರೆ ವನ್ಯಪ್ರಾಣಿಗಳ ಭೀತಿಯ ಅಪಾಯಕಾರಿ ರಸ್ತೆಯಲ್ಲಿ ಹೋಗಬೇಕಾಗುತ್ತದೆ. ಪುಷ್ಪಗಿರಿಯ ಮೇಲ್ಭಾಗದಲ್ಲಿ ಹಲವಾರು ಹಿಂದೂ ಧಾರ್ಮಿಕ ಕಟ್ಟಡಗಳು ಹಾಗೂ ಕಲ್ಲಿನ ದಿಬ್ಬಗಳು ಕಾಣಸಿಗುತ್ತವೆ. ಪ್ರಸ್ತುತ ಒಂದು ಪುರಾತನ ಶಿವಲಿಂಗ ಇರುವ ಮತ್ತು ಇತ್ತೀಚೆಗೆ ನವೀಕರಿಸಲಾದ ಕಲ್ಲಿನ ದೇವಾಲಯವಿದೆ. ಭಕ್ತಾದಿಗಳು ಇಲ್ಲಿಗೆ ವಿಶೇಷವಾಗಿ ತುಲಾ ಸಂಕ್ರಮಣದಲ್ಲಿ ಪೂಜೆ ಸಲ್ಲಿಸಲು ತಂಡೋಪತಂಡವಾಗಿ ಬರುತ್ತಾರೆ. ಪುಷ್ಪ ಗಿರಿಯ ತುತ್ತ ತುದಿಗೆ ತುಲಾ ಸಂಕ್ರಮಣದಲ್ಲಿ ಭಕ್ತಾದಿಗಳು ಹೋಗಿ ಅಲ್ಲಿ ವಾಸವಿದ್ದು ಸಂಜೆಗೆ ಅಲ್ಲಿ ಇರುವ ಕಲ್ಲಿನ ವಿಶಾಲವಾದ ಹಣತೆಯಲ್ಲಿ ಡಬ್ಬಿಗಟ್ಟಲೆ ಎಣ್ಣೆ ಸುರಿದು ಪಂಚೆ ಯನ್ನು ಎಣ್ಣೆಯಲ್ಲಿ ನೆನೆಸಿ ಬತ್ತಿಯನ್ನಾಗಿ ಮಾಡಿ ಉಜ್ವಲ ವಾಗಿ ಉರಿಯುವಂತೆ ದೀಪವನ್ನು ಹಚ್ಚುತ್ತಾರೆ. ವಾರ್ಷಿಕ ವಾಗಿ ನಡೆಯುವ ಈ ಧಾರ್ಮಿಕ ಕ್ರಿಯೆಯನ್ನು ಭಕ್ತಿಯಿಂದ ಮಾಡಿದರೆ ಸಮೃದ್ಧವಾಗಿ ಮಳೆ ಬರುವುದೆಂದು ಭಕ್ತಾದಿಗಳು ನಂಬಿರುತ್ತಾರೆ. ಪುಷ್ಪಗಿರಿಯಲ್ಲಿ ರಾತ್ರಿಯಿಡೀ ಉರಿಯುವ ಈ ದೀಪವು ಸುತ್ತಲ ಹಳ್ಳಿಗಳ ಜನಕ್ಕೆ ಚೇತೋಹಾರಿಯಾಗಿರು ತ್ತದೆ. ಈ ಬೆಟ್ಟದ ತುದಿಯಲ್ಲಿ ಮೇಲ್ಪದರದಲ್ಲಿ ಅಪರೂಪಕ್ಕೆ ಸಿಗುವ ಷಡ್ಭುಜಾಕೃತಿಯ ಕುರಂದ (ಕೋರಂಡಂ-ಅಲ್ಯೂ ಮೀನಿಯಂಆಕ್ಸೈಡ್)ದ ಹರಳುಗಳನ್ನು ಭಾವುಕರು ಷಣ್ಮುಖನ

* ಎಂ. ಜಿ. ನಾಗರಾಜ್, ಕೊಡಗು ಜಿಲ್ಲೆಯ ಸುಗ್ಗಿ ಕಟ್ಟೆಗಳು, ಪುಟ 14.

ಅನುಗ್ರಹದ ಸೂಚಕವೆಂದು ಭಾವಿಸುತ್ತಾರೆ. ಬೆಟ್ಟದಿಂದ ಇಳಿದು ಬರುವ ದಾರಿಯಲ್ಲಿ ಕುಮಾರಧಾರಾ ನದಿಯು ಸಿಗುತ್ತದೆ. ಈ ನದಿಯು ಮುಂದೆ ಸ್ವಲ್ಪ ದೂರದಲ್ಲಿ ಹಾಸನ ಜಿಲ್ಲೆಯ ಮಂಜರಾಬಾದ್ ತಾಲೂಕಿಗೂ ಕೊಡಗಿಗೂ ನಡುವೆ ಕೊಡಗಿನ ಉತ್ತರ ಮೇರೆಯಾಗಿ ಬಿಸಿಲೆ ಘಾಟಿನ ಮೂಲಕ ಕಡಿದಾದ ಪ್ರದೇಶದಲ್ಲಿ ಹರಿದು ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ, ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಮುಂದು ವರಿದು, ದಕ್ಷಿಣ ಕನ್ನಡದ ಉಪ್ಪಿನಂಗಡಿಯ ಬಳಿ ನೇತ್ರಾವತಿ ನದಿಯನ್ನು ಸೇರುತ್ತದೆ.

### ಕುಶಾಲನಗರ

ಮಡಿಕೇರಿ-ಮೈಸೂರು ರಸ್ತೆಯಲ್ಲಿರುವ (ಸೋಮವಾರಪೇಟೆಯಿಂದ 28 ಕಿ.ಮೀ.) ವಿಶೇಷವಾಗಿ ವಿಕಾಸ ಹೊಂದುತ್ತಿರುವ ಪಟ್ಟಣ ಕುಶಾಲನಗರ (ಸೋಮವಾರಪೇಟೆ ತಾ||; ಜನಸಂಖ್ಯೆ : 6,936). ಇದು ಕಾವೇರಿ ನದಿಯ ಎಡ ದಂಡೆಯಲ್ಲಿದೆ. ಹೈದರ್‌ಅಲಿ ಈ ಸ್ಥಳದಲ್ಲಿ ಕೇಳಿದ ಯಾವುದೋ ಒಂದು ಸಂತಸದ ಸುದ್ದಿಯ ನೆನಪಿಗೆ ಇದನ್ನು 'ಕುಶಾಲನಗರ' ಎಂದು ಕರೆದನೆಂದು ಪ್ರತೀತಿ ಇದೆ. ಇದರ ಹಿಂದಿನ ಹೆಸರು ಮುಳ್ಳುಸೋಗೆ ಎಂದಿತ್ತು. ನಂತರ ಬ್ರಿಟಿಷರ ಕಾಲದಲ್ಲಿ ಕೊಡಗಿನ ಚೀಫ್ ಕಮೀಷನರ್ ಆಗಿದ್ದ ಕರ್ನಲ್ ಫ್ರೇಜರ್‌ನ ನೆನಪಿಗೆ ಫ್ರೇಜರ್‌ಪೇಟೆ ಎಂದು ಕರೆಯಲಾಯಿತು. ರಾಜ್ಯ ಪುನರ್ಘಟನೆಯ ನಂತರ ಪುನಃ ಈ ಪಟ್ಟಣಕ್ಕೆ ಕುಶಾಲನಗರವೆಂದೇ ನಾಮಕರಣವಾಯಿತು. ಊರ ಹೊರಗೆ ಕಾವೇರಿ ನದಿಯ ತೀರದಲ್ಲಿ ಟಿಪ್ಪು ಸುಲ್ತಾನನು ಕಟ್ಟಿದ ಕೋಟೆಯಿತ್ತು. ಊರಲ್ಲಿ ಆಂಜನೇಯ ಮಂದಿರವಿದೆ. 1789 ರಲ್ಲಿ ದೊಡ್ಡ ವೀರರಾಜೇಂದ್ರನು ಈ ಕೋಟೆಯನ್ನು ಟಿಪ್ಪುವಿನಿಂದ ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ಅಗ್ನಿಗೆಆಹುತಿ ಮಾಡಿದಾಗ ಕೋಟೆಯ ಬಹುತೇಕ ಭಾಗ ನಾಶವಾಯಿತು. ಮುಂದೆ 1846ರಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಸೇತುವೆಯ ಕಾರ್ಯ ನಡೆದಾಗ ಕೋಟೆಯ ಕಲ್ಲುಗಳನ್ನು ಬಳಸಲಾಯಿತು. ಈ ನಗರವು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೊಡಗಿನ ಹವಾಮಾನಮಾಪನದ ಮೂಲ ಕೇಂದ್ರವಾಗಿತ್ತು. ಇಲ್ಲಿ ಕೊಡಗಿನ ಇತರ ಭಾಗಗಳಿಗಿಂತ ಹವಾಮಾನ ಹಿತೋಷ್ಣದ್ದಾಗಿದೆ; ಮಳೆಯೂ ಪಶ್ಚಿಮಕ್ಕಿಂತ ಕಡಿಮೆ. ಈಗ ಊರಲ್ಲಿ ಒಂದು ಜಾಮಿಯಾ ಮಸೀದಿ ಇದೆ. ರೋಮನ್ ಕ್ಯಾಥೋಲಿಕ್ ಸಂಸ್ಥೆಯ ಸೈಂಟ್ ಸೆಬಾಸ್ಟಿಯನ್ ಚರ್ಚ್ ಇದೆ. ಈ ಚರ್ಚ್‌ನವತಿಯಿಂದ ಫಾತಿಮಾ ಪ್ರೌಢಶಾಲೆ ಫಾತಿಮಾ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳು ಕಾರ್ಯಾಚರಣೆಯಲ್ಲಿವೆ. ಸುಂಟಿಗುತ್ತಿ (ಸೋಮವಾರಪೇಟೆ ತಾಲೂಕು) ಕುಶಾಲನಗರದಿಂದ ಎರಡು ಕಿ.ಮೀ. ದೂರದಲ್ಲಿರುವ ಒಂದು ಸುಂದರ ಕಾವೇರಿ ದ್ವೀಪ ಮತ್ತು ಆಕರ್ಷಕ ವಿಹಾರಧಾಮ. ಕುಶಾಲನಗರದಿಂದ ಮಡಿಕೇರಿಗೆ ಹೋಗುವ ಮುಖ್ಯರಸ್ತೆಯಲ್ಲಿ ಒಂದು ಎತ್ತರವಾದ ಮರದ ಕಮಾನು ಎದುರಾಗುತ್ತದೆ. ಅದನ್ನೇ ಅನುಸರಿಸಿ ಸ್ವಲ್ಪದೂರ ಮುಂದೆ ಹೋದರೆ ಕಾವೇರಿ ನದಿಗೆ ಅಡ್ಡಲಾಗಿ ಹಾಕಿರುವ ತೂಗುಸೇತುವೆ ಎದುರಾಗುತ್ತದೆ. ಸುಮಾರು ದೂರದ ಈ ತೂಗುಸೇತುವೆಯ ಮೇಲೆ ನಡೆದು ಹೋಗುವುದೇ ಒಂದು ವಿಶೇಷ ಅನುಭವ. ಕೆಳಗಿನ ನದಿಯ ರಭಸ ಮತ್ತು ಸೇತುವೆಯು ತೂಗುಯ್ಯಾಲೆಯಂತೆ ಕಂಪಿಸುವ ಸನ್ನಿವೇಶಗಳಿಂದ ಜೋಲಿ ಹೊಡೆದಂತಾಗುತ್ತದೆ. ಕಾವೇರಿ ವಿಹಾರಧಾಮ ಎಂದು ಈಗ ಕರೆಯಲಾಗುವ ಈ ದ್ವೀಪದ ಹಿಂದಿನ ಹೆಸರು ಸುಂಟಿಗುತ್ತಿ. ಸುಮಾರು 4,500 ಅಡಿ (ಎಂ.ಎಸ್.ಎಲ್.) ಎತ್ತರದಲ್ಲಿದ್ದು ಬ್ರಹ್ಮಗಿರಿ ಶ್ರೇಣಿಯಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿಯು ಘಟ್ಟದ ಮೂಲಕ ಹರಿದು ಮೈದಾನ ಪ್ರದೇಶ ಪ್ರವೇಶಿಸುವಾಗ ಕುಶಾಲನಗರದ ಸಮೀಪ ಎರಡು ಭಾಗವಾಗಿ ಹರಿದು ಮತ್ತೆ ಒಂದಾಗಿ, ಹುಟ್ಟಿದ ನಾಡಾದ ಕೊಡಗಿಗೆ ಶಿರಂಗಾಲದಲ್ಲಿ ವಿದಾಯ ಹೇಳಿ ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಪ್ರಸ್ತುತ ಈ ವಿಹಾರಧಾಮದಲ್ಲಿ ಉಳಿಯಲು ಪ್ರವಾಸ ಇಲಾಖೆಯವರು ನಿರ್ಮಿಸಿರುವ ಹಲವಾರು ಗುಡಿಸಲುಗಳಿವೆ. ರಾಜ್ಯದ ಅರಣ್ಯ ಇಲಾಖೆಯವರು ಈ ಸ್ಥಳದಲ್ಲಿ ವಿಶೇಷವಾಗಿ ಜಿಂಕೆವನ ಮತ್ತು ಸುಂದರ ಉದ್ಯಾನವನ್ನು ನಿರ್ಮಿಸಿ ಇಡೀ ಪರಿಸರವನ್ನು ಆಕರ್ಷಕ ತಾಣವನ್ನಾಗಿ ಮಾಡಿದ್ದಾರೆ. ನಿಸರ್ಗದ ಸೌಂದರ್ಯವನ್ನು ಸವಿಯಲು ಅಲ್ಲಲ್ಲಿ ವೀಕ್ಷಣಾಲಯಗಳನ್ನು ನಿರ್ಮಿಸಿದ್ದಾರೆ.

### ಕೂಡಿಗೆ

ಕುಶಾಲನಗರದಿಂದ ಸುಮಾರು ಐದು ಕಿ. ಮೀ. ದೂರದಲ್ಲಿರುವ ಕೂಡಿಗೆ (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 3,694) ರಾಜ್ಯದ ಒಂದು ಮುಖ್ಯವಾದ ಹೈನುಗಾರಿಕೆಯ ಕೇಂದ್ರ. ಇದನ್ನು ಕೃಷಿ ಮತ್ತು ಹೈನು ಅಭಿವೃದ್ಧಿಗೋಸ್ಕರ ಒಂದು ಮಾದರಿ ಕೇಂದ್ರವನ್ನಾಗಿ ರಾಜ್ಯ ಸರಕಾರ ಪರಿವರ್ತನೆಗೊಳಿಸಿದೆ. ಸುಮಾರು 500 ಎಕರೆಯ ವಿಶಾಲವಾದ ಪ್ರದೇಶದಲ್ಲಿ ಕೃಷಿಗಾರಿಕೆಯಲ್ಲಿ ವಿವಿಧ ಧಾನ್ಯಗಳ ಉತ್ಪಾದನೆಯಲ್ಲಿ ಅಂದರೆ ಬತ್ತ, ರಾಗಿ ಮುಂತಾದವುಗಳನ್ನು ಬೆಳೆಸಲು ಕೃಷಿ ಇಲಾಖೆಯು ಯಶಸ್ವಿಯಾಗಿ ಪ್ರಯೋಗಗಳನ್ನು ಇಲ್ಲಿ ನಡೆಸಿದೆ. ಕೂಡಿಗೆಯಲ್ಲಿ 1956ರಲ್ಲಿ ಚಾಲನೆಗೊಂಡ ಕೃಷಿ ಉಪಾಧ್ಯಾಯರ ತರಬೇತಿ ಸಂಸ್ಥೆಯು (ಆರ್.

ಡಿ. ಟಿ. ಸಿ.) ಈ ದಿಸೆಯಲ್ಲಿ ಉತ್ತಮ ಕಾರ್ಯವನ್ನು ಮಾಡಿರುವುದಲ್ಲದೇ ರೆಡ್‌ಡೇನ್ ಪ್ರಾಜೆಕ್ಟ್, ಕೋಳಿಸಾಕಣೆ ಹೈನು ಅಭಿವೃದ್ಧಿ, ರೇಷ್ಮೆ ಕೃಷಿ ಹಾಗೂ ಮಣ್ಣು ಆರೋಗ್ಯ ಕೇಂದ್ರ ಮುಂತಾದ ಅಂಗಗಳನ್ನು ಆರಂಭಿಸಿದೆ. ಇಲ್ಲಿಯ ಕೇಷ್ಮೆಗೂಡು ಕೃಷಿಯಲ್ಲಿ ಮಾಡುತ್ತಿರುವ ಉತ್ಪಾದನೆಯ ಬಹುತೇಕ ಭಾಗವನ್ನು ಮೈಸೂರಿನ ಸರಕಾರಿ ರೇಷ್ಮೆ ಘಟಕಕ್ಕೆ ಕಳುಹಿಸಲಾಗುತ್ತದೆ. ಸರಕಾರದ ಹೈನು ಅಭಿವೃದ್ಧಿಯ ಮೂಲ ಕೇಂದ್ರವಾಗಿ ಬೆಳೆದ ಕೊಡಿಗೆಯಲ್ಲಿ ಕರ್ನಾಟಕ ಹಾಲು ಉತ್ಪಾದಕರ ಕೇಂದ್ರ ಸಂಸ್ಥೆಯು ಕಾರ್ಯ ನಿರ್ವಹಿಸು ತ್ತಿದೆ. ಕೊಡಗಿನ ಕೆಲವು ನಗರ ಕೇಂದ್ರಗಳಿಗೆ ಹಾಲು ಸರಬರಾಜು ಮಾಡುತ್ತಿರುವ ಈ ಕೇಂದ್ರದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳಿವೆ (ಅಧ್ಯಾಯ ನಾಲ್ಕು ನೋಡಿ). ಇದರ ಅಂಗಸಂಸ್ಥೆಯಾಗಿ ಕೃತಕ ಹೈನು ಅಭಿವೃದ್ಧಿ ಸಂಸ್ಥೆಯು 1952 ರಲ್ಲಿಯೇ ಕಾರ್ಯರೂಪಕ್ಕೆ ಬಂದಿತು. ಹಸುಗಳಿಗೆ ಅವಶ್ಯಕವಾದ ಆಹಾರ ಸಂಶೋಧನಾ ಕೇಂದ್ರವೂ ಸಹ ಇದೇ ಊರಿನಲ್ಲಿ 1954 ರಿಂದ ಚಾಲನೆಯಲ್ಲಿದೆ. ಕೊಡಿಗೆಯಲ್ಲಿ ವಸತಿ ಕ್ರೀಡಾ ಪ್ರೌಢಶಾಲೆಯೂ ಸಹ ಇದೆ. ಈ ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾದ ಜುಮ್ಮಾ ಮಸೀದಿ ಇದೆ. ಇಲ್ಲಿ ಒಂದು ಸುಬ್ರಹ್ಮಣ್ಯ ದೇವಾಲಯವಿದೆ. ಇಲ್ಲಿನ ಕಾಫಿ ಸಂಸ್ಕರಣ ಘಟಕವು ಪ್ರೇಕ್ಷಣೀಯವಾಗಿದೆ. ಈ ಊರಲ್ಲಿ ವೀರರಾಜಪೇಟೆ ಶ್ರೀ ಕಾವೇರಿ ಆಶ್ರಮದ ಶಾಖೆಯಾದ ಶ್ರೀ ಕೃಷ್ಣಾಶ್ರಮವಿದೆ.

### ಕೊಡ್ಲಿಪೇಟೆ

ಸೋಮವಾರಪೇಟೆಯಿಂದ 30 ಕಿ. ಮೀ. ದೂರದಲ್ಲಿರುವ ಕೊಡ್ಲಿಪೇಟೆಯು (ಸೋಮವಾರಪೇಟೆ ತಾಲೂಕು ; ಜನ ಸಂಖ್ಯೆ : 2,254) ಕೊಡಗಿನ ಉತ್ತರದ ಮೇರೆಯ ಅಂಚಿ ನಲ್ಲಿರುವ ಒಂದು ಪಟ್ಟಣ. ಸಕಲೇಶಪುರ–ಅರಕಲಗೂಡು ರಸ್ತೆಯು ಕೊಡಗಿನ ಅಂಚಿನಲ್ಲಿ ಹಾದು ಹೋಗುವಾಗ ಕೊಡ್ಲಿ ಪೇಟೆಯ ಮೂಲಕ ಹೋಗುತ್ತದೆ. ಹಾಸನ ಜಿಲ್ಲೆಗೂ ಕೊಡಗಿಗೂ ಇರುವ ಕಾಫಿ ಮತ್ತು ಏಲಕ್ಕಿಯ ಉತ್ಪಾದನೆ ಹಾಗೂ ಮಾರಾಟದ ಸಂಪರ್ಕಕ್ಕೆ ಕೊಡ್ಲಿಪೇಟೆ ಹಾಗೂ ಸಮೀಪವೇ ಇರುವ ಶನಿವಾರಸಂತೆ ಮಧ್ಯಮ ಕೇಂದ್ರಗಳೆಂದು ಜನಪ್ರಿಯತೆ ಗಳಿಸಿವೆ. ಪೌರಾಣಿಕವಾಗಿ, ಪರಶುರಾಮನು ಕೊಡಲಿಯನ್ನು ಎಸೆದಾಗ ಅದು ಬಂದು ಬಿದ್ದಿದ್ದು ಈ ಸ್ಥಳ ದಲ್ಲೇ ಎಂಬ ನಂಬಿಕೆಯಿಂದ ಈ ಸ್ಥಳಕ್ಕೆ 'ಕೊಡ್ಲಿಪೇಟೆ' ಎಂಬ ಹೆಸರು ಬಂದಿತೆಂದು ಪ್ರತೀತಿ ಇದೆ. ಊರಿನ ಮಧ್ಯಭಾಗದಲ್ಲಿ ಬಸವೇಶ್ವರ ದೇವಾಲಯವಿದೆ. ಇದನ್ನು ಮೂಲತಃ ಕೆಳದಿಯ ಶಿವಪ್ಪನಾಯಕನು ಕಟ್ಟಿಸಿದನೆಂದು ಹೇಳುತ್ತಾರೆ. ಗರ್ಭಗೃಹದ ಮರದ ಬಾಗಿಲುವಾಡದ ಲಲಾಟದಲ್ಲಿ ಗಂಡಭೇರುಂಡದ ಉಬ್ಬು ಶಿಲ್ಪವಿದೆ. ಮುಂದೆ ದೇವಾಲಯವು ವಿಸ್ತರಣೆ, ದುರಸ್ತಿಗಳಿಗೆ ಒಳಗಾಗಿದೆ. ಈ ದೇವಾಲಯದ ವೈಶಿಷ್ಟ್ಯ ನಂದಿಯನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವುದೇ ಆಗಿದೆ. ಗರ್ಭಗೃಹದ ಮುಂಭಾಗದಲ್ಲಿರುವ ಪಡಸಾಲೆಯಲ್ಲಿ ಉತ್ತಮ ಕೆತ್ತನೆಯಿರುವ ಎರಡು ಮರದ ಸ್ತಂಭಗಳಿವೆ. ಇಲ್ಲಿ ಗೋಡೆಗಳ ಮೇಲೆ ಈಚೆಗೆ ಬರೆಯಿಸಿದ ದುರ್ಗಾ, ಅಕ್ಕ ಮಹಾದೇವಿ, ಅನುಭವ ಮಂಟಪ, ಸಿದ್ಧಲಿಂಗ ಯತಿ, ಶಿವ–ಪಾರ್ವತಿಯರು ಗಣೇಶ ಹಾಗೂ ಶಿವಲಿಂಗವನ್ನು ಪೂಜಿಸು ತ್ತಿರುವ ಕಾರ್ತಿಕೇಯನ ಜೊತೆಗಿರುವುದು, ಮುಂತಾದ ದೃಶ್ಯ ಗಳಿವೆ. ಊರಿನಲ್ಲಿ ಕನ್ನಂಬಾಡಿಅಮ್ಮ, ಮಳೆಯ ಮಲ್ಲೇಶ್ವರ, ಗೋಪುರ ಬಸವಣ್ಣ ಮತ್ತು ವಿಘ್ನೇಶ್ವರ, ಪುರಾತನವೆಂದು ಹೇಳಲಾಗುವ ರಾಮದೇವರು (ಪರಶುರಾಮ) ಮತ್ತು ಚಿಕ್ಕ ದಾದ ರಾಮಲಿಂಗೇಶ್ವರ ಗುಡಿಗಳೂ ಇವೆ. ಈ ಊರಿನ ಸಮೀಪ (ಒಂದು ಕಿ. ಮೀ.) ವಿರುವ ದೊಡ್ಡಕೊಡಲಿಯಲ್ಲಿ ಪುರಾತನವಾದ ಸಿದ್ಧಗಂಗಾ ಸಂಸ್ಥೆಗೆ ಸೇರಿದ ಸೋಮಪ್ಪ ಕಲ್ಲುಮಠ ಹಾಗೂ ಊರು ಮಠ ಇವೆ. ಇದರ ಸಮೀಪವೇ ಮುರುಘ ಸಂಪ್ರದಾಯದ ಕಲ್ಲಹಳ್ಳಿಮಠ ಮತ್ತು ವೀರಭದ್ರ ಸ್ವಾಮಿ ಗದ್ದುಗೆ ಇದೆ. ಸೋಮಪ್ಪ ಮಠದ ಸ್ಥಾಪಕರಾದ ಸೋಮಪ್ಪ ಯೋಗಿಯು ಪುಷ್ಪಗಿರಿಯಲ್ಲಿ ಐಕ್ಯರಾದರೆಂದು ಪ್ರತೀತಿ ಇದೆ. ಇದೇ ರೀತಿ ಸುಮಾರು ಮೂರು ಕಿ. ಮೀ. ದೂರದಲ್ಲಿರುವ ಕಿರಿಕೊಡಲಿಯಲ್ಲಿ ಮತ್ತೊಂದು ಸಿದ್ಧಗಂಗಾ ಸಂಪ್ರದಾಯದ ವೀರಶೈವ ಮಠವು ಇದೆ. ಕೊಡ್ಲಿಪೇಟೆಯಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿ ಇದ್ದು, ಎತ್ತರವಾದ ಮಿನಾರ್‌ಗಳು ಹಾಗೂ ಗೋಲಾಕಾರವಾದ ಗೋಪುರಗಳನ್ನು ಹೊಂದಿದೆ.

### ಗರ್ಗಂದೂರು

ಸೋಮವಾರಪೇಟೆಯಿಂದ 24 ಕಿ. ಮೀ. ದೂರದಲ್ಲಿರುವ ಗರ್ಗಂದೂರು (ಸೋಮವಾರಪೇಟೆ ತಾಲೂಕು : ಜನಸಂಖ್ಯೆ : 2,071) ಒಂದು ಪುರಾತನ ಸ್ಥಳ. ಈ ಊರಿನಾದ್ಯಂತ ವೀರಗಲ್ಲುಗಳು ಹಾಗೂ ಹಳೆಯ ಅವಶೇಷಗಳು ಕಾಣಸಿಗು ತ್ತವೆ. ಊರಿನ ಹೊರಗೆ ಗದ್ದೆಯ ಬಯಲಿನಲ್ಲಿ ಇದ್ದ ಎರಡು ವೀರಗಲ್ಲುಗಳಲ್ಲಿ ಒಂದನ್ನು ಮಡಿಕೇರಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿಡಲಾಗಿದೆ ಎಂದು ಸ್ಥಳೀಯರು ಹೇಳು ತ್ತಾರೆ. ಈ ಊರ ಸಮೀಪವೇ ಮಣ್ಣಿನ ಕೋಟೆಯ ಅವಶೇಷಗಳಿವೆ. ಹಾಗೂ ಈ ಕೋಟೆಯು ಬಹುಶಃ ಚೆಂಗಾಳ್ವರ ಕಾಲದಲ್ಲಿ ನಿರ್ಮಿತವಾಗಿರಬಹುದೆಂದು ಹೇಳ ಲಾಗಿದೆ. ಇದರೊಳಗೆ ಪ್ರವೇಶಿಸಿದರೆ ಸುಮಾರು ಐದು

ಎಕರೆ ವಿಶಾಲವಾದ ಬಯಲು ಪ್ರದೇಶವಿದೆ. ಇದರ ಹೊರ ಭಾಗದ ಗೋಡೆಯ ಅಂಚಿನಲ್ಲಿ ಕಂದಕವಿದೆ. ಜಂಬಿಟ್ಟಿಗೆಯ ತಳಪಾಯವಿರುವ ದೇವಾಲಯದ ಅವಶೇಷವು ಕೋಟೆಯ ನಡುವೆ ಇದೆ. ಇದರ ಎದುರಿಗೆ ಕಲ್ಲಿನ ಎತ್ತರವಾದ ಅಷ್ಟ ಕೋನಾಕಾರದ ಧ್ವಜಸ್ತಂಭವಿದೆ. ಅದರ ಮೇಲ್ಭಾಗದಲ್ಲಿ ಅರಳಿದ ಕಮಲದ ಹೂವಿನ ಹಾಗೂ ಕಾಂಡದಲ್ಲಿ ಆನೆ, ಕುದುರೆ, ಸಿಂಹ ಮತ್ತು ಹಂಸಗಳ ಉಬ್ಬು ಶಿಲ್ಪಗಳಿವೆ. ಮಾದಾಪುರದ ನದಿಯ ದಂಡೆಯಲ್ಲಿ ಕಲ್ಲಿನಿಂದ ನಿರ್ಮಿಸಲಾಗಿರುವ ಶಿವಾಲಯವೊಂದು ಕಂಡುಬರುತ್ತದೆ. ಮಾದಾಪುರ ಮತ್ತು ಹಟ್ಟಿಹೊಳೆಗಳು ಇಲ್ಲಿ ಸಂಗಮವಾಗಿ ಹಾರಂಗಿ ಹೊಳೆಯಾಗಿ ಮುಂದೆ ಹರಿಯುತ್ತದೆ. ಇದರ ಆಚೆಯ ದಡದಲ್ಲಿ ಪ್ರಾಚೀನ ಕಾಲದ ಮಲ್ಲಿಕಾರ್ಜುನ ದೇವಾಲಯವಿದೆ. ಇದಕ್ಕೆ ಗರ್ಭಗೃಹ, ಅರ್ಧಮಂಟಪ ಹಾಗೂ ಮುಕ್ತ ಮುಖಮಂಟಪವಿದೆ. ಮುಖಮಂಟಪದಲ್ಲಿ ಎತ್ತರವಾದ ಸ್ತಂಭಗಳ ಸುಂದರ ರಚನೆಯಿದೆ. ಬಹುಶಃ ಗಂಗರ ಕಾಲದಲ್ಲಿ ಮೊದಲು ನಿರ್ಮಿತವಾಗಿರಬಹುದಾದ ಈ ದೇವಾಲಯ ಕಟ್ಟಡವನ್ನು ಕ್ರಿ. ಶ. 18ನೇಯ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿದಂತಿದೆ. ಈ ನದಿಯ ತೀರಪ್ರದೇಶವು ಬಹಳ ಆಕರ್ಷಕವಾಗಿದೆ. ಆಚೆಯ ದಡದಲ್ಲಿ ಸುಂದರ ಹೂವಿನ ತೋಟವನ್ನು ಇತ್ತೀಚೆಗೆ ಬೆಳೆಸಲಾಗಿದೆ.

### ಗಣಗೂರು

ಸೋಮವಾರಪೇಟೆಯಿಂದ 13 ಕಿ.ಮೀ. ದೂರದಲ್ಲಿರುವ ಗಣಗೂರು (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ 583) ಒಂದು ಐತಿಹಾಸಿಕ ಸ್ಥಳ. ಇದೇ ಊರಿನಲ್ಲಿರುವ ಚೆಂಗಾಳ್ವರ ಕಾಲದ ಶಾಸನದಲ್ಲಿ ಈ ಸ್ಥಳವನ್ನು ‘ಗಣಗೂರು’ ಎಂದೇ ಉಲ್ಲೇಖಿಸಲಾಗಿದೆ. ಈ ಊರಿನಲ್ಲಿ ಪ್ರಾಚೀನ ಕಟ್ಟಡಗಳೇನೂ ಕಂಡಬರದೇ ಇದ್ದರೂ ಅಧಿಕ ಸಂಖ್ಯೆಯಲ್ಲಿ ವೀರಗಲ್ಲುಗಳು ಕಾಣಸಿಗುತ್ತವೆ. ಗ್ರಾಮದ ಹೊರಗೆ ತೋಟದಲ್ಲಿ ಒಂದು ಆಕರ್ಷಕ ಕೆತ್ತನೆಯುಳ್ಳ ಗಂಗರ ಕಾಲದ ವೀರಗಲ್ಲಿನ ಕೆಳಭಾಗದ ಹಂತದಲ್ಲಿ ಒಬ್ಬ ವೀರನು ಕೈಮುಗಿದು ತಲೆಬಾಗಿಸಿ ಕುಳಿತಿರುವನು; ಇನ್ನೊಬ್ಬ ವ್ಯಕ್ತಿಯು ಆತನ ಪಕ್ಕದಲ್ಲಿ ನಿಂತು ತಲೆಕಡಿಯಲು ಖಡ್ಗವನ್ನು ಮೇಲಕ್ಕೆ ಎತ್ತಿರುವಂತೆ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಮಧ್ಯದ ಹಂತದಲ್ಲಿ ದೋಣಿ ಆಕಾರದ ವಿಮಾನವನ್ನು ಗಂಗರ ಶೈಲಿಯ ವೃತ್ತಾಕಾರವಾದ ಕಂಬಗಳನ್ನು ಅಳವಡಿಸಿ ಛಾವಣಿಯೊಂದಿಗೆ ಕೆತ್ತಲಾಗಿದೆ. ಈ ವೀರಗಲ್ಲಿನ ಅಂಚಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಗಂಗರ ಕಾಲದ (ಸು. 10ನೇಯ ಶತಮಾನದ) ಲಕ್ಷಣವುಳ್ಳ ಶಾಸನವಿದೆ. ಇದರ ಪ್ರಕಾರ ರಣಿಮೊಳಗನೆಂಬ ಒಬ್ಬ ಅಧಿಕಾರಿಯ ತಮ್ಮನಾದ ಲಲ್ಲುಗನೆಂಬ ವೀರನು ತಲೆಕೆಡಿಸಿಕೊಂಡು ಸತ್ತಿರುವುದನ್ನು ತಿಳಿಸುತ್ತದೆ. ಆದರೆ, ಯಾವ ಕಾರಣಕ್ಕೆ ಈ ಕ್ರಿಯೆ ನಡೆಯಿತೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಇದರ, ಸಮೀಪವೇ ಮನೆಯೊಂದರ ಹಿಂದೆ ಒಂದು, ಹಾಗೂ ಖಾಸಗಿ ತೋಟವೊಂದರಲ್ಲಿ ಮತ್ತೊಂದು ವೀರಗಲ್ಲುಗಳಿವೆ. ಸ್ವಲ್ಪ ದೂರದಲ್ಲಿ, ಹಳೇ ಗ್ರಾಮದ ನಿವೇಶನದಲ್ಲಿ ಆಲದ ಮರದ ಕೆಳಗೆ ಮೂರು ಶಾಸನದ ಕಲ್ಲುಗಳಿವೆ. ಹಾಗೂ ಅದೇ ಸ್ಥಳದಲ್ಲಿ ಪುರಾತನ ದೇವಾಲಯವೊಂದರ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡು ಬರುತ್ತದೆ. ಈ ಶಾಸನಗಳ ಪೈಕಿ ಮೂರು ಪ್ರಕಟಿತ ಶಾಸನಗಳು. ಮೊದಲನೇಯದು ಕ್ರಿ.ಶ. 1597ಕ್ಕೆ ಸೇರಿದ್ದು, ಬಹುಪಾಲು ಅಳಿಸಿಹೋಗಿದೆ. ಇದರ ಪ್ರಕಾರ ನಂಜರಾಜಪಟ್ಟಣವನ್ನು ಆಳುತ್ತಿದ್ದ ಚೆಂಗಾಳ್ವರ ವಂಶದ ಶ್ರೀಕಂಠರಾಜಯ್ಯನ ಮಗನಾದ ರುದ್ರಗಣನು ತನ್ನ ತಂದೆ-ತಾಯಿಯ ಕೈಲಾಸ ಪ್ರಾಪ್ತಿಗಾಗಿ ಭೂಮಿಯನ್ನು ಕೊಡುಗೆಯಾಗಿ ನೀಡಿದುದರ ವಿವರಗಳಿವೆ. ಊರ ಬಾಗಿಲ ಬಳಿ ನಿಂತಿರುವ ಎರಡನೇಯ ಶಾಸನದಲ್ಲಿನ ಅಕ್ಷರಗಳು ಸುಮಾರು 13ನೇಯ ಶತಮಾನದ ಲಕ್ಷಣಗಳನ್ನು ಹೋಲುತ್ತದೆ; ಮತ್ತು ಇದರ ಪ್ರಕಾರ ಗುಂದನಾಡು-70 ರಲ್ಲಿ ವಾಸಿಸುತ್ತಿರುವವರಲ್ಲಿ ಯಾರಿಗಾದರೂ ಗಂಡು ಮಕ್ಕಳಿಲ್ಲದ ಪಕ್ಷದಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿ-ಪಾಸ್ತಿ ಸೇರಬೇಕು ಎಂದಿದ್ದು, ಈ ದಾಖಲೆಯಲ್ಲಿ ಮಹಾಪ್ರಧಾನ ಪಡಿಯರ ಬಾಣಮಹಾರಾಜನ ಹೆಸರನ್ನು ಉಲ್ಲೇಖಿಸಲಾಗಿದೆ. ಈತನ ಮಗನಾದ ಹೆಗ್ಗಡೆನಾಕಣ್ಣನೆಂಬುವನು ಈ ಶಾಸನವನ್ನು ಬರೆದನೆಂದು ಮತ್ತು ಇದನ್ನು ಬಮ್ಮೋಜನೆಂಬ ಶಿಲ್ಪಿಯು ಕೆತ್ತಿದನೆಂದು ತಿಳಿಸುತ್ತದೆ. ಇದರ ಸಮೀಪವೇ ಇರುವ ಮೂರನೇಯ ಶಾಸನವು ಕ್ರಿ.ಶ. 12ನೇಯ ಶತಮಾನಕ್ಕೆ ಸೇರಿದ್ದು, ಲಿಪಿಯು ಸ್ಪಷ್ಟವಾಗಿಲ್ಲ. ಇದು ಕೊಂಗಾಳ್ವರಾಜನಾದ ವೀರಚೋಳ ಕೊಂಗಾಳ್ವ ದೇವನ ಒಬ್ಬ ಅಧಿಕಾರಿವೊಡೆಯಪ್ಪನ ಮಗ ಹೊನ್ನಪ್ಪಯ್ಯನಿಗೆ ನೀಡಿದ ಕೆಲವು ದಾನಗಳ ಬಗೆಗೆ ತಿಳಿಸುತ್ತದೆ. ಊರಬಾಗಿಲ ಪಕ್ಕದಲ್ಲಿರುವ ಮೂರನೇಯ ಶಾಸನವೂ ಸಹ ಮೇಲೆ ಹೆಸರಿಸಲಾಗಿರುವ ಬಮ್ಮೋಜನ (13ನೇಯ ಶತಮಾನ) ಕಾಲಕ್ಕೇ ಸೇರುತ್ತದೆ. ಇದರಲ್ಲಿ ಬಮ್ಮೋಜನ ಅಳಿಯನಾದ ಗಂಗೋಜನು ಈ ಶಾಸನವನ್ನು ಕೆತ್ತಿದನೆಂದು ತಿಳಿಸುತ್ತದೆ. ಊರಿನ ಮುಂದೆ ರಸ್ತೆಯ ಪಕ್ಕದಲ್ಲಿ ಬಿದ್ದಿರುವ ತುಂಡು ಕಲ್ಲಿನ ಮೇಲಿರುವ ಶಾಸನವು ಕ್ರಿ.ಶ. 11ನೇಯ ಶತಮಾನಕ್ಕೆ ಸೇರುತ್ತದೆ. ಇದರ ಪ್ರಕಾರ ತ್ರಿಭುವನಮಲ್ಲ ಚೋಳ ಕೊಂಗಾಳ್ವನು ಆಳುತ್ತಿರುವಾಗ ಒಬ್ಬ ಅಧಿಕಾರಿ (ಹೆಸರು ತಿಳಿಯುವುದಿಲ್ಲ)ಯ

ಸಾವಿನ ಬಗೆಗೆ ದಾಖಲಿಸಿ 'ಪರೋಕ್ಷ ವಿನೇಯ' ಎಂಬ ಧಾರ್ಮಿಕ ಕ್ರಿಯೆಯನ್ನು ಆತನ ಸ್ಮರಣೆಗೆ ಮಾಡಿದುದರ ಬಗೆಗೆ ಉಲ್ಲೇಖಿಸುತ್ತದೆ. ಈ ಸ್ಥಳದಿಂದ ಸ್ವಲ ದೂರದಲ್ಲಿ ಚಿಕ್ಕದಾದ ಹೆಂಚಿನ ಮಲ್ಲೇಶ್ವರ ಗುಡಿಯಿದೆ. ಗಣಗೂರಿನ ಸಮೀಪವೇ ಉಂಜಿಗನಹಳ್ಳಿಯಲ್ಲಿ 18 ಅಥವಾ 19ನೇಯ ಶತಮಾನದಲ್ಲಿ ನಿರ್ಮಿಸಲಾಗಿರುವ ಮೂಲಸ್ಥಾನದ ಈಶ್ವರ ದೇವಾಲಯವಿದೆ. ಇದರಲ್ಲಿ ಒಂದು ಭೈರವ ಮೂರ್ತಿ ಇದೆ; ಮತ್ತು ಮುಂಭಾಗದಲ್ಲಿ ಕಲ್ಯಾಣಿ ಹಾಗೂ ಹಸು–ಕರು ಇರುವ ಒಂದು ಕಲ್ಲು ಚಪ್ಪಡಿಯಿದೆ.

**ಗರವಾಲೆ**

ಮಾದಾಪುರದಿಂದ ಎಂಟು ಕಿ.ಮೀ. ದೂರದಲ್ಲಿರುವ ಗರವಾಲೆ (ಸೋಮವಾರಪೇಟೆ ತಾಲೂಕು) ಕೊಡಗಿನ ರಾಜರ ಒಂದು ಮುಖ್ಯವಾದ ನೆಲೆಯಾಗಿತ್ತು. ದೊಡ್ಡವೀರ ರಾಜೇಂದ್ರನು ಟಿಪ್ಪುಸುಲ್ತಾನನನ್ನು ಸೋಲಿಸಿ ಕೊಡಗನ್ನು ವಶಪಡಿಸಿಕೊಂಡ ಮೇಲೆ ತನ್ನ ಸಹೋದರನಾದ ಅಪ್ಪಾಜಿ ರಾಜನನ್ನು ಕಡಿಯತ್ತು ನಾಡಿನಿಂದ ಕರೆಸಿ ಗಡಿನಾಡು, ಹಾರಂಗಿ, ಐರಳಿ ಸ್ಥಳಗಳನ್ನು ಜಹಗೀರಾಗಿ ಕೊಟ್ಟು, 1804 ರಲ್ಲಿ ಗರವಾಲೆಯಲ್ಲಿ ಅರಮನೆ ಕಟ್ಟಿಸಿದನೆಂದು ತಿಳಿದು ಬರುತ್ತದೆ. ಮುಂದೆ ತನ್ನ ವಿರುದ್ಧ ಪಿತೂರಿ ನಡೆಸುತ್ತಿದ್ದನೆಂದು ಅಪ್ಪಾಜಿ ರಾಜನನ್ನು ದೊಡ್ಡವೀರರಾಜೇಂದ್ರನು ಕೊಲೆ ಮಾಡಿಸಿದನು. ಆಗ ಗರವಾಲೆ ಜಹಗೀರಿನ ಪೂರ್ಣ ಜವಾಬ್ದಾರಿಯನ್ನು ಲಿಂಗರಾಜನಿಗೆ ವಹಿಸಿಕೊಡಲಾಯಿತು. ಅನಂತರ 1816 ರಲ್ಲಿ ಅಪ್ಪಾಜಿ ರಾಜನ ಹಿರೇಮಗ ವೀರ ರಾಜನು ಇದೇ ಅರಮನೆಯಲ್ಲಿ ವಾಸವಾಗಿದ್ದನೆಂದು ತಿಳಿದು ಬರುತ್ತದೆ. ಕಾಲಕ್ರಮೇಣ ಕೊಡಗಿನ ಆಳ್ವಿಕೆಯು ಬ್ರಿಟಿಷರ ಹತೋಟಿಗೆ ಬಂದ ಮೇಲೆ ಗರವಾಲೆ ಅರಮನೆಯು ಶಿಥಿಲ ವಾಗತೊಡಗಿತು. ಪ್ರಸ್ತುತ ಅರಮನೆಯಿದ್ದ ಸ್ಥಳವು ಗರವಾಲೆಯಿಂದ ಪ್ರೌಢಶಾಲೆಗೆ ಹೋಗುವ ದಾರಿಯಲ್ಲಿ ಎಡ ಭಾಗಕ್ಕೆ ಇದೆ. ಅರಮನೆಯ ಹೆಬ್ಬಾಗಿಲಿನ ಭಾಗಗಳು ಬಿದ್ದು ಹೋಗಿದ್ದರೂ ಹತ್ತಿಹೋಗಲು ಮೆಟ್ಟಿಲುಗಳು ಕಂಡುಬರುತ್ತದೆ. ಇಡೀ ಜಾಗದಲ್ಲಿ ಗಿಡಮರಗಳು, ಮುಳ್ಳಿನ ಬಳ್ಳಿಗಳು ಬೆಳೆದುಕೊಂಡಿವೆ. ಹಾಗೆಯೇ ಮೇಲೆ ಹತ್ತಿಹೋದರೆ ಹಾಳು ಬಿದ್ದು ಭಾಗಶಃ ನಿಂತಿರುವ ಜಂಬಿಟ್ಟಿಗೆಯ ಗೋಡೆಗಳು, ಮೆಟ್ಟಿಲುಗಳ ಪಕ್ಕದಲ್ಲಿರುವ ತಾಳವಾರಗಳು, ಬಸವನಿರುವ ಎತ್ತರವಾದ ಕಂಬ ಮುಂತಾದ ಅವಶೇಷಗಳು ಕಾಣಸಿಗುತ್ತವೆ. ಈ ಜಾಗವನ್ನು ಸರಿಯಾಗಿ ಪರಿಶೀಲನೆ ಮಾಡಿದರೆ ಇನ್ನೂ ಅನೇಕ ಹೊಸ ವಿಷಯಗಳು ಗೋಚರವಾಗುತ್ತದೆನ್ನಬಹುದು.

ಈ ಅರಮನೆಯ ಎದುರು ಭಾಗದಲ್ಲಿ ಇತ್ತೀಚಿಗೆ ಪ್ರಾರಂಭಿಸಲಾದ ಜೇನು ಮಾರಾಟ ಕೇಂದ್ರವಿದೆ.

**ಗೋಣಿಕೊಪ್ಪಲು**

ವೀರರಾಜಪೇಟೆಯಿಂದ 16 ಕಿ. ಮೀ. ದೂರದಲ್ಲಿರುವ ಗೋಣಿಕೊಪ್ಪಲು (ವೀರರಾಜಪೇಟೆ ತಾಲೂಕು; ಜನಸಂಖ್ಯೆ : 5,911) ಒಂದು ಮುಖ್ಯವಾದ ವಾಣಿಜ್ಯ ಕೇಂದ್ರವಾಗಿದ್ದು ವೀರರಾಜಪೇಟೆ–ಮೈಸೂರು ಮಾರ್ಗದಲ್ಲಿದೆ. ಈ ಊರಿನ ಹತ್ತಿರ ಲಕ್ಷ್ಮಣತೀರ್ಥಕ್ಕೆ ಸೇರುವ ಅತ್ತಿಹೊಳೆ ಪ್ರವಹಿಸುತ್ತದೆ. ಈ ಊರು ದಕ್ಷಿಣ ಕೊಡಗಿನ ಪ್ರಮುಖ ಪಟ್ಟಣಗಳಲ್ಲೊಂದು. ಮೈಸೂರು ಕಡೆಯಿಂದ ಕೇರಳದ ಕರಾವಳಿ ನಗರಗಳಾದ ತಲಚೇರಿ, ಕಣ್ಣಾನೂರುಗಳಿಗೆ ಹೋಗುವ ರಸ್ತೆ ಈ ಪಟ್ಟಣದ ಮೂಲಕ ಸಾಗುತ್ತದೆಯಲ್ಲದೆ, ಸುತ್ತಲೂ ಅನೇಕ ಸ್ಥಳಗಳಿಗೆ ಉತ್ತಮ ರಸ್ತೆ ಸಂಪರ್ಕವಿದೆ. ಗೋಣಿಕೊಪ್ಪಲ ಸುತ್ತಮುತ್ತ ಕಾಫಿ, ಕಿತ್ತಲೆ, ಬತ್ತವನ್ನು ಸಾಕಷ್ಟು ಸಮೃದ್ಧಿಯಾಗಿ ಬೆಳೆಯುವುದರಿಂದ, ಈ ಊರಿನಲ್ಲಿ ಸರಕುಗಳನ್ನು ಮಾರಾಟ ಮಾಡುವ ಸೌಲಭ್ಯಗಳಿವೆ. ಇಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿಯವರ ತೋಟಗಾರಿಕೆಯ ಸಂಸ್ಥೆ ಇದೆ. ಇಲ್ಲಿ ಫಲಸಂಸ್ಕರಣಾ ಕೇಂದ್ರ (1969) ಮತ್ತು ಕಾಫಿ ಮಂಡಲಿಯ ಕಾಫಿ ಸಂಶೋಧನಾ ಕೇಂದ್ರಗಳಿವೆ. ಗೋಣಿಕೊಪ್ಪಲು ಒಂದು ಹೆಸರಾಂತ ವಿದ್ಯಾಕೇಂದ್ರವೂ ಆಗಿದೆ. ಊರಿನ ಪಶ್ಚಿಮದ ಕೆರೆಯ ದಂಡೆಯ ಮೇಲೆ ಉಮಾಮಹೇಶ್ವರ, ಗಣೇಶ ಹಾಗೂ ಸುಬ್ರಹ್ಮಣ್ಯ ಗುಡಿಗಳಿರುವ ಒಂದು ನವೀನ ದೇವಾಲಯ ಸಮುಚ್ಚಯವಿದೆ. ಇವನ್ನು ಸುಮಾರು ಮೂರು ದಶಕಗಳ ಕೆಳಗೆ ನಿರ್ಮಿಸಲಾಯಿತೆಂದು ತಿಳಿದು ಬರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಕಲ್ಯಾಣ ಮಂಟಪವನ್ನು ಆಧುನಿಕ ವಾಸ್ತುಶೈಲಿಯಲ್ಲಿ ನಿರ್ಮಿಸಲಾಗುತ್ತಿದೆ. ಇದರ ಸಮೀಪವೇ ಪ್ರಾಚೀನ ಮುನೇಶ್ವರನ ಗುಡಿಯಿದೆ. ಊರಿನ ಮಧ್ಯಭಾಗದಲ್ಲಿ ಷಾಫಿ ಜುಮ್ಮಾ ಮಸೀದಿ ಮತ್ತು ಹನಫಿ ಜುಮ್ಮಾ ಮಸೀದಿಗಳಿವೆ. ಇದರಲ್ಲಿ ಷಾಪಿ ಜುಮ್ಮಾ ಮಸೀದಿಯನ್ನು ಸುಮಾರು 150 ವರ್ಷಗಳ ಹಿಂದೆ ನಿರ್ಮಿಸಲಾಯಿತೆಂದು ಪ್ರತೀತಿಯಿದೆ. ಹನಫಿ ಜುಮ್ಮಾ ಮಸೀದಿಯನ್ನು 1967ರಲ್ಲಿ ಲಕ್ಷ್ಮಣತೀರ್ಥದ ಸೇತುವೆಯ ಪಕ್ಕದಲ್ಲಿ ಕಟ್ಟಿದ್ದು, ಇದು ಸುಂದರ ಮಿನಾರ್‌ಗಳು ಹಾಗೂ ಅರ್ಧ ಗೋಳಾಕಾರವಾದ ಗುಮ್ಮಟವನ್ನು ಹೊಂದಿದೆ. ಗೋಣಿಕೊಪ್ಪಲಿನ ಸಮೀಪವಿರುವ ಪೊಲ್ಲಿಬೆಟ್ಟದಲ್ಲಿ ಹಜರತ್ ಪಟಾನ್ ಷಾವಲಿ ಉಲ್ಲಾ ಪೀರ್‌ನ ದರ್ಗಾ ಇದೆ. ಗೋಣಿಕೊಪ್ಪಲಿನ ಸಮೀಪವಿರುವ ಚಟ್ಟಳ್ಳಿಯಲ್ಲಿ 1942ರಲ್ಲಿ ಸ್ಥಾಪಿಸಲಾದ

ಕಿತ್ತಳೆ ಕೃಷಿ ಕೇಂದ್ರವು ಕಾರ್ಯಾಚರಣೆಯಲ್ಲಿದೆ. ಕಿತ್ತಳೆ ಹಣ್ಣಿನ ಸಂರಕ್ಷಣೆ ಹಾಗೂ ತಳಿ ಅಭಿವೃದ್ಧಿಯ ಮುಖ್ಯ ಉದ್ದೇಶದಿಂದ ಈ ಸಂಶೋಧನಾ ಕೇಂದ್ರವು ಹಲವಾರು ಪ್ರಯೋಗಗಳನ್ನು ನಡೆಸುತ್ತಿದೆ-(ವಿವರಗಳಿಗೆ ಪುಟ 268 ನೋಡಿ).

### ಗೋಣಿಮರೂರು

ಸೋಮವಾರಪೇಟೆಯಿಂದ 12 ಕಿ. ಮೀ. ದೂರದಲ್ಲಿರುವ ಗೋಣಿಮರೂರು (ಸೋಮವಾರಪೇಟೆ ತಾಲೂಕು; ಜನಸಂಖ್ಯೆ : 1,874)ಒಂದು ಪುರಾತನ ಸ್ಥಳ. ಯಡವನಾಡು ಮತ್ತು ಗಟ್ಟಬಾಡಿನಾಡಿನ ನಡುವೆಯಿರುವ ಸ್ಥಳವೆಂದು ಇದೇ ಊರಿನಲ್ಲಿ ದೊರೆತಿರುವ ಕ್ರಿ. ಶ. 13 ನೇಯ ಶತಮಾನದ ವೀರಗಲ್ಲಿನ ಶಾಸನದಿಂದ ತಿಳಿದುಬರುತ್ತದೆ. ರಸ್ತೆಯ ಬದಿಯಲ್ಲಿ ಆಲದ ಮರದ ಬುಡದಲ್ಲಿ ಶಾಸನವಿರುವ ಚೆಂಗಾಳ್ವರ ಕಾಲದ ಎರಡು ವೀರಗಲ್ಲುಗಳು ಕಂಡು ಬರುತ್ತವೆ. ಇವರಲ್ಲಿ ಮೊದಲನೇಯದು ಅರ್ಧಭಾಗ ಶಿಥಿಲವಾಗಿದೆ. ಆದರೆ ಉಳಿದಿರುವ ಶಾಸನದ ಸಾಲುಗಳ ಪ್ರಕಾರ ಚೆಂಗಾಳ್ವ ವಂಶದ ರಾಜರುಗಳಾದ ಮಲ್ಲಿದೇವರಸ ಹಾಗೂ ಹರಿಹರದೇವರಸರ ಹೆಸರುಗಳು ಮತ್ತು ಚನ್ನಸದಾಶಿವನೆಂಬ ಅಧಿಕಾರಿಯ ಸಹಿ ಇರುವುದು ಕಂಡು ಬರುತ್ತದೆ. ಇದರ ಸಮೀಪವೇ ಇರುವ ಎರಡನೇಯ ಶಾಸನವೂ ಸಹ ವೀರಗಲ್ಲಾಗಿದೆ. ಸ್ತ್ರೀ ಮತ್ತು ಪುರುಷರ ಚಿತ್ರಗಳನ್ನು ಕೆತ್ತಲಾಗಿರುವ ಈ ವೀರಗಲ್ಲಿನಲ್ಲಿ ಸ್ತ್ರೀಯ ಕೈಯಲ್ಲಿ ದರ್ಪಣವಿದೆ. ಈ ದಾಖಲೆಯ ಪ್ರಕಾರ ಯಡವನಾಡು ಮತ್ತು ಗಟ್ಟಬಾಡಿಯ ಗಡಿಗಳ ನಡುವೆ ನಡೆದ ಕಾಳಗದಲ್ಲಿ ಚಿಕ್ಕೆಯ ನಾಯಕನೆಂಬ ವೀರನು ಮಡಿದ ಬಗೆಗೆ ತಿಳಿಸುತ್ತದೆ. ಈ ಶಾಸನದಲ್ಲೂ ಚೆಂಗಾಳ್ವರ ರಾಜರುಗಳಾದ ಮಲ್ಲಿದೇವರಸ ಮತ್ತು ಹರಿಹರದೇವರಸರ ಹೆಸರುಗಳು ವ್ಯಕ್ತವಾಗಿವೆ. ಹಾಗೂ ಈ ರಾಜರುಗಳು ಚಿಕ್ಕೆಯ ನಾಯಕನ ಮಗನಿಗೆ ನೀಡಿದ ದಾನದ ಬಗೆಗೆ ತಿಳಿಸುತ್ತದೆ. ಇದೂ ಸಹ 13ನೇಯ ಶತಮಾನದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ವೀರಗಲ್ಲುಗಳ ಸಮೀಪದಲ್ಲೇ ಚೌಕಾಕಾರವಾದ ಅವಶೇಷಗಳನ್ನೊಳಗೊಂಡಿರಬಹುದಾದ ಮಣ್ಣಿನ ದಿಬ್ಬಗಳು ಕಂಡುಬರುತ್ತವೆ. ಇದರ ಉತ್ಖನನವನ್ನು ಕೈಗೊಂಡರೆ ಈ ಸ್ಥಳದ ಬಗೆಗೆ ಇನ್ನೂ ಕೆಲವು ವಿವರಗಳು ತಿಳಿದು ಬರಬಹುದು. ಊರ ಹೊರಗೆ, ಗದ್ದೆಗಳ ಮಧ್ಯದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಬಸವೇಶ್ವರ ಗುಡಿಯು ಕಂಡುಬರುತ್ತದೆ.

### ಚೆಂಬೆ ಬೆಳ್ಳೂರು

ವೀರರಾಜಪೇಟೆಯಿಂದ ಎಂಟು ಕಿ. ಮೀ. ದೂರದಲ್ಲಿರುವ ಚೆಂಬೆ ಬೆಳ್ಳೂರು (ವೀರರಾಜಪೇಟೆ ತಾಲೂಕು ; ಜನಸಂಖ್ಯೆ : 1,371) ಒಂದು ಘಟ್ಟಗಳ ನಡುವಣ ಸುಂದರ ಪ್ರದೇಶವಾಗಿದೆ. ಈ ಊರಿನಲ್ಲಿ ದೊಡ್ಡದಾದ ಭದ್ರಕಾಳಿ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಚೆಂಬೆ ಬೆಳ್ಳೂರಿನ ಪ್ರಮುಖ ದೇವಾಲಯವೆಂದರೆ ಈಶ್ವರ ದೇವಾಲಯ. ಈ ದೇವಾಲಯವು ಕೊಡಗಿನ ಅರಸರ ಕಾಲದಲ್ಲಿ ನಿರ್ಮಿತವಾಗಿರುವ ಕಲ್ಲಿನ ಕಟ್ಟಡವಾಗಿದ್ದು, ಇವರಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ಮುಂಭಾಗದಲ್ಲಿ ವಿಶಾಲವಾದ ಮಂಟಪವಿದೆ. ಗರ್ಭಗೃಹಕ್ಕೆ ಸಾಂಧಾರ ಪ್ರದಕ್ಷಿಣಾ ಪಥವಿದೆ. ಇದರ ಮೇಲ್ಭಾಗದಲ್ಲಿ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿತವಾಗಿರುವ ಶಿಖರವಿದೆ. ಮುಖಮಂಟಪದಲ್ಲಿರುವ ನಂದಿಯು ಸುಮಾರು ಒಂದು ಮೀಟರ್ ಎತ್ತರವಿದೆ. ಇದರ ಛಾವಣಿಯು ಮರದಿಂದ ನಿರ್ಮಿತವಾಗಿದೆ. ಹಾಗೂ ಹೊರಭಾಗಕ್ಕೆ ಪ್ರವೇಶ ದ್ವಾರದ ಎರಡು ಕಡೆಗಳಲ್ಲಿ ದ್ವಾರಪಾಲಿಕೆಯರ ವಿಗ್ರಹಗಳಿವೆ. ವಿಜಯನಗರದ ಮಾದರಿಯಂತೆ ಕಾಣುವ ದ್ವಾರಪಾಲಿಕೆಯರ ತಲೆಗಳಿಗೆ ಹೂಬಳ್ಳಿಗಳ ಅಲಂಕಾರವಿರುವುದು ಗಮನಾರ್ಹ. ಇದರ ಮುಂಭಾಗದಲ್ಲಿ ಎತ್ತರವಾದ ಜಗತಿಯ ಮೇಲೆ ಬೇಟೆ ಚಾಮುಂಡಿಯ ವಿಗ್ರಹದ ಪಕ್ಕದಲ್ಲಿ ಚಿಕ್ಕದಾದ ತ್ರಿಶೂಲ ಮತ್ತು ದೇವರಿಗೆ ಸಮರ್ಪಿಸಲಾಗಿರುವ ನೂರಾರು ಮಣ್ಣಿನ ನಾಯಿಗಳು ಕಂಡುಬರುತ್ತವೆ. ಈ ಊರಿನ ಈಶ್ವರ ದೇವಾಲಯವು ವೀರರಾಜಪೇಟೆಯ ಜಾತ್ರೆಯ ಸಮಯದಲ್ಲಿ ಹಲವು ವಿಶೇಷ ಪೂಜೆಗಳ ಸಂಬಂಧಗಳನ್ನು ಹೊಂದಿದೆ ಎಂದು ಪ್ರತೀತಿಯಿದೆ.

### ಚೌಡ್ಲು

ಸೋಮವಾರಪೇಟೆ ನಗರದ ಪರಿಮಿತಿ (ಒಂದು ಕಿ.ಮೀ.) ಯೊಳಗೆ ಒಳಪಡುವ ಚೌಡ್ಲು ಕೊಡಗಿನ (ಸೋಮವಾರಪೇಟೆ ತಾಲೂಕು; ಜನಸಂಖ್ಯೆ : 3,834)ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದೆ. ದೊಡ್ಡದಾದ ಕೆರೆಯ ದಂಡೆಯಿಂದ ಹೋದರೆ ಆಚೆಯ ದಡದಲ್ಲಿ ಅರಣ್ಯಗಳಿಂದ ಆವೃತವಾಗಿರುವ ಚೌಡ್ಲು ಸಿಗುತ್ತದೆ. ಸುಗ್ಗಿ ಹಬ್ಬ ಇತ್ಯಾದಿ ಜಾನಪದ ಆಚರಣೆಗಳಿಗೆ ಈ ಸ್ಥಳವು ಒಂದು ಜನಪ್ರಿಯ ಕೇಂದ್ರವೆಂದು ತಿಳಿದುಬರುತ್ತದೆ. ಊರಿನ ಮುಂಭಾಗದಲ್ಲಿ ಸುಗ್ಗಿಗುಡಿಯ ಆವರಣದಲ್ಲಿ ವರ್ಷವಿಡೀ ಹಲವಾರು ಸಂದರ್ಭಗಳಲ್ಲಿ ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಈ ಗುಡಿಯ ಬಳಿ ಇರುವ ಒಂದು ಶಾಸನವು ಚೆಂಗಾಳ್ವ ಹರಿಹರ ದೇವನ ಕಾಲದ್ದಾಗಿದ್ದು 13ನೇಯ ಶತಮಾನಕ್ಕೆ ಸೇರಿದೆ. ಆಸ್ತಿಪಾಸ್ತಿಗಳ ಉತ್ತರಾಧಿಕಾರದ ಪ್ರಶ್ನೆಯೊಂದರಲ್ಲಿ ಕುಂದೂರಿನಲ್ಲಿ ಗುಲಾಮಳಾಗಿದ್ದ ಸ್ತ್ರೀಯೊಬ್ಬಳು ತನ್ನ

ಮಗಳು ಮತ್ತು ಮೊಮ್ಮಗಳಿಗೆ ತನ್ನ ಆಸ್ತಿಪಾಸ್ತಿಗಳ ಪೂರ್ಣ ಉತ್ತರಾಧಿಕಾರ ನೀಡಿದುದರ ಬಗೆಗೆ ಈ ಶಾಸನವು ಒಪ್ಪಿಗೆ ನೀಡುತ್ತದೆ. ಈ ಶಾಸನವನ್ನು ಬರೆದವನು ಸೇನಭೋವ ಚಿನ್ನಯ್ಯ ಹಾಗೂ ಇದನ್ನು ಕೆತ್ತಿದವನು ಮಾಲೋಜನೆಂಬ ಶಿಲ್ಪಿ ಎಂದು ಅದು ತಿಳಿಸುತ್ತದೆ. ಇಲ್ಲಿನ ಇನ್ನೊಂದು ಶಾಸನವು 1884ರಲ್ಲಿ ಮರಿಯಮ್ಮ ಎಂಬುವಳು ಬಾವಿ ತೆಗೆಸುವ ಮುಂತಾದ ಧರ್ಮಗಳನ್ನು ಮಾಡಿದ ವಿಚಾರ ತಿಳಿಸುತ್ತದೆ. ಈ ಶಾಸನಗಳಿರುವ ದಿಬ್ಬದ ಮೇಲೆ ಸುಮಾರು ಇಪ್ಪತ್ತು ವಿವಿಧ ಶೈಲಿಯ ವೀರಗಲ್ಲು (ಕೊಲೆಕಲ್ಲು ?)ಗಳಿದ್ದು ಅವುಗಳ ಶಿಲ್ಪಗಳು ಅಧ್ಯಯನ ಯೋಗ್ಯವಾಗಿವೆ. ಈ ಊರ ಸಮೀಪದ 'ನಗರೂರು' ಪ್ರಾಚೀನ ಚೌಡ್ಲು ಊರಿನ ವ್ಯಾಪಾರಸ್ಥರ ಬಡಾವಣೆಯಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ.

### ತಡಿಯಂಡ ಮೋಳು

ಕೊಡಗಿನಲ್ಲೇ ಅತ್ಯಂತ ಎತ್ತರವಾದ ಪರ್ವತ ತಡಿಯಂಡ ಮೋಳು ಸಮುದ್ರ ಮಟ್ಟದಿಂದ 1,717 ಮೀಟರ್ ಎತ್ತರವಾಗಿದೆ. ಜಿಲ್ಲೆಯ ಆಗ್ನೇಯ ಭಾಗದಲ್ಲಿ ನಾಪೋಕ್ಲು ನಾಡಿನಲ್ಲಿರುವ ಈ ಪರ್ವತದ ಮೇಲ್ಭಾಗವನ್ನು ತಲುಪುವುದು ಒಳ್ಳೆಯ ಸಾಹಸಯಾತ್ರೆ. ಇದರ ಮೇಲ್ಭಾಗಕ್ಕೆ ಹೋಗಲು ಇಚ್ಛಿಸುವವರು ನಾಲ್ಕು ನಾಡು ಅರಮನೆಯ ಬಳಿ ಯವಕಪಾಡಿಯಲ್ಲಿ ಹಿಂದಿನ ರಾತ್ರಿ ತಂಗಿದ್ದು, ಮುಂಜಾನೆ ಕಾಲ್ನಡಿಗೆಯಲ್ಲಿ ದುರ್ಗಮವಾದ ಅರಣ್ಯಗಳ ಮಧ್ಯದಲ್ಲಿ ಸುಮಾರು ಮೂರು ಕಿ.ಮೀ. ಕ್ರಮಿಸಿದರೆ ಪರ್ವತದ ಪಾದವನ್ನು ತಲುಪಬಹುದು. ಈ ಸ್ಥಳದಿಂದ ಪರ್ವತಾರೋಹಣವು ಒಂದು ಕಠಿಣವಾದ ಪ್ರವಾಸವಾಗುತ್ತದೆ. ಹಾವಿನೋಪಾದಿಯ ಹಾದಿಯಲ್ಲಿ ಹತ್ತುತ್ತಾ ಮೇಲ್ಭಾಗವನ್ನು ಸೇರಿದರೆ ಸಮತಟ್ಟಾದ ಭೂಭಾಗದಲ್ಲಿ ತಂಪಾದ ಶೀತಲವಾದ ಹವಾಗುಣದಲ್ಲಿ ಎಲ್ಲಾ ದೈಹಿಕ ಆಯಾಸವೂ ಪರಿಹಾರವಾಗುತ್ತದೆ. ತಡಿಯಂಡ ಮೋಳುವಿನಿಂದ ಸುತ್ತಲಿನ ದಿಗಂತದ ಸೌಂದರ್ಯವನ್ನೂ ವೀಕ್ಷಿಸಿದಾಗ ಕಂಗೊಳಿಸುವ ದೃಶ್ಯವು ಒಂದು ಅಮೋಘವಾದ ಅನುಭವವೆಂದು ಹೇಳಬಹುದು. ಮೋಡಗಳಿಲ್ಲದಾಗ ಪಶ್ಚಿಮ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ರಮ್ಯ ಸೂರ್ಯಾಸ್ತವನ್ನು ಕಾಣಬಹುದು. ತಡಿಯಂಡ ಮೋಳುವಿನಿಂದ ಇಳಿದು ಯವಕಪಾಡಿಗೆ ಬಂದರೆ ಪ್ರಸಿದ್ಧ ಪನ್ನಂಗಾಲತಮ್ಮೆಯ ದೇವಾಲಯವು ಸಿಗುತ್ತದೆ. ಈಕೆ ಪಾಡಿಯ ಇಗ್ಗುತಪ್ಪನ ತಂಗಿಯೆಂದು ನಂಬಿಕೆ. ಮುಖ್ಯವಾಗಿ ದಲಿತ ಭಕ್ತಾದಿಗಳು ಪನ್ನಂಗಾಲತಮ್ಮೆಯನ್ನು ತಮ್ಮ ರಕ್ಷಕಿಯೆಂದು ನಂಬಿ ಪೂಜಿಸುತ್ತಾರೆ. ಪ್ರತಿವರ್ಷ ಏಪ್ರಿಲ್‌ನಲ್ಲಿ ವಾರ್ಷಿಕವಾಗಿ ಜಾತ್ರೆಯು ನಡೆಯುವಾಗ ಸಾವಿರಾರು ಜನ ಭಕ್ತಾದಿಗಳು ಈ ದೇವಾಲಯಕ್ಕೆ ಭೇಟಿ ನೀಡುವರು. ಸುಮಾರು ಐದು ದಿನಗಳಿಗೂ ಮೀರಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಕೊಡಗಿನ ಹಲವಾರು ವಿಶೇಷ ಜಾನಪದ ನೃತ್ಯಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಜರಗುತ್ತವೆ. ತಡಿಯಂಡ ಮೋಳು ಶಿಖರದಿಂದ ಸು. 10 ಕಿ.ಮೀ. ದೂರದಲ್ಲಿ ಕಡಿಯತ್ನಾಡಿನ ಸೋಮಮಲೆ ಶಿಖರದಲ್ಲಿ (ಆಧುನಿಕ ಕಟ್ಟಡವಿರುವ) ಮಲೆತಂಬಿರಾನ್ ಎಂಬ ದೇವರ ದೇವಾಲಯವಿದೆ. ಇಲ್ಲಿಂದ ಇಗ್ಗುತಪ್ಪನ ಪಾಡಿಬೆಟ್ಟವೂ ಹತ್ತಿರವಾಗುತ್ತದೆ.

### ತಲಕಾವೇರಿ

ಭಾಗಮಂಡಲದಿಂದ ಎಂಟು ಕಿ.ಮೀ. (ಮಡಿಕೇರಿಯಿಂದ 46 ಕಿ.ಮೀ. ಹಾಗೂ ವೀರರಾಜಪೇಟೆಯಿಂದ 58 ಕಿ.ಮೀ.) ದೂರದಲ್ಲಿರುವ ಅತ್ಯಂತ ಜನಪ್ರಿಯವಾದ ಪ್ರಾಚೀನ ತೀರ್ಥ ಕ್ಷೇತ್ರ ತಲಕಾವೇರಿ (ಮಡಿಕೇರಿ ತಾ॥). ಬ್ರಹ್ಮಗಿರಿ ಪರ್ವತ ಶ್ರೇಣಿಗಳ ಪಾದದಲ್ಲಿರುವ ತಲಕಾವೇರಿಯು ವಿಪುಲವಾದ ಪೌರಾಣಿಕ ಹಿನ್ನೆಲೆಯನ್ನು ಪಡೆದಿರುವ ಪ್ರದೇಶ. ಭಾಗಮಂಡಲದಿಂದ ಇಲ್ಲಿಗೆ ವಾಹನ ಸಂಚಾರಕ್ಕೆ ಅನುಕೂಲವಾದ ರಸ್ತೆ ಇದ್ದು ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಸಾರಿಗೆ ವ್ಯವಸ್ಥೆಯಿದೆ. ಲೋಕಪಾವನೆ, ಲೋಪಾಮುದ್ರಾ, ದಕ್ಷಿಣ ಗಂಗೆ, ದಾಕ್ಷಿಣಾತ್ಯ ಜನೋದ್ಧಾರಿಣಿ, ಕಲಿಕಲ್ಮಷನಾಶಿನಿ ಎಂದು ನಾನಾ ಹೆಸರುಗಳಿಂದ ಭಕ್ತಿಗೌರವಗಳಿಂದ ಆರಾಧಿಸಲಾಗುವ ಕಾವೇರಿ ನದಿಯು 'ತಲಕಾವೇರಿ' ಅಥವಾ ಶಾಸನಗಳಲ್ಲಿ ಉಲ್ಲೇಖಿತವಾಗಿರುವಂತೆ 'ಮೊದಲ್ ಕಾವೇರಿ' ಇಲ್ಲಿ ಉಗಮಿಸುವ ಕಾರಣ ಅತ್ಯಂತ ಪ್ರಾಚೀನ ಕಾಲದಿಂದಲೂ ಈ ಸ್ಥಳಕ್ಕೆ ಮಹತ್ವವಿದೆ ಎಂದು ಹೇಳಬಹುದು. ಕೊಡಗಿನಲ್ಲಿ ನೆಲಸಿರುವವರಿಗೆ ಕಾವೇರಿ ಸದಾ ಚೈತನ್ಯವನ್ನು ಕೊಡುವ ಸಂಜೀವಿನಿಯಾಗಿರುವುದರಿಂದ ಕೊಡಗಿನವರಿಗೆಲ್ಲಾ ತಮ್ಮ ಜೀವಿತ ಕಾಲದಲ್ಲಿ ಅದೆಷ್ಟೋ ಬಾರಿ ತಲಕಾವೇರಿಯಲ್ಲಿ ತೀರ್ಥ ಸ್ನಾನ ಮಾಡಿ ಪುನೀತರಾಗುವ ಪದ್ಧತಿಯು ಪ್ರಾಚೀನಕಾಲದಿಂದಲೂ ರೂಢಿಯಲ್ಲಿದೆ. ಕೊಡವರಿಗೆ ಕಾವೇರಿಯು ಕುಲದೇವತೆಯಾಗಿರುವಳು. ತಲಕಾವೇರಿಯಲ್ಲಿರುವ ಬ್ರಹ್ಮಗಿರಿಯ ಶ್ರೇಣಿಯಲ್ಲಿರುವ ಗಿರಿಗಳನ್ನು ಪೌರಾಣಿಕ ಯುಗದಲ್ಲಿ ಅಗ್ನಿಗಿರಿ, ವಾಯುಗಿರಿ ಮತ್ತು ಗಜರಾಜಗಿರಿಗಳೆಂದು ಗುರುತಿಸಲಾಗಿದೆ*. ಬ್ರಹ್ಮಗಿರಿಯ ಸುತ್ತಮುತ್ತಲಿನ ಆಕರ್ಷಕವಾದ

* ಎದುರ್ಕಳ ಕೆ. ಶಂಕರನಾರಾಯಣ ಭಟ್ಟ, 'ಕಾವೇರಿ ವೈಭವ'.

ಹಸಿರು ಬೆಟ್ಟಗಳ ನಡುವೆ ಸುತ್ತಲೂ ಕಟಿಕಟೆಯುಳ್ಳ, 30 ಅಡಿ ಉದ್ದ ಮೂರು ಅಡಿ ಆಳವಿರುವ ಕೊಳವೊಂದಕ್ಕೆ ತಾಗಿದಂತೆ ಎರಡೂವರೆ ಅಡಿ ಚದುರದ ಚೌಕಾಕಾರವಾದ ಪುಟ್ಟ ಕುಂಡವಿದೆ; ಇದನ್ನು ಬ್ರಹ್ಮಕುಂಡಿಕೆ ಎಂದೂ ಕಾವೇರಿಯ ಉಗಮಸ್ಥಾನವೆಂದೂ ಕರೆಯಲಾಗುತ್ತದೆ. ಇಲ್ಲಿಂದ ಉಗಮಿಸಿದ ಕಾವೇರಿಯು ಈ ಕುಂಡದ ಮುಂದಿರುವ ದೊಡ್ಡದಾದ ಪುಷ್ಕರಣಿಗೆ ಹರಿಯುತ್ತಾಳೆ. ಸ್ಥಳಪುರಾಣದ ಪ್ರಕಾರ ತುಲಾ ಸಂಕ್ರಮಣ (ಅಕ್ಟೋಬರ್ 16 ಅಥವಾ 17)ದಂದು ಭಕ್ತಾದಿಗಳಿಗೆ ಕಾವೇರಿಯು ಈ ಕುಂಡಿಕೆಯಲ್ಲಿ ಉದ್ಭವಿಸುವ ಮೂಲಕ ದರ್ಶನ ನೀಡುತ್ತಾಳೆಂದು ನಂಬಿಕೆಯಿದೆ. ಆದುದರಿಂದಲೇ ಎಲ್ಲಾ ಹಿಂದೂಗಳೂ ತುಲಾಸಂಕ್ರಮಣದಂದು ಅಥವಾ ತುಲಾ ಮಾಸದಲ್ಲಿ ಕಾವೇರಿ ಸ್ನಾನ ಮಾಡುತ್ತಾರೆ. ಕರ್ನಾಟಕದವರೇ ಅಲ್ಲದೇ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಹಾಗೂ ದೇಶದ ನಾನಾಭಾಗಗಳಿಂದ ಯಾತ್ರಿಕರು ತುಲಾ ಕಾವೇರಿ ಜಾತ್ರೆಯಲ್ಲಿ ಭಾಗವಹಿಸುವರು. ಅಗ್ನಿ ಪುರಾಣ, ಸ್ಕಾಂದಪುರಾಣಗಳ ಪ್ರಕಾರ ಕವೇರ ಮುನಿಯು ಬ್ರಹ್ಮಗಿರಿಯಲ್ಲಿ ಕಠಿಣ ತಪಸ್ಸನ್ನಾಚರಿಸಿದ ಫಲವಾಗಿ ಬ್ರಹ್ಮನಿಂದ 'ವಿಷ್ಣುಮಾಯೆ', 'ಲೋಪಾಮುದ್ರಾ' ಅಥವಾ 'ಕಾವೇರಿ'ಯನ್ನು ಮಗಳಾಗಿ ಪಡೆದನು. ಮೂಲತಃ ಹಿಮಾಲಯದಲ್ಲಿದ್ದ ವಿಷ್ಣುಮಾಯೆಯು ಕವೇರನಿಂದ ಪೋಷಿತಳಾಗಿ ಬ್ರಹ್ಮಗಿರಿಯಲ್ಲಿ ಅಗಸ್ತ್ಯ ಋಷಿಯ ಕಮಂಡಲವನ್ನು ಸೇರಿ ಹರಿದು ಬಂದಳೆಂದೂ ಪುರಾಣಗಳು ವಿವರಿಸುತ್ತವೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ 2, ಇತಿಹಾಸ ನೋಡಿ). ಮಹಾಭಾರತದಲ್ಲಿರುವ ಉಲ್ಲೇಖದ ಪ್ರಕಾರ ಪಾಂಡವರು ತಮ್ಮ ವನವಾಸದ ಕಾಲದಲ್ಲಿ ಈ ಸ್ಥಳಕ್ಕೆ ಭೇಟಿ ನೀಡಿ ತಲಕಾವೇರಿಯಲ್ಲಿನ ಬ್ರಹ್ಮಕುಂಡಿಕೆಯ ನೀರನ್ನು ತೆಗೆದುಕೊಂಡು ಕುಂದಗಿರಿಯ (ಗೋಣಿಕೊಪ್ಪಲ ಸಮೀಪ) ಮಹಾದೇವನಿಗೆ ಅಭಿಷೇಕ ಮಾಡಿದರೆಂದು ಪ್ರತೀತಿಯಿದೆ. ಭಾಗಮಂಡಲದಿಂದ ತಲಕಾವೇರಿಗೆ ಹೋಗುವ ದಾರಿಯಲ್ಲಿ ಏಲಕ್ಕಿ ತೋಟದ ನಡುವೆ 'ಭೀಮನ ಕಲ್ಲು' ಎಂದು ಪ್ರಸಿದ್ಧವಾಗಿರುವ ದೊಡ್ಡದೊಂದು ಬಂಡೆಯಿದೆ. ಐತಿಹಾಸಿಕವಾಗಿ ಕ್ರಿ.ಶ. 1001ರ ಮಡಿಕೇರಿಯ ಗಂಗರ ಶಾಸನದಲ್ಲಿ 'ಮೊದಲ್ಕಾವೇರಿಯಲ್ಲಿ ಮಿಂದು ರಾಮೇಶ್ವರ ದೇವರಿಗೆ ದತ್ತಿ ಬಿಟ್ಟನು' ಎಂದು ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಬರುವ 'ಮೊದಲ್ಕಾವೇರಿ' ಎಂಬುದು 'ತಲಕಾವೇರಿ' ಎಂದು ಸ್ಪಷ್ಟವಾಗಿದೆ. ಈಗ ಈ ಶಾಸನವು ಮಡಿಕೇರಿಯ ವಸ್ತು ಸಂಗ್ರಹಾಲಯದಲ್ಲಿದೆ. ಟಿಪ್ಪುವಿನ ಕಾಲದಲ್ಲಿ ತಲಕಾವೇರಿಯಲ್ಲಿ ನಿಂತು ಹೋಗಿದ್ದ ಪೂಜೆಯು, ಅನಂತರ ಕೊಡಗಿನ ದೊಡ್ಡ ವೀರರಾಜೇಂದ್ರನ ಕಾಲದಲ್ಲಿ ವಿಶೇಷ ಪೂಜಾ ಪದ್ಧತಿಗಳಿಂದ ಸತತವಾಗಿ ನಡೆದು ಬರುವಂತಾಯಿತು. ಈ ರಾಜನು ದಕ್ಷಿಣ ಕನ್ನಡ ಜಿಲ್ಲೆಯಿಂದ ಕೊಡಗಿಗೆ ಬ್ರಾಹ್ಮಣ ಕುಟುಂಬಗಳನ್ನು ಆಹ್ವಾನಿಸಿ ಅವರು ಇಲ್ಲಿಯೇ ನೆಲಸಿ ಕಾವೇರಿ ಪೂಜಾ ಕೈಂಕರ್ಯಗಳು ನಿರಂತರವಾಗಿ ನಡೆದು ಬರುವಂತೆ ಮಾಡಿದನು.

ಕಾವೇರಿಯ ಉಗಮಸ್ಥಾನದ ಮೇಲ್ಭಾಗದಲ್ಲಿ ಒಂದು ಚಿಕ್ಕ ಮಂಟಪವಿದ್ದು ಅಲ್ಲಿ ಸದಾ ದೀಪವನ್ನು ಬೆಳಗಿರುವುದರಿಂದ ಇದನ್ನು ಜ್ಯೋತಿ ಮಂಟಪವೆಂದು ಕರೆಯಲಾಗುತ್ತದೆ. ಈ ಜ್ಯೋತಿ ಮಂಟಪವನ್ನು 23ನೇಯ ಜನವರಿ 1972ರಂದು ನವೀಕರಿಸಲಾಯಿತು. ಇಲ್ಲಿಂದ ಸ್ವಲ್ಪ ಮೇಲ್ಭಾಗಕ್ಕೆ ಹೋದರೆ ಅಗಸ್ತ್ಯೇಶ್ವರ ದೇವಾಲಯವಿದೆ. ಈ ದೇವಾಲಯವೂ ಸಹ ಇತ್ತೀಚೆಗೆ ನವೀಕರಣಗೊಂಡಿದೆ. ಗರ್ಭಗೃಹದಲ್ಲಿ ಮೊದಲು ಅಗಸ್ತ್ಯ ಋಷಿಯು ಮರಳುಲಿಂಗವನ್ನು ಪ್ರತಿಷ್ಠೆ ಮಾಡಿದರೆಂದು ಸ್ಥಳಪುರಾಣ ಹೇಳುತ್ತದೆ. ಈ ದೇವಾಲಯದ ಸಮೀಪವೇ ಮಹಾಗಣಪತಿಯ ಚಿಕ್ಕಗುಡಿಯಿದೆ. ಇದೇ ಪರಿಸರದಲ್ಲಿ ಅಶ್ವತ್ಥನಾರಾಯಣ ಸನ್ನಿಧಿ ಇದ್ದು, ಇಲ್ಲಿ ಅಗಸ್ತ್ಯರು ಪೂಜಿಸಿದರೆಂದು ನಂಬಲಾದ ಅಶ್ವತ್ಥಕಟ್ಟೆಯಿದೆ. ಈಗ ಇಲ್ಲಿ ಒಂದು ಕಿರು ಅಶ್ವತ್ಥವಿದೆ. ತಲಕಾವೇರಿಯ ಆಕರ್ಷಕ ತಾಣವೆಂದರೆ ಅಗಸ್ತ್ಯೇಶ್ವರ ದೇವಾಲಯದ ಎಡಭಾಗದಲ್ಲಿರುವ ಬ್ರಹ್ಮಗಿರಿ. ಇದು ಸುಮಾರು 300 ಅಡಿಗಳಷ್ಟು ಎತ್ತರವಿದ್ದು ಮೇಲ್ಭಾಗಕ್ಕೆ ಹೋಗಲು ಸುಮಾರು 500 ಮೆಟ್ಟಿಲುಗಳಿವೆ. ಬ್ರಹ್ಮಗಿರಿಯ ಮೇಲ್ಭಾಗದಲ್ಲಿ ಸಪ್ತರ್ಷಿಗಳು ಯಜ್ಞಮಾಡಿದ ಸ್ಥಳವೆಂದು ಹೇಳುವ ಜಾಗದಲ್ಲಿ ಯಜ್ಞಕುಂಡಗಳನ್ನು ತೋರಿಸಲಾಗುತ್ತದೆ. ಈಗ ಇಲ್ಲಿ ಮೂರು ಕುಂಡಗಳನ್ನು ಹೋಲುವ ಹೊಂಡಗಳಿವೆ. ಇಲ್ಲಿಂದ ಸಂಜೆಯ ವೇಳೆ ವೀಕ್ಷಿಸಿದರೆ ಸುಂದರವಾದ ಸೂರ್ಯಾಸ್ತಮದ ದೃಶ್ಯವು ಕಾಣಸಿಗುತ್ತದೆ. ಈ ಗಿರಿಯ ಹಿಂಭಾಗದಲ್ಲಿರುವ ಪ್ರಪಾತದಿಂದ ದೂರದಲ್ಲಿರುವ ಸಣ್ಣ ಗುಡ್ಡದಲ್ಲಿ ಇತ್ತೀಚೆಗೆ ಹಾಕಲಾಗಿರುವ 'ವಿಂಡ್‌ಮಿಲ್'ಗಳು ಕಂಡುಬರುತ್ತವೆ. ಬ್ರಹ್ಮಗಿರಿಯನ್ನು ಇಳಿದು ರಸ್ತೆಯ ಬಲಭಾಗಕ್ಕೆ ಹೋದರೆ ಪ್ರಕೃತಿಯ ದೃಶ್ಯಗಳನ್ನು ಸವಿಯುವ ತಂಗುದಾಣವಿದೆ. ಇಲ್ಲಿಂದ ಇಳಿದು ಕಾಲುದಾರಿಯಲ್ಲಿ ಹೋದರೆ 'ಸಲಾಂಕಟ್ಟೆ'ಯು ಕಂಡುಬರುತ್ತದೆ. ಟಿಪ್ಪುಸುಲ್ತಾನನು

* ಎ. ಕ., ಸಂಪುಟ I, ಶಾ. ಸಂ. 2.

ತಲಕಾವೇರಿಗೆ ಬಂದಿದ್ದಾಗ ಈ ಸ್ಥಳದಲ್ಲಿ ನಿಂತು ಕಾವೇರಿಯನ್ನು ವಂದಿಸಿದ ಕಾರಣ ಈ ಜಾಗಕ್ಕೆ 'ಸಲಾಂ ಕಟ್ಟೆ' ಎಂದು ಹೆಸರು ಬಂದಿತೆಂದು ಹೇಳಲಾಗುತ್ತದೆ. ಇಲ್ಲಿಂದ ಮುಂದೆ ಹೋದರೆ ಎಡಭಾಗಕ್ಕೆ ಸರಕಾರಿ ಅತಿಥಿಗೃಹ ಕಾಣಿಸುತ್ತದೆ. ಈ ಗೃಹದಿಂದ ಅನತಿ ದೂರದಲ್ಲಿರುವ ದೊಡ್ಡ ಕಟ್ಟಡವೇ ಕೈಲಾಸ ಆಶ್ರಮವೆಂಬ ಛತ್ರ. ಇಲ್ಲಿಗೆ ಬಂದ ಯಾತ್ರಿಕರು ಉಳಿಯಲು ಅನುಕೂಲವಾಗುವಂತೆ ಸೌಲಭ್ಯಗಳಿವೆ. ಇಲ್ಲಿಂದ ಸ್ವಲ್ಪ ದೂರ ಬಲಬದಿಗೆ ಸಾಗಿದರೆ ಸರಕಾರಿ ಅರಣ್ಯ ಇಲಾಖೆಯ ಅತಿಥಿಗೃಹವು ಸಿಗುತ್ತದೆ. ಹೀಗೆ ತಲಕಾವೇರಿಯ ಸುತ್ತಮುತ್ತಣ ಪರಿಸರವು ಅತ್ಯಂತ ಪ್ರಶಾಂತವೂ ಆಹ್ಲಾದಕರವೂ, ಮೋಹಕವೂ ಆಗಿದ್ದು ಈ ಸ್ಥಳದಲ್ಲಿ ಮಳೆಗಾಲವನ್ನು ಬಿಟ್ಟು ಉಳಿದಂತೆ ಸದಾಕಾಲ ಜನಜಂಗುಳಿ ಇರುತ್ತದೆ.

### ತಿತಿಮತಿ

ಗೋಣಿಕೊಪ್ಪಲು–ಹುಣಸೂರಿನ ನಡುವೆ ಮುಖ್ಯ ದಾರಿಯಲ್ಲಿರುವ (ವೀರರಾಜಪೇಟೆಯಿಂದ 26 ಕಿ.ಮೀ, ದೂರದಲ್ಲಿರುವ) ತಿತಿಮತಿ (ವೀರರಾಜಪೇಟೆ ತಾಲೂಕು) ಅರಣ್ಯಗಳಿಂದ ಹಾಗೂ ಕಾಫಿ ತೋಟಗಳಿಂದ ಆವೃತವಾದ ಸ್ಥಳ. ಅರಣ್ಯಗಳ ಮಧ್ಯದಲ್ಲಿ ಸುಮಾರು ಐದು ಕಿ.ಮೀ. ಬಲಭಾಗದಲ್ಲಿ ತಿರುಗಿ ಹೋದರೆ ಚೆಂಗಾಳ್ವರ ಕಾಲದ ಕಲ್ಲಿನ ಶಿವ ದೇವಾಲಯವು ಇಲ್ಲಿ ಕಂಡುಬರುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹವಿದ್ದು, ಅದರ ಮುಂಭಾಗದಲ್ಲಿ ಆಯತಾಕಾರವಾದ ಕಂಬಗಳಿಂದ ಅಲಂಕೃತವಾದ ತೆರೆದ ಮುಖ ಮಂಟಪವಿದೆ. ಈ ಕಂಬಗಳಲ್ಲಿ ಆಕರ್ಷಕವಾದ ಚಾಮರಧಾರಿಣಿಯರು, ನಂದಿ, ಮೃದಂಗ ವಾದಕ, ಶಿವಲಿಂಗಕ್ಕೆ ವಂದಿಸುತ್ತಿರುವ ಸ್ತ್ರೀ, ಮೊಸರು ಕಡೆಯುತ್ತಿರುವವಳು, ಮಿಥುನ ಶಿಲ್ಪ, ದರ್ಪಣಧಾರಿಣಿ, ದೀರ್ಘವೇಣೀಧಾರಿ ನರ್ತಕಿ, ಹಂಸ ಮುಂತಾದ ಉಬ್ಬುಶಿಲ್ಪಗಳಿವೆ. ನವರಂಗದ ಮುಂಭಾಗದಲ್ಲಿದ್ದ ದ್ವಾರಪಾಲಕರ ಶಿಲ್ಪಗಳು ಗರ್ಭಗೃಹದಲ್ಲಿವೆ. ಧ್ವಜಸ್ತಂಭವು ದೇವಾಲಯದ ಎದುರಿಗಿದ್ದು ಈಗ ಮುರಿದು ಬಿದ್ದಿದೆ. ಅದರ ಮೇಲೆ ಸುಂದರ ಉಬ್ಬುಶಿಲ್ಪಗಳಾದ ಗಣಪತಿ, ವೀರಭದ್ರ, ಕಾಮಧೇನು, ಪಶುದೇಹದ ಗಣ ಮುಂತಾದವುಗಳನ್ನು ಕೆತ್ತಲಾಗಿದೆ. ಗಣಪತಿ ವಿಗ್ರಹದ ಕೆಳಗೆ ಎರಡಕ್ಷರದ ಶಾಸನವಿದೆ. ಈ ದೇವಾಲಯದ ಪರಿಸರವು ಅರಣ್ಯದಿಂದ ಆವೃತವಾಗಿರುವ ಕಾರಣ ಬಹಳ ಆಹ್ಲಾದಕರವಾದ ಸ್ಥಳವೆನ್ನಬಹುದು. ಈ ಸ್ಥಳಕ್ಕೆ ಪೊನ್ನಂಪೇಟೆಯ ಸಮೀಪವಿರುವ ಬಾಳೆಲೆಯ ಮಾರ್ಗವಾಗಿ ಬಂದರೆ ಕೇವಲ ಐದು ಕಿ.ಮೀ. ದೂರವಾಗುತ್ತದೆ. ತಿತಿಮತಿಯ ಅರಣ್ಯಗಳಲ್ಲಿ ಬುಡಕಟ್ಟು ಜನಾಂಗದವರು ಹೇರಳವಾಗಿ ಕಂಡುಬರುತ್ತಾರೆ. ಜೇನುಕುರುಬರು ಈ ಕಾಡಿನಲ್ಲಿ ಅಧಿಕ ಸಂಖ್ಯೆಯಲ್ಲಿರುವರು. ಇತ್ತೀಚೆಗೆ ತಿತಿಮತಿಯು ಒಂದು ಬಹು ಮುಖ್ಯವಾದ ವ್ಯಾಪಾರ ಕೇಂದ್ರ; ಹಾಗೂ ಜೇನು ಸಾಕಣೆಗೆ ಹೆಸರು ಪಡೆದಿದೆ.

### ದೊಡ್ಡಬಿಳಹ

ಶನಿವಾರಸಂತೆಯಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ರಾಮೇಶ್ವರ ಗುಡ್ಡದ ತಪ್ಪಲಲ್ಲಿರುವ ದೊಡ್ಡಬಿಳಹವು (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 455) ಒಂದು ಐತಿಹಾಸಿಕ ಸ್ಥಳ. ಊರಿನ ಹಿಂಭಾಗದಲ್ಲಿ ಕಾಣುವ ಗುಡ್ಡದ ಮೇಲೆ ರಾಮೇಶ್ವರ ದೇವಾಲಯವಿದೆ. ಇದು ಇತ್ತೀಚೆಗೆ ನವೀಕರಣಗೊಂಡಿದೆ. ಗ್ರಾಮ್ಯ ಶೈಲಿಯ ಸೂರ್ಯ ಹಾಗೂ ಒಂದು ಮಾತೃಕೆಯ ವಿಗ್ರಹಗಳು ಕಂಡು ಬರುತ್ತವೆ. ಗರ್ಭಗೃಹದಲ್ಲಿರುವ ಶಿವಲಿಂಗವು ಅತ್ಯಂತ ಹೊಳಪಿನದಾಗಿದ್ದು ಚೌರಸ್ರವಾದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಕಂಬಗಳ ಮೇಲ್ಭಾಗದ ಚಾಚು ಪೀಠಗಳಲ್ಲಿ ವಿಪುಲವಾದ ಕೆತ್ತನೆಗಳಿಂದ ಅಲಂಕೃತವಾದ ಶಿಲ್ಪಗಳು ಕಂಡು ಬರುತ್ತವೆ. ಇವುಗಳನ್ನು ಖಾಸಗಿ ಮನೆಗಳಿಂದ ತಂದು ಈ ಕಟ್ಟಡದ ನಿರ್ಮಾಣದಲ್ಲಿ ಬಳಸಿಕೊಳ್ಳಲಾಗಿದೆ ಎಂದು ತಿಳಿದು ಬರುತ್ತದೆ. ಒಂದು ಖಾಸಗಿ ತೋಟದಲ್ಲಿ ಆದಿಮಾನವನ ಕಾಲದ ಶಿಲಾಗೋರಿ (ಡಾಲ್ಮೆನ್) ಕಂಡುಬರುತ್ತದೆ ಮತ್ತು ಇದನ್ನು ಸ್ಥಳೀಯವಾಗಿ ಪಾಂಡವರ ಪಾರೆ ಎಂದು ಕರೆಯಲಾಗುತ್ತದೆ. ಸಿರಹವು (ಸೋಮವಾರಪೇಟೆ ತಾಲೂಕು) ದೊಡ್ಡಬಿಳಹದಿಂದ 2.5 ಕಿ. ಮೀ. (ಸೋಮವಾರಪೇಟೆಯಿಂದ 14 ಕಿ. ಮೀ.) ದೂರದಲ್ಲಿರುವ ಒಂದು ಐತಿಹಾಸಿಕ ಸ್ಥಳ. ಈ ಸ್ಥಳವನ್ನು ಕ್ರಿ. ಶ. 1175ರ ಶಾಸನದಲ್ಲಿ 'ಸಿರಿಊರ' ಎಂದು ಉಲ್ಲೇಖಿಸಲಾಗಿದೆ. ಈಗ ಕಾಡಿನ ಮಧ್ಯದಲ್ಲಿ ಹೊಯ್ಸಳ ಶೈಲಿಯ ಮಲ್ಲಿಕಾರ್ಜುನ(ರಾಮೇಶ್ವರ) ದೇವಾಲಯವಿದ್ದು ಸಂಪೂರ್ಣವಾಗಿ ಬಿದ್ದುಹೋಗಿದೆ. ಇಲ್ಲಿ ದೊರೆತಿರುವ ಶಾಸನದ ಪ್ರಕಾರ ಹೊಯ್ಸಳ ವೀರಬಲ್ಲಾಳನು (II) ಬೀರಯ್ಯನ ಮಗ ಮಾಯಂಣನೆಂಬ ಅಧಿಕಾರಿಗೆ ಸಿರಿಊರಿನ ಮಲ್ಲಿಕಾರ್ಜುನ ದೇವರಿಗೆ ನೀಡಿದ ಕೆಲವು ದಾನಗಳ ಬಗೆಗೆ ತಿಳಿಸುತ್ತದೆ.ಬಹುಶಃ ಈಗ ದೇವಾಲಯದ ಪರಿಸರವನ್ನು ವೈಜ್ಞಾನಿಕವಾಗಿ ಪರಿಶೋಧಿಸಿದರೆ ಈ ದೇವಾಲಯದ ಬಗೆಗೆ ಅಧಿಕ ವಿವರಗಳು ಸಿಗುವ ಸಾಧ್ಯತೆಗಳಿವೆ. ಈಗ ಕೇವಲ ಮುರಿದ ಪಾಣಿಪೀಠ ಹಾಗೂ ಹಲವು ಶಿಲಾಮೂರ್ತಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಸುತ್ತಲೂ ಮರಗಿಡಗಳು ಬೆಳೆದಿವೆ. ಇದರ ಸಮೀಪದಲ್ಲಿ ಸುಂದರ ಶಿಲ್ಪಗಳಿರುವ ಒಂದು ಹೊಯ್ಸಳರ ಕಾಲದ ವೀರಗಲ್ಲು ಕಂಡುಬರುತ್ತದೆ.

## ದೊಡ್ಡ ಮಳ್ತೆ

ಸೋಮವಾರಪೇಟೆಯಿಂದ ಆರು ಕಿ. ಮೀ. ದೂರದಲ್ಲಿರುವ ದೊಡ್ಡ ಮಳ್ತೆಯು (ಸೋಮವಾರಪೇಟೆ ತಾಲೂಕು) ಒಂದು ಪ್ರಾಚೀನ ಸ್ಥಳ. ಈ ಊರನ್ನು ತಲುಪುವ ಮುಂಚೆ ದೊಡ್ಡದಾದ ಹೊನ್ನಮ್ಮನ ಕೆರೆಯ ಏರಿಯ ಮೇಲೆ ಹೋಗಬೇಕಾಗುತ್ತದೆ. ಈ ಊರಿನಲ್ಲಿ ದೊರೆತಿರುವ ಶಾಸನದ (ಸಂ. 88) ಪ್ರಕಾರ ಕ್ರಿ. ಶ. 15ನೇಯ ಶತಮಾನದ ಸುಮಾರಿಗೆ ಚೆಂಗಾಳ್ವ ವಂಶದ ಅನ್ನದಾನಿ ಅರಸನು ಈ ಕೆರೆಗೆ ತೂಬು ಕಟ್ಟಿಸಿದನು ಹಾಗೂ ಈ ಕಾರ್ಯವನ್ನು ವೆಂಕಟಯ್ಯ ಮತ್ತು ಮಲ್ಲಯ್ಯನೆಂಬವರು ನೆರವೇರಿಸಿದರೆಂದು ತಿಳಿದು ಬರುತ್ತದೆ. ಊರ ಹೊರಗೆ ರಸ್ತೆಯ ಪಕ್ಕದಲ್ಲೇ ಸಿದ್ದೇಶ್ವರ ದೇವಾಲಯವೆಂದು ಸ್ಥಳೀಯವಾಗಿ ಕರೆಯಲಾಗುವ ಗಂಗ-ಚೋಳರ ಶೈಲಿಯ ಕಟ್ಟಡವಿದೆ. ಈಗ ಸುತ್ತಲೂ ಮುಳ್ಳುಗಿಡಗಳಿಂದ ಆವೃತವಾಗಿದ್ದು ಒಂದು ಹುಟ್ಟು ಬಂಡೆಯು ಪಕ್ಕದಲ್ಲಿದೆ. ಈ ಬಂಡೆಯ ಮೇಲೆ ಅಸ್ಪಷ್ಟವಾದ ಅಪ್ರಕಟಿತ ಶಾಸನದ ಅಕ್ಷರಗಳು ಕಂಡುಬರುತ್ತವೆ. ಈ ದೇವಾಲಯದ ವಾಸ್ತುವಿನ್ಯಾಸಗಳಾದ ಚಿಕ್ಕದಾದ ಗರ್ಭಗೃಹ ಹಾಗೂ ಅರ್ಧಮಂಟಪ ಮಾತ್ರ ಉಳಿದಿದೆ. ಚೌಕಾಕಾರವಾದ ಪೀಠದ ಮೇಲೆ ಅಷ್ಟಕೋನಾಕಾರವಾದ ಮಧ್ಯಭಾಗವನ್ನು ಹೊಂದಿರುವ ಕಂಬಗಳು ಪೂರ್ವಗಂಗರ ಶೈಲಿಯನ್ನು ಪ್ರತಿನಿಧಿಸುತ್ತದೆ. ಗರ್ಭಗೃಹದ ದ್ವಾರದಲ್ಲಿ ಕಲಶದ ಮಾದರಿಯ ಉಬ್ಬುಶಿಲ್ಪವಿದೆ. ಗರ್ಭಗೃಹದೊಳಗೆ ಯಾವುದೇ ಶಿಲಾಮೂರ್ತಿಯಾಗಲೀ ಅಥವಾ ಶಿವಲಿಂಗವಾಗಲೀ ಇರುವುದಿಲ್ಲ. ಗರ್ಭಗೃಹದ ಮೇಲ್ಭಾಗದಲ್ಲಿ ಗಾರೆ ಮತ್ತು ಇಟ್ಟಿಗೆಯಿಂದ ಚೌಕಾಕಾರವಾಗಿ ನಿರ್ಮಿಸಲಾಗಿರುವ ದ್ರಾವಿಡ ಶೈಲಿಯ ಶಿಖರವಿದೆ. ದೇವಾಲಯವು ಶಿಥಿಲ ಸ್ಥಿತಿಯಲ್ಲಿ ಕಂಡು ಬರುತ್ತದೆ. ಅರ್ಧಮಂಟಪದಲ್ಲಿ ವಿಜಯನಗರ ಶೈಲಿಯ ಸೂರ್ಯಮೂರ್ತಿಯಿದೆ. ಊರ ಒಳಗೆ ಹೊನ್ನಮ್ಮನ ಕೆರೆಯ ದಂಡೆಯ ಮೇಲೆ ಎಡಭಾಗದಲ್ಲಿ ವಿಶಾಲವಾದ ಬಸವಣ್ಣ ದೇವಾಲಯವಿದ್ದು ಇದು ಆಧುನಿಕ ಕಟ್ಟಡವಾಗಿದೆ. ಊರ ಬಾಗಿಲಲ್ಲಿ ಕಟ್ಟೆಯ ಮೇಲೆ ಒಂದು ವೀರಗಲ್ಲಿದೆ. ಇದರಲ್ಲಿ ವೀರನು ಕೈಯಲ್ಲಿ ಬಿಲ್ಲು ಹಿಡಿದು ನಿಂತಿರುವನು ಮತ್ತು ಆತನ ಪಕ್ಕದಲ್ಲಿ ಎರಡು ದನಗಳು ಇರುವುದರಿಂದ ಇದು ತುರುಗೋಳ್ ಕಲ್ಲು ಎಂದು ತಿಳಿಯಬಹುದಾಗಿದೆ. ಊರ ಹಿಂದೆ ಎತ್ತರವಾಗಿ ಕಾಣುವ ಗವಿಬೆಟ್ಟದಲ್ಲಿ ನೈಜವಾದ ಗವಿಗಳಿದ್ದು, ಇದು ಆದಿಮಾನವನ ವಾಸಸ್ಥಳವಾಗಿರಬಹುದು. ಆದರೆ ಸ್ಥಳೀಯವಾಗಿ ಜನರು ಇವುಗಳನ್ನು ಪಾಂಡವರ ಗುಡಿಗಳೆಂದು ಕರೆಯುವರು. ಹೊನ್ನಮ್ಮನ ಕೆರೆಯ ಎಡಗಡೆ ದಂಡೆಯ ಸಮೀಪವೇ ಸುಮಾರು 500 ಅಡಿ ಎತ್ತರವಿರುವ (ಕಲ್ಲು ಚಪ್ಪಡಿಯ ಸಮಾಧಿಗಳಿಂದ ತುಂಬಿದ) ಮೋರಿ ಬೆಟ್ಟವಿದೆ.

ಹೊನ್ನಮ್ಮನ ಕೆರೆಯು ಕೊಡಗಿನಲ್ಲೇ ಅತ್ಯಂತ ವಿಶಾಲವಾದ ಕೆರೆಗಳಲ್ಲಿ ಒಂದಾಗಿದ್ದು 16.2 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಮೋರಿಬೆಟ್ಟದ ಮೇಲೆ ಸಮಾಧಿಗಳನ್ನು ಕಟ್ಟಿರುವ ಬೃಹತ್ ಶಿಲಾಯುಗದ ಮಾನವರು ಇದೇ ಕೆರೆಯನ್ನು ಬಳಸಿ ಇದರ ಪರಿಸರದಲ್ಲಿ (ದೊಡ್ಡಮಳ್ತೆ ಇತ್ಯಾದಿ) ಕೃಷಿಕರಾಗಿದ್ದಿರಬೇಕು. ಗವಿ ಬೆಟ್ಟದಲ್ಲಿರುವ ಗವಿಗಳಲ್ಲಿ ಅವರು ವಾಸವಾಗಿ ಇದ್ದಿರಬಹುದು. ಯೇಳುಸಾವಿರ ಸೀಮೆಯ ಒಬ್ಬ ವ್ಯಾಪಾರಿ ಮಲ್ಲಸೆಟ್ಟಿ ಎಂಬವನು ಕಟ್ಟಿಸಿದ ಈ ಕೆರೆಗೆ ನೀರು ಬಾರದಿರಲು ಅಕ್ಕೋಣಿ ಎಂಬ ತನ್ನ ಸೊಸೆಯನ್ನು ಅದಕ್ಕೆ ಬಲಿ ನೀಡಿದನೆಂಬ ಒಂದು ದಂತಕತೆಯಿದೆ.

## ನಂಜರಾಯಪಟ್ಟಣ

ನಂಜರಾಜಪಟ್ಟಣ ಅಥವಾ ನಂಜರಾಯಪಟ್ಟಣ (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 1,032) ವೆಂದು ಕರೆಯಲಾಗುವ (ಕುಶಾಲನಗರದಿಂದ 17 ಕಿ.ಮೀ.) ಈ ಪ್ರಾಚೀನ ಸ್ಥಳವು ಕಾವೇರಿ ನದಿಯ ಎಡದಂಡೆಯ ಮೇಲಿದೆ. ಪ್ರಾರಂಭದಲ್ಲಿ ಈ ಊರನ್ನು 'ಹೊಳೆಸಾಲಳ್ಳಿ' ಎಂದು ಕರೆಯಲಾಗುತ್ತಿತ್ತು. ಅನಂತರ, ಚೆಂಗಾಳ್ವ ವಂಶದ ನಂಜುಂಡ ರಾಜನು 16ನೇಯ ಶತಮಾನದಲ್ಲಿ ಇಲ್ಲಿ ಅರಮನೆ ಕಟ್ಟಿಸಿ 'ನಂಜರಾಯಪಟ್ಟಣ'ವೆಂದು ಇದಕ್ಕೆ ನಾಮಕರಣ ಮಾಡಿದನು. ಅಂಜನಗೇರಿ ಬಸದಿಯಲ್ಲಿ ದೊರೆತಿರುವ ನಂಜುಂಡ ರಾಜನ ಮಗ ಶ್ರೀಕಂಠನ ಕ್ರಿ.ಶ. 1544ರ ಶಾಸನದಲ್ಲೇ ನಂಜರಾಯಪಟ್ಟಣದ ಉಲ್ಲೇಖವಿದೆ. ಕೊಡಗು ರಾಜರ ಕಾಲದಲ್ಲಿ ನಂಜರಾಜಪಟ್ಟಣವು ತನ್ನ ಹಿಂದಿನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಇಲ್ಲಿನ ಪ್ರಮುಖ ದೇವಾಲಯಗಳೆಂದರೆ ನಂಜುಂಡೇಶ್ವರ ಮತ್ತು ವೀರಭದ್ರ. 'ರಾಜೇಂದ್ರನಾಮೆ'ಯಲ್ಲಿ ಇಲ್ಲಿ ವೀರಭದ್ರ ಮತ್ತು ನಂಜುಂಡೇಶ್ವರ ದೇವಾಲಯಗಳನ್ನು ಕೊಡಗಿನ ಅರಸರೇ ಕಟ್ಟಿಸಿದರೆಂದು ಉಲ್ಲೇಖಿತವಾಗಿದೆ ; ಇದು ನಿಜವಲ್ಲ. ಆದರೆ, ವೃದ್ಧ ಚಂಗಾಳ್ವ ರಾಜನು ಪಿರಿಯಾಪಟ್ಟಣವು ಮೈಸೂರಿನ ವಶವಾದ ಮೇಲೆ ಇಲ್ಲೇ ವಾಸವಿದ್ದು ಕೊನೆಯುಸಿರೆಳೆದನೆಂದು 'ರಾಜೇಂದ್ರನಾಮೆ' ಹೇಳಿದ್ದು ನಿಜವಿರಬಹುದು. ಹಾಗೂ ನಂಜುಂಡೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡುವಲ್ಲಿ ಕೊಡಗಿನ ಅರಸರ ಕೈವಾಡವಿರಬಹುದು ; ವೀರಭದ್ರ ದೇವಾಲಯ ಈಗ ಸಾಕಷ್ಟು ಶಿಥಿಲವಾಗಿದ್ದು ಮೂಲತಃ ಅದು ಹೊಯ್ಸಳ ಶೈಲಿಯ ಕಟ್ಟಡವಾಗಿರುವುದರಿಂದ 'ರಾಜೇಂದ್ರ

ನಾಮೆ'ಯಲ್ಲಿನ ಅವರ ಬಗೆಗಿನ ಉಲ್ಲೇಖವು ಆಧಾರರಹಿತ ವಾದುದೆಂದು ಹೇಳಬಹುದು. ನಂಜುಂಡೇಶ್ವರ ದೇವಾಲಯವು ವಿಜಯನಗರೋತ್ತರಶೈಲಿಯಲ್ಲಿದ್ದು ಮೂಲತಃ ಕಲ್ಲಿನ ಕಟ್ಟಡ ವಾಗಿವೆ. ಇವರಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ಮುಕ್ತ ಮುಖಮಂಟಪವಿದೆ. ಗರ್ಭಗೃಹವು ಚೌರಸ್ರವಾಗಿದ್ದು, ಮೇಲ್ಭಾಗದಲ್ಲಿ ಎತ್ತರವಾದ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿರುವ ದ್ರಾವಿಡ ಶೈಲಿಯ ಶಿಖರವಿದೆ; ಹಾಗೂ ಇದರ ಮುಂಭಾಗದಲ್ಲಿ ಶುಕನಾಸವಿದೆ. ಶಿಖರದಲ್ಲಿ ನಾಲ್ಕು ಮೂಲೆಗಳಲ್ಲಿ ನಾಲ್ಕು ನಂದಿಗಳು, ಗರುಡ, ಶಿವ-ಪಾರ್ವತಿ, ನಟರಾಜ, ನರ್ತಿಸುತ್ತಿರುವ ಸ್ತ್ರೀಯರು, ಗಂಧರ್ವರು, ಸಂಗೀತದ ತಂಡದವರು ಇನ್ನೂ ಮುಂತಾದವುಗಳ ಆಕರ್ಷಕ ಗಾರೆಯ ಶಿಲ್ಪಗಳಿವೆ. ಗರ್ಭಗುಡಿಯ ಒಳಗೆ ಚಂಗಾಳ್ವ ವಂಶದ ನಂಜುಂಡರಾಜನ ಗದ್ದುಗೆ ಇದೆ. ಇವನೇ 'ರಾಜೇಂದ್ರನಾಮೆ' ತಿಳಿಸಿದ ಚೆಂಗಾಳ್ವ ವಂಶದ ವೃದ್ಧರಾಜ. ಅರ್ಧಮಂಟಪದ ಮುಂಭಾಗ ದಲ್ಲಿ ಎರಡೂ ಕಡೆಗಳಲ್ಲಿ ಚಿಕ್ಕದಾದ ದೇವ ಕೋಷ್ಠಗಳಿದ್ದು, ಅವುಗಳಲ್ಲಿ ಗಣಪತಿ ಮತ್ತು ಸುಬ್ರಹ್ಮಣ್ಯರ ಶಿಲಾಮೂರ್ತಿ ಗಳಿವೆ. ಗಣಪತಿಯ ಪಕ್ಕದಲ್ಲಿರುವ ಸಣ್ಣಗೂಡಿನಲ್ಲಿ ಕನ್ನಂಬಾಡಿಯಮ್ಮನ ಬೆಳ್ಳಿ ವಿಗ್ರಹವಿದೆ. ನವರಂಗದಲ್ಲಿರುವ ನಾಲ್ಕು ಕಡೆದ ಅಥವಾ ಕಡಚಿಯಲ್ಲಿ ತಿರುಗಿಸಲ್ಪಟ್ಟಿರುವ ಹೊಯ್ಸಳ ಶೈಲಿಯ ಕಂಬಗಳನ್ನು ಬಹುಶಃ ಸಮೀಪದಲ್ಲೇ ಇರುವ ಹೊಯ್ಸಳರ ಕಾಲದ ವೀರಭದ್ರ ದೇವಾಲಯದ ಅವಶೇಷಗಳಿಂದ ತಂದಿರಬಹುದು. ಉತ್ಸವ ಕಾಲದಲ್ಲಿ ಉಪ ಯೋಗಿಸಲಾಗುವ ದೇವರ ಮುಖವಾಡಗಳು ಹಾಗೂ ಖಡ್ಗ ಗಳು ನವರಂಗದ ಗೂಡಿನಲ್ಲಿವೆ. ಇದರ ಪಕ್ಕದಲ್ಲಿರುವ ಕೊಠಡಿಯಲ್ಲಿ ಕುಳಿತ ಭಂಗಿಯ ಹೊಯ್ಸಳ ಶೈಲಿಯ ದ್ವಿಬಾಹು ಪಾರ್ವತಿಯ ಒಂದು ಸುಂದರ ಶಿಲಾಮೂರ್ತಿಯಿದೆ. ಹೂವಿನ ಅಲಂಕಾರವಿರುವ ಈ ಸ್ತ್ರೀ ವಿಗ್ರಹವು ತ್ರಿಶೂಲ ಮತ್ತು ಡಮರುಗಳನ್ನು ಎರಡೂ ಕೈಗಳಲ್ಲಿ ಹಿಡಿದಿರುವಂತೆ ಕೆತ್ತಲಾಗಿದೆ. ಪಾರ್ವತಿಯ ಪಕ್ಕದಲ್ಲಿ ಬಸವಣ್ಣನ ವಿಗ್ರಹ ವಿದ್ದು, ಅದರ ತಲೆಯ ಮೇಲೆ ಒಂದು ಕಾಲನ್ನು ಇರಿಸಿರು ವಂತೆ ಕೆತ್ತಲಾಗಿದೆ. ನವರಂಗದ ಹೊರಗೆ ದ್ವಾರದ ಬಲಭಾಗ ದಲ್ಲಿ ಇನ್ನೊಂದು ಕೊಠಡಿಯಿದ್ದು ಒಳಗೆ ಖಾಲಿಯಿರುವ ಪಾಣಿಪೀಠವಿದೆ. ಇಲ್ಲಿ ಮೊದಲು ಕಾಶಿಯಿಂದ ತಂದು ಪ್ರತಿಷ್ಠಾಪಿಸಲಾಗಿದ್ದ ಶಿವಲಿಂಗವಿತ್ತೆಂದು ಕೆ. ಕೆ. ಸುಬ್ಬಯ್ಯ, ತಮ್ಮ 'ಆರ್ಕಿಯಾಲಜಿ ಆಫ್ ಕೂರ್ಗ್' ಎಂಬ ಪುಸ್ತಿಕೆಯಲ್ಲಿ ದಾಖಲಿಸಿದ್ದಾರೆ. ಇದರ ದ್ವಾರಬಂಧದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಮುಖ ಮಂಟಪದಿಂದ ಇಳಿದು ಹೋಗಲು ಮೆಟ್ಟಲುಗಳಿವೆ ಹಾಗೂ ಎದುರಿಗೆ ಎತ್ತರವಾದ (ಸು. ಒಂಭತ್ತು ಮೀಟರ್) ಧ್ವಜಸ್ತಂಭವಿದೆ ಹಾಗೂ ಇದರ ಮೇಲ್ಭಾಗದಲ್ಲಿ ಒಂದು ಪೀಠವಿದ್ದು ಸಿಂಹ, ಶಂಖ ಊದು ತ್ತಿರುವ ಸ್ತ್ರೀ ಮತ್ತು ನಟರಾಜನ ಸುಂದರ ಉಬ್ಬು ಶಿಲ್ಪ ಗಳಿವೆ. ಇದರಿಂದ ಅನತಿ ದೂರದಲ್ಲಿ ಮಹಾ ದ್ವಾರಕ್ಕೆ ಮುಖ ಮಾಡಿರುವ ನಂದಿಯನ್ನು ಎತ್ತರವಾದ ಜಗತಿಯ ಮೇಲೆ ಛಾವಣಿ ಇರುವ ಮಂಟಪದಲ್ಲಿ ಇರಿಸಲಾಗಿದೆ. ಇದರ ಮೇಲ್ಭಾಗದಲ್ಲೂ ಗಾರೆ ಮತ್ತು ಇಟ್ಟಿಗೆಯ ಕಿರಿದಾದ ಶಿಖರ ವಿದೆ. ಪ್ರಸ್ತುತ ನಂಜುಂಡೇಶ್ವರ ದೇವಾಲಯದ ಮೇಲ್ಭಾಗ ದಲ್ಲಿ ಛಾವಣಿಯ ದುರಸ್ತಿಯ ಕಾರ್ಯ ನಡೆಯುತ್ತಿದೆ (1991). ಉಗಾದಿಯ ನಂತರ 15 ದಿನಕ್ಕೆ ನಂಜುಂಡೇಶ್ವರನ ಜಾತ್ರೆ ನಡೆಯುತ್ತದೆ. ಜಾತ್ರೆಯ ಸಂದರ್ಭದಲ್ಲಿ ಹೂವಿನಿಂದ ಅಲಂಕಾರ ಮಾಡಿರುವ ಪಲ್ಲಕ್ಕಿ ಉತ್ಸವವೂ ಸಹ ನಡೆಯುತ್ತದೆ. ಈ ದೇವಾಲಯದ ಪಶ್ಚಿಮಕ್ಕೆ ಒಂದು ಕಿರಿದಾದ ಕೊಠಡಿ ಇದ್ದು,ಒಳಗೆ ಬಲಗೈಯಲ್ಲಿ ಪರಶು ಹಾಗೂ ಎಡಗೈಯಲ್ಲಿ ಚಕ್ರ ಹಿಡಿದಿರುವ ವೀರಭಾವವನ್ನು ಪ್ರತಿನಿಧಿಸುವ ಗಂಡಿನ ವಿಗ್ರಹವಿದೆ. ಈ ದೇವಾಲಯಗಳ ಆವರಣದಿಂದ ಬಲಭಾಗದಲ್ಲಿ ಹೋದರೆ ಕಾವೇರಿ ನದಿಯು ಅರ್ಧಚಂದ್ರಾಕಾರವಾಗಿ ಹರಿದು, ಇಲ್ಲಿಂದ ಸ್ವಲ್ಪ ದೂರದಲ್ಲಿ ಕವಲೊಡೆದು ಎರಡು ದ್ವೀಪಗಳನ್ನು ಸೃಷ್ಟಿಸಿರುವುದು ವ್ಯಕ್ತ ವಾಗುತ್ತದೆ. ನಂಜುಂಡೇಶ್ವರ ದೇವಾಲಯದ ಬಲಭಾಗದಲ್ಲಿ ಸ್ವಲ್ಪ ದೂರ ಹೋದರೆ ನದಿಯ ಅಂಚಿನಲ್ಲಿ ಕಂಡುಬರುವ ಹಳೆಯ ಶಿಲಾ ಕಂಬಗಳನ್ನು ಎಂ. ಜಿ. ನಾಗರಾಜ್ ಅವರು ಸಂಶೋಧಿಸಿ ಇವು ಕೊಂಗಾಳ್ವರ ಕಾಲದ ವೀರಭದ್ರ ದೇವಾಲಯದ ಅವಶೇಷಗಳೆಂದು ಅಭಿಪ್ರಾಯಪಡುತ್ತಾರೆ. ಇದು ಕೊಡಗು ಶ್ರೀರಂಗಪಟ್ಟಣದ ಭಾಗವಾಗಿತ್ತೆಂಬುದೂ ಅವರ ಅಭಿಪ್ರಾಯ. ಈ ನದಿದಂಡೆಯ ಇಡೀ ಪರಿಸರವು ರಮ್ಯ ವಾಗಿದೆ. ನದಿಯನ್ನು ದಾಟಿ ಹೋದರೆ, ಆಚೆಯ ದಡದಲ್ಲಿ ಟಿಪ್ಪುಸುಲ್ತಾನನ ಸೇನಾಧಿಪತಿ ಹಜರತ್ ಮೋಮಿನ್ ಮಸ್ತಾನ್‌ನದೆಂದು ಹೇಳಲಾಗುವ ದರ್ಗಾವಿದೆ. ಇಲ್ಲಿ ವಾರ್ಷಿಕ ವಾಗಿ ಉರುಸ್ ನಡೆಯುತ್ತದೆ. ನಂಜರಾಜಪಟ್ಟಣದಲ್ಲಿ ಟಿಪ್ಪುವಿನ ಕಾಲದ್ದೆಂದು ಸ್ಥಳೀಯವಾಗಿ ಹೇಳಲಾಗುವ ಒಂದು ಜುಮ್ಮಾ ಮಸೀದಿ ಇದೆ.

ನಂಜರಾಯ ಪಟ್ಟಣದಲ್ಲಿ ಹಿಂದೆ ಜೈನ ಬಸದಿ ಇದ್ದು ಈಗ ಅದು ಖಾಸಗಿ ತೋಟದಲ್ಲಿ ಸೇರಿಹೋಗಿದೆ ಎಂದು ತಿಳಿದು ಬರುತ್ತದೆ. ಬಸದಿಯ ಅವಶೇಷಗಳೇನೂ ಕಂಡು ಬರು ವುದಿಲ್ಲ. ಕಾವೇರಿ ನದಿಯ ದಂಡೆಯಲ್ಲಿ ಪಲ್ಲಕ್ಕಿ ಗದ್ದೆಯಲ್ಲಿ,

ಆನೆಯೊಡನೆ ಹೋರಾಡಿದ ವೀರನ ಚಿತ್ರಣವಿರುವ ವೀರಗಲ್ಲಿದೆ. ವೀರನ ಜೊತೆಗೆ ಸತಿ ಹೋಗುತ್ತಿರುವ ಮಹಿಳೆಯ ಶಿಲ್ಪವೂ ಸಹ ಇದರಲ್ಲಿ ಕಂಡುಬರುತ್ತದೆ. ನಂಜರಾಯಪಟ್ಟಣದ ಪ್ರವೇಶದ ರಸ್ತೆಯ ಪಕ್ಕದಲ್ಲೆ ಒಂದು ಖಾಸಗಿ ತೋಟದಲ್ಲಿ ಹೊಯ್ಸಳ ಶೈಲಿಯ ಶಿಥಿಲವಾದ ವೀರಭದ್ರ ದೇವಾಲಯವಿದೆ. ಇದು ದ್ವಿಕೂಟಾಚಲವಾಗಿದ್ದು ಸಾಂಪ್ರದಾಯಿಕ ಹೊಯ್ಸಳ ಕಟ್ಟಡವಾಗಿದೆ. ಭಾಗಶಃ ಬಿದ್ದು ಹೋಗಿರುವ ಇಲ್ಲಿನ ಕಡೆದ ದುಂಡು ಕಂಬಗಳಲ್ಲಿ ವಿವಿಧ ನೃತ್ಯ ಭಂಗಿಗಳನ್ನು ಪ್ರತಿನಿಧಿಸುವ ಸ್ತ್ರೀವಿಗ್ರಹಗಳ ಸಣ್ಣ ಸಣ್ಣ ಶಿಲ್ಪಗಳಿವೆ. ಗರ್ಭ ಗೃಹಗಳೆರಡೂ ಪೂರ್ಣವಾಗಿ ಬಿದ್ದಿದ್ದು ಅರ್ಧಮಂಟಪದಲ್ಲಿ ಖಾಲಿಯಿರುವ ಪಾಣಿಪೀಠವಿದೆ. ಯಾವುದೇ ಶಿಲಾಮೂರ್ತಿ ಗಳೂ ಕಂಡು ಬರುವುದಿಲ್ಲ. ಆದರೆ, ದೇವಾಲಯದ ಅವಶೇಷ ಗಳು ಚೆಲ್ಲಾಪಿಲ್ಲಿಯಾಗಿ ಮಣ್ಣಿನ ರಾಶಿಗಳಲ್ಲಿ ಹುದುಗಿ ಹೋಗಿವೆ.

ನಂಜುಂಡೇಶ್ವರ ದೇವಾಲಯದಿಂದ ಎಡಭಾಗದಲ್ಲಿ ಹಿಂಭಾಗಕ್ಕೆ ಹೋದರೆ ಕಾವೇರಿ ಹರಿಯುತ್ತಿರುವುದು ಕಾಣು ತ್ತದೆ ಮತ್ತು ಬೇಸಿಗೆಯಲ್ಲಿ ಇದನ್ನು ಕಾಲ್ನಡಿಗೆಯಲ್ಲಿ ದಾಟಿ ಹೋದರೆ ಸುಮಾರು 11ಎಕರೆ ವಿಸ್ತೀರ್ಣವಿರುವ, ಸುತ್ತಲೂ ಅರಣ್ಯಗಳಿಂದ ಕೂಡಿರುವ ದ್ವೀಪದಲ್ಲಿ ಮುರುಘ ಮಠದ ಶಾಖೆಯ ಮಠ ಹಾಗೂ ಸೋಮೇಶ್ವರ ಸ್ವಾಮಿ ಗದ್ದುಗೆ ಇದೆ. ಈ ಕಟ್ಟಡವನ್ನು ಕಲ್ಲಿನಲ್ಲಿ ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಹಳೆಯದಾದ ಈ ಮಠವು ಕೇವಲ ಬೇಸಿಗೆ ಯಲ್ಲಿ ತೆರೆದಿರುತ್ತದೆ ; ಉಳಿದಂತೆ ಈ ದ್ವೀಪವು ನೀರಿನಿಂದ ಆವೃತವಾಗಿರುತ್ತದೆ. ಇದೊಂದು ರಮ್ಯತಾಣ. ಇದರ ಸಮೀಪ ದಲ್ಲೇ ನದಿಯಾಚೆಗೆ ಇನ್ನೊಂದು ದ್ವೀಪವಾದ ದುಬಾರೆ ಅರಣ್ಯದಲ್ಲಿ ಸುಂದರ ಪರಿಸರದ ಮಧ್ಯದಲ್ಲಿ ಅರಣ್ಯ ಇಲಾಖೆ ಯವರ ಪ್ರವಾಸಿ ಬಂಗಲೆಯಿದೆ. ಇಲ್ಲಿಗೆ ಯಾತ್ರಿಕರು ವಿಹಾರಾರ್ಥವಾಗಿ ಬಂದು ತಂಗುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಈ ಬಂಗಲೆಯ ಸಮೀಪದಲ್ಲೆ ಇನ್ನೊಂದು ದರ್ಗಾ ಇದೆ. ಕೊಡಗು ಶ್ರೀರಂಗಪಟ್ಟಣ ಎಂದು ಹೇಳಲಾಗುವ (ಈಗ ಇಲ್ಲದ) ಮತ್ತೊಂದು ಕಾವೇರಿ ದ್ವೀಪವು ನಂಜರಾಜ ಪಟ್ಟಣದಿಂದ 20 ಕಿ. ಮೀ. ದೂರದಲ್ಲಿರುವ ಮೂಲ್ದರೆ ಗ್ರಾಮದ ವ್ಯಾಪ್ತಿಯಲ್ಲಿರುವ ಘಟ್ಟಹಳ್ಳ ಪ್ರದೇಶದಲ್ಲಿತ್ತೆಂದು ತಿಳಿದು ಬರುತ್ತದೆ.[1] ಆದರೆ ಈಗ ಶ್ರೀರಂಗಪಟ್ಟಣವೆಂದು ಹೇಳಲಾಗುವ ಐತಿಹಾಸಿಕ ಪ್ರದೇಶವು ಖಾಸಗಿ ತೋಟವೊಂದ ರಲ್ಲಿ ಮರೆಯಾಗಿ ಹೋಗಿದೆ. ಸುಮಾರು ಕ್ರಿ. ಶ. 1245ರ ವೇಳೆಗೆ ಚಂಗಾಳ್ವರು ಕಿಗ್ಗಟ್ಟುನಾಡಿನ ಪಾಲ್ಪರೆಯಿಂದ ಕಾವೇರಿ ದಕ್ಷಿಣದಲ್ಲಿರುವ ಈ ಶ್ರೀರಂಗಪಟ್ಟಣಕ್ಕೆ ತಮ್ಮ ರಾಜಧಾನಿಯನ್ನು ಬದಲಾಯಿಸಿದರೆಂದು ತಿಳಿದು ಬರುತ್ತದೆ. "ಪಾಲ್ಪರೆಯಲ್ಲಿ ಮತ್ತು ಇಲ್ಲಿ ದೊರೆತಿರುವ ದೇವಾಲಯದ ಅವಶೇಷಗಳನ್ನು ಹಾಗೂ ದೇವ ದೇವಿಯರ ವಿಗ್ರಹಗಳನ್ನು ಗಮನಿಸಿದರೆ ಚೆಂಗಾಳ್ವ ಬೊಪ್ಪದೇವ ಹಾಗೂ ಹೊಯ್ಸಳ ಸೋಮೇಶ್ವರರ ಹರಿ–ಹರ ಸಮನ್ವಯ ದೃಷ್ಟಿ, ಕಲಾತ್ಮಕ ಅಭಿರುಚಿಹಾಗೂಧರ್ಮನಿಷ್ಠೆಗಳು ಗೋಚರವಾಗುತ್ತವೆ"ಎಂದು ಎಂ. ಜಿ. ನಾಗರಾಜ್ ಅಭಿಪ್ರಾಯ ಪಡುತ್ತಾರೆ.[2] ಇವರೇ ಹೇಳಿರುವಂತೆ ಇತ್ತೀಚೆಗೆ ನಂಜರಾಯಪಟ್ಟಣದಲ್ಲಿ ಲಭ್ಯ ವಾಗಿರುವ ಅಪ್ರಕಟಿತ 'ತುರುಗೋಳ್' ಶಾಸನದ ರೀತ್ಯ ಶಕ 1220ನೇಯ ರುಧಿರೋದ್ಗಾರಿ ಸಂವತ್ಸರದಲ್ಲಿ ಮಹಾ ಮಂಡಳೇಶ್ವರ ವೀರಚೋಳ ದೇವರಸನ ಆಳ್ವಿಕೆ ಕಂಡುಬರುವ ಕಾರಣ, ಅದು ಹರಿಹರದೇವನಿಗೆ ಅನ್ವಯಿಸುತ್ತದೆ. ಆದರೆ, ಕ್ರಿ. ಶ. 1298ರಲ್ಲಿಯೂ ಚಂಗಾಳ್ವರು ಹೊಯ್ಸಳರ ಮಾಂಡಲಿಕರಾಗಿ ಕೊಡಗು ಶ್ರೀರಂಗಪಟ್ಟಣವನ್ನು ಆಳಿದರೆಂದು ಅರಿವಾಗುತ್ತದೆ. ಪ್ರಸ್ತುತ ಈ ಸ್ಥಳದಲ್ಲಿ ಯಾವುದೇ ಹೆಚ್ಚಿನ ಮಾಹಿತಿಗಳೂ ಲಭ್ಯವಾಗಿಲ್ಲ.

## ನಾಗರಹೊಳೆ

ನಾಗರಹೊಳೆಯು (ವೀರರಾಜಪೇಟೆ ತಾ||) ವೀರರಾಜಪೇಟೆ ಯಿಂದ 68 ಕಿ.ಮೀ., ಮಡಿಕೇರಿಯಿಂದ ಹಾಗೂ ಮೈಸೂರಿ ನಿಂದ 96 ಕಿ. ಮೀ. ದೂರದಲ್ಲಿರುವ ರಾಜ್ಯದಲ್ಲೇ ಪ್ರಸಿದ್ಧ ವಾದ ರಾಷ್ಟ್ರೀಯ ಉದ್ಯಾನವನ. ಈ ಅರಣ್ಯಕ್ಕೆ 'ನಾಗರಹೊಳೆ' ಎಂದು ಕರೆಯಲು ಮುಖ್ಯವಾದ ಭೌಗೋಳಿಕ ವಿವರಣೆಯ ಪ್ರಕಾರ ನಾಲ್ಕೇರಿ ಅರಣ್ಯದಲ್ಲಿ ಉಗಮಿಸುವ ನಾಗರಹೊಳೆಯು ಈ ಉದ್ಯಾನವನದ ದಟ್ಟವಾದ ಅರಣ್ಯದ ಮೂಲಕ ಹಾವಿನೋಪಾದಿಯಲ್ಲಿ ಹರಿಯುತ್ತಿರುವುದು. ಆದರೆ ನಾಗರಹೊಳೆಯು ವೈನಾಡು ಜಿಲ್ಲೆಯ (ಕೇರಳ ರಾಜ್ಯ) ತೋಲುಪಟ್ಟಿ ಎಂಬಲ್ಲಿ ಗದ್ದೆಯ ಬಳಿಯಲ್ಲಿ ತೋಡಿನ ರೂಪ ವಾಗಿ ಹರಿದು ಅನಂತರ ಕರ್ನಾಟಕವನ್ನು ಪ್ರವೇಶಿಸಿದ ಮೇಲೆ ಹಾವಿನೋಪಾದಿಯಲ್ಲಿ ಹರಿಯುವ ನದಿಯಾಗಿ ಕಾಣಿಸಿಕೊಳ್ಳು ತ್ತದೆಂದು, ಎಂ. ಜಿ. ನಾಗರಾಜ್ ಅಭಿಪ್ರಾಯಪಡುತ್ತಾರೆ.

---

1. ಎಂ. ಜಿ. ನಾಗರಾಜ್, 'ಇತಿಹಾಸ ದರ್ಶನ', ಸಂಪುಟ 5, ಪುಟ 110–111.
2. ಅದೇ.

ಈ ಉದ್ಯಾನವನದ ಮೂಲಕ ಹರಿಯುವ ನಾಗರಹೊಳೆಯು ತಾರಕಾ ನದಿಯೊಡಗೂಡಿ ಕಬಿನಿಯನ್ನು ಸೇರುತ್ತದೆ. ಅನಂತರ ಲಕ್ಷ್ಮಣತೀರ್ಥ ಹಾಗೂ ಕಬಿನಿಗಳೆರಡೂ ಈ ಅರಣ್ಯದ ವ್ಯಾಪ್ತಿಯಲ್ಲಿ ಹರಿಯುತ್ತವೆ.

ನಾಗರಹೊಳೆ ಉದ್ಯಾನ ಮತ್ತು ಕಾಕನಕೋಟೆಗಳೆರಡೂ ಮೈಸೂರು ಮತ್ತು ಕೊಡಗಿನ ರಾಜಮಹಾರಾಜರುಗಳಿಗೆ, ಅನಂತರ ಬ್ರಿಟಿಷ್ ಅಧಿಕಾರಿಗಳಿಗೆ ಮನೋರಂಜನೆಗೆ ಮತ್ತು ಬೇಟೆಗಳಿಗಾಗಿ ಮೀಸಲಾಗಿದ್ದ ಹೆಸರಾದ ಅರಣ್ಯ ಪ್ರದೇಶಗಳಾಗಿದ್ದವು. ಆಗಿನ ಕೊಡಗಿನ ಸರ್ಕಾರವು ಮೊದಲಬಾರಿಗೆ ಜುಲೈ 1955ರಲ್ಲಿ ವನ್ಯಮೃಗ ಅಭಯಾರಣ್ಯ ಕ್ಷೇತ್ರವನ್ನು ರಚಿಸಿತು. ಆಗ ಈ ಅಭಯಾರಣ್ಯದ ವಿಸ್ತೀರ್ಣ 285 ಚದರ ಕಿ. ಮೀ. ಗಳಷ್ಟು ವಿಸ್ತಾರಗೊಳಿಸಲಾಯಿತು. ಅನಂತರ 1975ರಲ್ಲಿ ಮೈಸೂರು ಜಿಲ್ಲೆಯ ಕಾಕನಕೋಟೆ, ಮೇಟುಕುಪ್ಪೆ, ವೀರನಹೊಸಳ್ಳಿ ಮತ್ತು ಕಚುವನಹಳ್ಳಿ ಮುಂತಾದ ಪ್ರದೇಶಗಳನ್ನು ಈ ಅಭಯಾರಣ್ಯಕ್ಕೆ ಸೇರಿಸಿ, ಇದರ ವ್ಯಾಪ್ತಿಯನ್ನು 571 ಚದರ ಕಿ. ಮೀ.ಗಳಷ್ಟು ವಿಸ್ತಾರಗೊಳಿಸಲಾಯಿತು. ತರುವಾಯ 1983ರಲ್ಲಿ ನಾಗರಹೊಳೆ ಅಭಯಾರಣ್ಯವನ್ನು ರಾಷ್ಟ್ರೀಯ ಉದ್ಯಾನವನ್ನಾಗಿ ಮಾರ್ಪಡಿಸಲಾಯಿತು. ಪುನಃ 1988ರಲ್ಲಿ ಈ ಉದ್ಯಾನವನದ ವ್ಯಾಪ್ತಿಯನ್ನು 643 ಚದರ ಕಿ.ಮೀ.ಗಳಿಗೆ ವಿಸ್ತರಿಸಲಾಯಿತು.

ನಾಗರಹೊಳೆಯ ಕಾರಾಪುರದ ಪ್ರವಾಸಿ ಮಂದಿರವು ಆಕರ್ಷಕವಾದ ತಾಣದಲ್ಲಿದೆ. ಈ ಬಂಗಲೆಗೆ ಒಂದು ಕಡೆ ಮಾತ್ರ ಪ್ರವೇಶವಿದ್ದು, ಉಳಿದ ಕಡೆ ಕಬಿನಿ ಜಲಾಶಯದ ನೀರು ಸುತ್ತುವರಿದಿದೆ. ಕೊಡಗಿನ ಎಲ್ಲೆಯಲ್ಲಿರುವ ನಾಗರಹೊಳೆ ಅರಣ್ಯದ ಹಾಗೆ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿನ ಕಾಕನಕೋಟೆ, ಕಾರಾಪುರ ಅರಣ್ಯಗಳು ಹಿಂದೆ ನಿರ್ಜನ ಹಾಗೂ ದುರ್ಗಮ ಪ್ರದೇಶಗಳಾಗಿದ್ದು, ವಿವಿಧ ವನ್ಯಮೃಗಗಳು ಇಲ್ಲಿ ನಿರ್ಭಯ ಜೀವನ ನಡೆಸುತ್ತಿದ್ದವು. ಕಾಲ ಗತಿಸಿದಂತೆ ಅರಣ್ಯ ಪ್ರದೇಶ ಕುಗ್ಗುತ್ತಾ ಬಂದು, ದುರ್ಗಮವಾಗಿದ್ದ ಅಂದಿನ ಅರಣ್ಯ ಇಂದು ಸಾರ್ವಜನಿಕರು ಸಂಚರಿಸಬಹುದಾದ ಸುಗಮ ಪ್ರದೇಶವಾಗಿದೆ. ವನ್ಯ ಪ್ರಾಣಿಗಳ ಸಂತತಿಯನ್ನು ಸಂರಕ್ಷಿಸಿ, ಅವುಗಳು ಸ್ವೇಚ್ಛೆಯಿಂದ ಕಾಡುಗಳಲ್ಲಿ ನಿರ್ಭಯವಾಗಿ ವಿಹರಿಸಲು ಅನುಕೂಲವಾಗುವಂತೆ ಸೂಕ್ತ ಪರಿಸರವನ್ನು ಸ್ಥಾಪಿಸಲು ಈಗ ರಾಷ್ಟ್ರೀಯ ಉದ್ಯಾನವನವು ಪ್ರಯತ್ನಿಸುತ್ತಿದೆ. (ನಾಗರಹೊಳೆ ಉದ್ಯಾನವನದಲ್ಲಿರುವ ಸಸ್ಯ ಹಾಗೂ ವನ್ಯ ಪ್ರಾಣಿಗಳ ಸಂಪತ್ತಿನ ಬಗೆಗೆ ಹೆಚ್ಚಿನ ವಿವರಗಳಿಗಾಗಿ ಒಂದನೇ ಅಧ್ಯಾಯದ ಪುಟ 36 ಮತ್ತು 37ಗಳನ್ನು ನೋಡಿ). ನಾಗರಹೊಳೆ ರಾಷ್ಟ್ರೀಯ ಉದ್ಯಾನವನವು ದೇಶೀಯ ಹಾಗೂ ವಿದೇಶೀಯಪ್ರವಾಸಿಗರಿಗೆ ಅಚ್ಚುಮೆಚ್ಚಿನ ಪ್ರವಾಸಿ ಸ್ಥಳವಾಗಿ ಅಭಿವೃದ್ಧಿ ಹೊಂದುತ್ತಲಿದೆ. ಬೆಂಗಳೂರು, ಮೈಸೂರು ಹಾಗೂ ಮಡಿಕೇರಿಗಳಿಂದ ಈ ಸ್ಥಳವನ್ನು ತಲುಪಲು ಉತ್ತಮ ಸಾರಿಗೆ ವ್ಯವಸ್ಥೆಯಿದೆ. ನಾಗರಹೊಳೆಯಲ್ಲಿ 'ಕಾವೇರಿ' ಮತ್ತು 'ಗಂಗೋತ್ರಿ'ಗಳೆಂಬ ಅರಣ್ಯ ಇಲಾಖೆಯ ಎರಡು ಉತ್ತಮವಾದ ವಸತಿ ಗೃಹಗಳಿವೆ. ಇಷ್ಟೇ ಅಲ್ಲದೆ ಶಾಲಾ ಕಾಲೇಜುಗಳಿಂದ ಹಾಗೂ ತಂಡಗಳಲ್ಲಿ ಬರುವ ಪ್ರವಾಸಿಗರಿಗಾಗಿ 20 ಹಾಸಿಗೆಗಳ ಸೌಲಭ್ಯವಿರುವ 'ಡಾರ್ಮೆಟರಿ'ಗಳಿವೆ. ಇದಲ್ಲದೇ ನಾಗರಹೊಳೆಗೆ ಸಮೀಪವಿರುವ ಮುರ್ಕಲ್ ಎಂಬಲ್ಲಿ ಅರಣ್ಯ ಇಲಾಖೆಯವರಿಗೆ ಸೇರಿದ ವಸತಿ ಗೃಹವಿದೆ. ವನ್ಯಪ್ರಾಣಿಗಳ ವೀಕ್ಷಣೆಗೆ ಸಾಮಾನ್ಯವಾಗಿ ಪ್ರತಿದಿನ ಬೆಳಗಿನ 6 ಘಂಟೆಯಿಂದ 10 ಘಂಟೆ ಮತ್ತು ಸಂಜೆ 5 ಘಂಟೆಯಿಂದ 6-30ರ ವರೆಗೆ ಅವಕಾಶವಿರುತ್ತದೆ ಹಾಗೂ ಅದು ಸೂಕ್ತ ಸಮಯವಾಗಿರುತ್ತದೆ. ವನ್ಯಪ್ರಾಣಿಗಳ ವೀಕ್ಷಣೆಗೆ ಅರಣ್ಯ ಇಲಾಖೆಯ ವಾಹನದಲ್ಲಿ ಹಾಗೂ ಆನೆಯ ಮೇಲೆ ಸವಾರಿ ಮಾಡಿ ಸುತ್ತಾಡಲು ಸಾರ್ವಜನಿಕರಿಗೆ ಅವಕಾಶವಿರುತ್ತದೆ. ವನ್ಯಪ್ರಾಣಿಗಳ ಶಾಂತತೆಯನ್ನು ಕಾಪಾಡುವ ದೃಷ್ಟಿಯಿಂದ ಉದ್ಯಾನವನದ ಪ್ರದೇಶದಲ್ಲಿ ಸಂಜೆ 6 ರಿಂದ ಬೆಳಗಿನ 6 ಗಂಟೆಯವರೆಗೆ ವಾಹನಗಳ ಓಡಾಟವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪ್ರವಾಸಿಗರ ಅನುಕೂಲಕ್ಕಾಗಿ ಉದ್ಯಾನವನದ ಅರಣ್ಯ ಇಲಾಖೆ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತದೆ. ನಾಗರಹೊಳೆ ಉದ್ಯಾನವನ್ನು ಸಂದರ್ಶಿಸಲು ಬೇಸಿಗೆಕಾಲ ಅತ್ಯುತ್ತಮ. ಜೂನ್ 15 ರಿಂದ ನವೆಂಬರ್ 15ರ ವರೆಗೆ ಮಳೆಗಾಲವಿರುವುದರಿಂದ ಪ್ರಾಣಿಗಳ ವೀಕ್ಷಣೆ ಸಾಧ್ಯವಾಗುವುದಿಲ್ಲ. ನಾಗರಹೊಳೆಯಲ್ಲಿ ವಸತಿ ಬಯಸುವವರು ಬೆಂಗಳೂರು ಅಥವಾ ಮೈಸೂರಿನ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅನುಮತಿಯ ಪತ್ರವನ್ನು ಮುಂಗಡವಾಗಿ ತೆಗೆದುಕೊಂಡು ಹೋಗಬೇಕಾದದು ನಿಯಮವಾಗಿರುತ್ತದೆ. ಸಂಜೆ 6ರ ನಂತರ ಇಲ್ಲಿ ಪ್ರವೇಶವಿಲ್ಲ. ಇಲ್ಲಿಯ ಸಮೀಪವೇ ಇರುವ ಪಾಲೆಕಂಡ ಅವರ ಎಸ್ಟೇಟಿನಲ್ಲಿ ಕೆಲವು ಪುರಾತನ ವಸ್ತುಗಳ ಒಳ್ಳೆಯ ಖಾಸಗಿ ಸಂಗ್ರಹವಿದೆ.

### ನಾಲ್ಕುನಾಡು ಅರಮನೆ

ಕಕ್ಕಬ್ಬೆಯಿಂದ (ಮಡಿಕೇರಿ ತಾಲೂಕು) ಏರಿಳಿತವಿರುವ ಘಟ್ಟ ರಸ್ತೆಯಲ್ಲಿ ಸುಮಾರು ಎಂಟು ಕಿ.ಮೀ. ಕ್ರಮಿಸಿದರೆ ಒಂದು ಸಮತಟ್ಟಾದ ಗುಡ್ಡದ ಮೇಲಿರುವ ನಾಲ್ಕುನಾಡು ಅರಮನೆ ಸಿಗುತ್ತದೆ. ದೊಡ್ಡವೀರರಾಜೇಂದ್ರನು ಕ್ರಿ.ಶ.

1792ರಲ್ಲಿ ಯವಕಪಾಡಿ ಗ್ರಾಮದ ಸರಹದ್ದಿಗೆ ಒಳಪಡುವ ನಾಲ್ಕುನಾಡಿನಲ್ಲಿ ಈ ಅರಮನೆಯನ್ನು ಕಟ್ಟಿಸಿದನು. ಪಿರಿಯಾಪಟ್ಟಣದ ಕೋಟೆಯಲ್ಲಿ ಟಿಪ್ಪುಸುಲ್ತಾನನಿಂದ ಸೆರೆಹಿಡಿಯಲ್ಪಟ್ಟಿದ್ದ ವೀರರಾಜನು, ಕುಟುಂಬ ಸಮೇತ ಅಲ್ಲಿಂದ ತಪ್ಪಿಸಿಕೊಂಡು ಕೊಡಗಿನ ಕುರ್ಚಿಗ್ರಾಮವನ್ನು ಪ್ರವೇಶಿಸಿ ಅಲ್ಲಿ ನೆಲೆಸಿದ್ದ. ಆದರೆ ಅಲ್ಲಿ ಕಟ್ಟಿದ ಅರಮನೆಯು ನಾಶವಾದ ಕಾರಣ ಪಾಡಿನಾಲ್ಕು ನಾಡಿನ ಯವಕಪಾಡಿ ಗ್ರಾಮದಲ್ಲಿ ಅರಮನೆಯನ್ನು ನಿರ್ಮಿಸಿದನು. ಎತ್ತರವಾದ ಗುಡ್ಡವೊಂದರ ಮೇಲ್ಭಾಗದಲ್ಲಿ ಸಮತಟ್ಟಾದ ನಿವೇಶನದಲ್ಲಿ ಗಂಭೀರ ಅರಣ್ಯಗಳ ಪರಿಸರದಲ್ಲಿ ಈ ಅರಮನೆಯು ನಿರ್ಮಿತವಾಗಿದೆ. ಕೊಡಗಿನ ಅತಿ ಎತ್ತರವಾದ ತಡಿಯಂಡಮೋಳು ಪರ್ವತದ ಪಾದದಲ್ಲಿರುವ ನಾಲ್ಕುನಾಡು ಪ್ರದೇಶವು ಮೊದಲು ಅತ್ಯಂತ ದುರ್ಗಮವಾದ ಅರಣ್ಯಗಳ ನಡುವೆ ಇದ್ದುದರಿಂದ ಇಲ್ಲಿಗೆ ಆಗ ಸುಲಭವಾಗಿ ತಲುಪಲು ಸಾಧ್ಯವಿರಲಿಲ್ಲ. ಅತ್ಯಂತ ಸರಳ ರೀತಿಯ ವಾಸ್ತು ವಿನ್ಯಾಸವನ್ನು ಹೊಂದಿರುವ ಅರಮನೆಯ ಕಟ್ಟಡವು ಎರಡು ಅಂತಸ್ತನ್ನು ಹೊಂದಿದೆ. ಸುಮಾರು ನಾಲ್ಕು ಅಡಿಯ ಎತ್ತರವಾದ ತಳಪಾದಿಯ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿರುವ ಎತ್ತರವಾದ ಗೋಡೆಗಳು ಕಂಡು ಬರುತ್ತವೆ. ಮುಂಭಾಗದಲ್ಲಿ ಸುಮಾರು 65 ಅಡಿ ಉದ್ದವಾದ ಹಾಗೂ ಸಾಕಷ್ಟು ಅಗಲವಾದ ಹಜಾರವಿದೆ. ಅರಮನೆಯ ಎತ್ತರವಾದ ಛಾವಣಿಯು ಷಟ್ಕೋನಾಕಾರವಾದ 12 ಭರ್ಜರಿ ಮರದ ಕಂಬಗಳ ಮೇಲೆ ಆಧಾರಿತವಾಗಿದೆ. ಕಂಬಗಳ ಮೇಲ್ಭಾಗದಲ್ಲಿ ಉಬ್ಬುಶಿಲ್ಪಗಳು ಕಂಡು ಬರುತ್ತವೆ. ಕಿಟಕಿ ಹಾಗೂ ಬಾಗಿಲುಗಳ ಮರದ ಕೆತ್ತನೆಯು ಕರಕುಶಲ ಜಾಣ್ಮೆಯ ಉತ್ತಮ ಮಾದರಿಗಳಾಗಿವೆ. ಒಳಭಾಗದಲ್ಲಿ ವಿಶಾಲವಾದ ಪಡಸಾಲೆಯಿದೆ, ಹಾಗೂ ಇದರ ಛಾವಣಿಯು ಆರು ಮರದ ಕಂಬಗಳ ಮೇಲೆ ಆಧಾರಿತವಾಗಿದೆ. ಅರಮನೆಯ ಒಳಛಾವಣಿಯು ಸಂಪೂರ್ಣವಾಗಿ ಮರದ ರಚನೆಯಾಗಿದ್ದು ಅಲ್ಲಲ್ಲಿ ಕಬ್ಬಿಣದ ಬೃಹದಾಕಾರವಾದ ತೀರುಗಳನ್ನು ಬಳಸಲಾಗಿದೆ. ಛಾವಣಿಯ ಹಲಗೆಗಳ ಮೇಲೆ ಹೂ ಮತ್ತು ಗಿಡಮರ ಬಳ್ಳಿಗಳು, ನರ್ತಿಸುತ್ತಿರುವ ಕನ್ಯೆಯರು, ಸಂಗೀತಗಾರರು, ರಾಣಿಯರು, ಗಂಧರ್ವ ಸ್ತ್ರೀಯರು ಮುಂತಾದವರುಗಳನ್ನು ಪ್ರತಿನಿಧಿಸುವ ಆಕರ್ಷಕ ವರ್ಣಕಲಾ ಚಿತ್ರಗಳು ಕಂಡುಬರುತ್ತವೆ.[1] ಅರಮನೆಯ ಮೇಲ್ಛಾವಣಿ ಹಂಚಿನದಾಗಿದ್ದು ಬಹುಶಃ ರಾಜರ ಕಾಲದಲ್ಲಿ ಅದು ಹುಲ್ಲಿನ ಮಾಡನ್ನು ಹೊಂದಿರಬೇಕು. ಹಜಾರದ ಗೋಡೆಯ ಮೇಲೆ ರಾಜನು ಅಂಬಾರಿಯಲ್ಲಿ ಕುಳಿತಿರುವ ಮೆರವಣಿಗೆ, ಹಲವು ಸೈನಿಕರುಗಳು ಹಾಗೂ ವಾದ್ಯವೃಂದದವರನ್ನು ಪ್ರತಿನಿಧಿಸುವ ಒಂದು ಸುಂದರ ವಿಶಾಲ ವರ್ಣಚಿತ್ರವಿದೆ. ಇದು ಸುಮಾರು 6 ಅಡಿ ಅಗಲ, 10 ಅಡಿ ಉದ್ದವಾಗಿದೆ. ಹಜಾರದ ಸುಣ್ಣ ಬಳಿದ ಉಳಿದ ಭಾಗದಲ್ಲಿಯೂ ಚಿತ್ರಗಳು ಇದ್ದಿರಬಹುದೆನಿಸುತ್ತದೆ. ಈ ವರ್ಣಚಿತ್ರವೂ ಸಂರಕ್ಷಣೆಯಿಲ್ಲದೇ ಮಸುಕು ಮಸುಕಾಗಿದೆ. ಅರಮನೆಯ ಮುಂಭಾಗದಲ್ಲಿ ಚೌಕಾಕಾರದ ಸುಂದರ ಕಿರು ಮಂಟಪವಿದ್ದು, ಅದರಲ್ಲಿ 1796ರಲ್ಲಿ ದೊಡ್ಡ ವೀರರಾಜೇಂದ್ರ ಹಾಗೂ ಮಹದೇವಮ್ಮಾಜಿಯವರ ವಿವಾಹ ಮಹೋತ್ಸವವು ನಡೆದಿತ್ತೆಂದು ತಿಳಿದು ಬರುತ್ತದೆ. ಇದರ ಮೇಲೆ ಸುಂದರ ಗಾರೆಯ ಶಿಲ್ಪಗಳಿವೆ. ಅರಮನೆಯ ಹಿಂಭಾಗದಲ್ಲಿ ನಾಲ್ಕು ಕತ್ತಲೆ ಕೋಣೆಗಳಿದ್ದು ಇದರಲ್ಲಿ ತಪ್ಪಿತಸ್ಥ ಆಪಾದಿತರನ್ನು ಹಾಗೂ ಇತರರನ್ನು ಬಂಧಿಸಲಾಗುತ್ತಿತ್ತು.[2] ಚಿಕ್ಕ ವೀರರಾಜೇಂದ್ರನು, ಕಂಪನಿ ಸರ್ಕಾರದ ಸೈನ್ಯಗಳು ಕೊಡಗಿನೊಳಗೆ ನಾನಾ ದಿಕ್ಕುಗಳಿಂದ ನುಗ್ಗುತ್ತಿರುವಾಗ ಮಡಿಕೇರಿಯನ್ನು ತ್ಯಜಿಸಿ ನಾಲ್ಕುನಾಡಿನ ಈ ಅರಮನೆಯಲ್ಲಿ ತನ್ನ ಕುಟುಂಬದೊಂದಿಗೆ ಸಂರಕ್ಷಣೆ ಪಡೆದಿದ್ದನು.[3] ಈಗ ಈ ಅರಮನೆಯಲ್ಲಿ ರಾಜ್ಯ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯವರು ಜೇನು ಸಾಕಣೆಯ ಕೇಂದ್ರವನ್ನು ನಡೆಸುತ್ತಿರುವರು. ರಾಜ್ಯ ಪುರಾತತ್ವ ಇಲಾಖೆಯು ಈ ಕಟ್ಟಡವನ್ನು 1990ರ ಸುಮಾರಿಗೆ ದುರಸ್ತಿ ಮಾಡಿದೆ. ಇದರ ಪರಿಸರದಲ್ಲಿ ಟಿಪ್ಪುವನ್ನು ವರಿಸಿದ್ದ ಕೊಡಗಿನ ಇಬ್ಬರು ರಾಜಕುಮಾರಿಯರ ಸಮಾಧಿಗಳಿವೆಯೆಂದು ಹಳೆಯ ದಾಖಲೆಗಳು ತಿಳಿಸುತ್ತವೆ. ಅವುಗಳನ್ನು ಗುರುತಿಸುವುದು ಕಷ್ಟವಾಗಿದೆ.

ನಿಡ್ತ

ಮುಳ್ಳೂರು ಶಾಸನದಲ್ಲಿ ಉಲ್ಲೇಖವಾಗಿರುವ 'ನಿಡಿತ' ಒಂದು ಪ್ರಾಚೀನ ಸ್ಥಳ (ಸೋಮವಾರಪೇಟೆ ತಾಲೂಕು; ಜನಸಂಖ್ಯೆ : 741). ಸೋಮವಾರಪೇಟೆಯಿಂದ 25 ಕಿ.ಮೀ. ದೂರದಲ್ಲಿರುವ ಈ ಹೋಬಳಿ ಕೇಂದ್ರದಲ್ಲಿರುವ ಶಾಸನಗಳಲ್ಲಿ ಹೆಸರಿಸಲಾಗಿರುವ ಮಲ್ಲಿಕಾರ್ಜುನ ದೇವಾಲಯವು ಈಗ

1. ಕೆ. ಕೆ. ಸುಬ್ಬಯ್ಯ, 'ಆರ್ಕಿಯಾಲಜಿ ಆಫ್ ಕೂರ್ಗ್', ಪುಟ 205.
2. ಮೇಲಿನದೇ.
3. ಡಿ. ಎನ್. ಕೃಷ್ಣಯ್ಯ, 'ಕೊಡಗಿನ ಇತಿಹಾಸ', ಪುಟ 508-509.

ಇರುವುದಿಲ್ಲ. ಇತ್ತೀಚಿಗೆ ದುರಸ್ತಿ ಹೊಂದಿರುವ ಬಸವಣ್ಣ ದೇವರ ಗುಡಿಯನ್ನು ಪುರಾತನ ಎಂದು ಕರೆಯಲಾಗುತ್ತದೆ. ಈ ದೇವಾಲಯದ ಪಕ್ಕದಲ್ಲಿ ಎರಡು ವೀರಗಲ್ಲುಗಳು ಕಂಡು ಬರುತ್ತವೆ. ಮೊದಲನೇಯ ವೀರಗಲ್ಲಿನ ಪ್ರಕಾರ ಕ್ರಿ.ಶ. 1255ರ ಸುಮಾರಿಗೆ ಹೊಯ್ಸಳ ಮೂರನೇಯ ನರಸಿಂಹನ ಕಾಲದಲ್ಲಿ ಕಹಿಗೋಡಿನ ಸೋಮಯ್ಯನೆಂಬ ವೀರನು ಕಾದಾಡಿ ವೀರಸ್ವರ್ಗವನ್ನು ಪಡೆದಾಗ ಅವನ ಮಗ ಮಾಯಿಗನು ತನ್ನ ತಂದೆಯ ಸ್ಮರಣೆಗೆ ಈ ಶಾಸನವನ್ನು ಹಾಕಿಸಿದನೆಂದು ತಿಳಿಯುತ್ತದೆ. ಇದರ ಸಮೀಪವೇ ಇರುವ ಎರಡನೇಯ ವೀರಗಲ್ಲಿನ ಶಾಸನವೂ ಸಹ ಕ್ರಿ.ಶ. 1285ರಲ್ಲಿ ಹೊಯ್ಸಳ ಮೂರನೇಯ ನರಸಿಂಹನ ಕಾಲಕ್ಕೇ ಸೇರುತ್ತದೆ. ಇದು ಕಹಿಗೋಡಿನ ಮಾಲಿಯ ನಾಯಕನು ಹಾಕಿಸಿದ ವೀರಗಲ್ಲು ಶಾಸನವೆಂದು ತಿಳಿಯುತ್ತದೆ. ಬಸವಣ್ಣ ದೇವರ ಗುಡಿಯ ಎಡ ಭಾಗದಲ್ಲಿ ಕನ್ನಂಬಾಡಿಯಮ್ಮನ ಸಣ್ಣ ಗುಡಿ ಇದೆ. ಚೈತ್ರಮಾಸದಲ್ಲಿ ಉಗಾದಿಯ ನಂತರ ಬಸವಣ್ಣದೇವರ ಜಾತ್ರೆಯು ನಡೆಯುತ್ತದೆ. ಜಾತ್ರೆಯ ಐದನೇಯ ದಿನ ಎಲ್ಲರ ಮನೆಗಳಿಂದಲೂ ಕಲಶಗಳನ್ನು ದೇವಾಲಯಕ್ಕೆ ಪೂಜೆಗಾಗಿ ತೆಗೆದುಕೊಂಡು ಬರುವುದು ಇಲ್ಲಿಯ ವಿಶೇಷ ಪದ್ಧತಿಯಾಗಿದೆ. ಬಸವಣ್ಣ ಗುಡಿಯ ಹಿಂಭಾಗದಲ್ಲಿ ಬೀರೇದೇವರ ಗುಡಿಯ ಅವಶೇಷಗಳು ಕಂಡುಬರುತ್ತವೆ. ಬೀರೇದೇವರ ವನದಲ್ಲಿರುವ ಶಾಸನದ ಪ್ರಕಾರ ಕ್ರಿ.ಶ. 1278 ರಲ್ಲಿ ಹಿರಿಯ ವೀರಣ್ಣ ಮತ್ತು ಚಿಕ್ಕವೀರಣ್ಣ ಮುಂತಾದ ಅಧಿಕಾರಿಗಳು ಮಾಲಪನಹಳ್ಳಿಯ ಮಲ್ಲಿಕಾರ್ಜುನ ದೇವರಿಗೆ ನೀಡಿದ ದಾನದ ಬಗೆಗೆ ತಿಳಿಸುತ್ತದೆ. ಮಾಲಪನ ಹಳ್ಳಿಯು ನಿಡ್ತ ಗ್ರಾಮದ ವ್ಯಾಪ್ತಿಯಲ್ಲೇ ಇದ್ದ ಪ್ರಾಚೀನ ಸ್ಥಳವಿರಬೇಕೆಂದು ಹೇಳಲಾಗಿದೆ. ಕೂಗೂರು (ಸೋಮವಾರಪೇಟೆ ತಾಲೂಕು) ಶನಿವಾರಸಂತೆಯಲ್ಲಿರುವ ಹೆಗ್ಗುಳದಿಂದ ಒಂದು ಕಿ.ಮೀ. ದೂರದಲ್ಲಿರುವ ಸ್ಥಳ. ಈ ಊರಿನಲ್ಲಿರುವ ಪಂಚಲಿಂಗೇಶ್ವರ ದೇವಾಲಯವು ಪ್ರಾಚೀನವೆಂದು ಹೇಳಿದರೂ 1986ರಲ್ಲಿ ನವೀಕರಿಸಲ್ಪಟ್ಟಿದೆ. ಸಾಲಾಗಿರುವ ಐದು ಕೊಠಡಿಗಳಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಎದುರಿಗೆ ಇರುವ ಒಂದು ನಂದಿಮಂಟಪದ ಕಟ್ಟೆಯ ಮೇಲೆ ಭಗ್ನ ಸೂರ್ಯಮೂರ್ತಿ ಹಾಗೂ ಮಂಟಪದ ಕೆಳಭಾಗದಲ್ಲಿ ಒಂದು ಭಗ್ನ ಶಾಸನವಿದ್ದು, ಅದರ ಮೇಲ್ಭಾಗದಲ್ಲಿ ಪಂಚಲಿಂಗಗಳು ಕಂಡುಬರುತ್ತವೆ. ಶಾಸನದ ಇನ್ನೊಂದು ತುಂಡು ಪಕ್ಕದ ಮರದ ಬುಡದಲ್ಲಿ ಬಿದ್ದಿದೆ. ಈ ಶಾಸನವು ಅಪ್ರಕಟಿತ ದಾಖಲೆಯಾಗಿದೆ. ಈ ಮರದ ಬುಡದಲ್ಲಿ ಸುತ್ತಲೂ ನಾಗಶಿಲೆಗಳು, ಮಾತೃಕೆಯರು, ವೀರಭದ್ರ ಮತ್ತು ಸೂರ್ಯನ ಶಿರದ ಭಾಗವು ಸಹ ಕಂಡು ಬರುತ್ತವೆ. ಪಂಚಲಿಂಗದ ದೇವಾಲಯದ ನಂದಿಮಂಟಪದಲ್ಲಿ ಶಿವಲಿಂಗವು ಇದೆ.

### ಪಾಡಿ

ಕಕ್ಕಬ್ಬೆಯ (ಮಡಿಕೇರಿ ತಾಲೂಕು) ಮೂಲಕ ಸುಮಾರು 2.5 ಕಿ.ಮೀ. ದೂರವನ್ನು ಒಂದು ಸಣ್ಣ ಗುಡ್ಡದ ಆರೋಹಣವನ್ನು ಮಾಡಿ ವಾಹನದಲ್ಲೇ ಪಾಡಿಗೆ ಹೋಗಬಹುದಾಗಿದೆ. ಪಾಡಿಬೆಟ್ಟಕ್ಕೆ ಇಗ್ಗುತಪ್ಪ ಅಥವಾ ಸುಬ್ರಹ್ಮಣ್ಯದೇವರ ಬೆಟ್ಟವೆಂದೂ ಸ್ಥಳೀಯವಾಗಿ ಕರೆಯಲಾಗುತ್ತದೆ. ಗುಡ್ಡದ ಮೇಲಿರುವ ಈ ದೇವಾಲಯಕ್ಕೆ ಮೆಟ್ಟಿಲುಗಳ ಮೂಲಕ ಹತ್ತಿ ಹೋಗಬೇಕಾಗುತ್ತದೆ. ಕೊಡವರ ತೀರ ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಒಳಗೆ ವೃತ್ತಾಕಾರವಾದ ಶಿಖರವಿದ್ದು ಸ್ತೂಪಿಕೆಯ ತುದಿಯಲ್ಲಿ ಹೊನ್ನ ಕಲಶವಿದೆ. ಗರ್ಭಗೃಹವು ಚೌಕವಾಗಿದ್ದು, ಒಳಗೆ ಪ್ರಾಚೀನ ಪಾಣಿಪೀಠದ ಮೇಲೆ ಇಗ್ಗುತಪ್ಪ ಅಥವಾ ಸುಬ್ಬರಾಯನೆಂದು ಕರೆಯಲಾಗುವ ಶಿಲಾ ವಿಗ್ರಹವಿದೆ, ಹಾಗೂ ಬಲಬದಿಯಲ್ಲಿ ಶಾಸನವಿರುವ ಬೆಳ್ಳಿಯ ಆನೆ ಹಾಗೂ ಎಡಬದಿಯಲ್ಲಿ ಸುಬ್ಬರಾಯನ ಬೆಳ್ಳಿಯ ಉತ್ಸವ ಮೂರ್ತಿಯಿದೆ. ಮೂಲ ವಿಗ್ರಹಕ್ಕೆ ಅತ್ಯಂತ ಸೂಕ್ಷ್ಮ ಕೆತ್ತನೆಯುಳ್ಳ ಬೆಳ್ಳಿಯ ಪ್ರಭಾವಳಿ ಹಾಗೂ ಅದರ ಮೇಲ್ಭಾಗದಲ್ಲಿ ತನ್ನ ಐದು ಹೆಡೆ ಎತ್ತಿರುವ ಸುಂದರ ನಾಗಶಿಲ್ಪದ ಕೆತ್ತನೆಯಿದೆ. ಪಾಣಿಪೀಠದ ಮುಂಭಾಗದಲ್ಲಿ ಹಂಸ ಹಾಗೂ ಹೂಬಳ್ಳಿಗಳ ಕೆತ್ತನೆಯ ಸುಂದರ ಅಲಂಕಾರವಿರುವ ಬೆಳ್ಳಿಯ ತಗಡಿನ ಕವಚವು ಆಕರ್ಷಕವಾಗಿದೆ. ಇಗ್ಗುತಪ್ಪ ದೇವಾಲಯದ ಗರ್ಭಗೃಹದಲ್ಲಿರುವ ಬೆಳ್ಳಿಯ ಆನೆಯ ಬೆನ್ನ ಮೇಲಿನ ಬೆಳ್ಳಿಯ ದಪ್ಪ ಹೊದಿಕೆಯ ಮೇಲೆ ಒಂದು ಶಾಸನವು ಕಂಡುಬರುತ್ತದೆ. ಇದು ಕ್ರಿ.ಶ. 1810ರ ಸುಮಾರಿಗೆ ಸೇರಿದ್ದು ಕೊಡಗಿನ ಲಿಂಗರಾಜೇಂದ್ರನು ನಾಲ್ಕುನಾಡಿನ ಸಮೀಪ ಬಾಲ್ಯಟ್ಟರ್ರೆ ಕಾಡಿನಲ್ಲಿ 34 ಆನೆಗಳನ್ನು ಕೊಂದು, ಎಂಟು ಹುಲಿ ಮತ್ತು ಸಿಂಹದ ಮರಿಗಳನ್ನು ಕೈಸೆರೆ ಹಿಡಿದ ಪರಾಕ್ರಮದ ಸಂಕೇತವಾಗಿ ಈ ಬೆಳ್ಳಿಯ ಆನೆಯನ್ನು ಪಾಡಿ ದೇವಸ್ಥಾನಕ್ಕೆ ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ. ಇದೇ ದೇವಾಲಯದ ಬಾಗಿಲ ಮೇಲಿರುವ ಶಾಸನದ ಪ್ರಕಾರ ಅಪ್ಪಾರಂಡ ಬೋಪು ಎಂಬ ಅಧಿಕಾರಿಯು ಪಾಡಿಯ ಸುಬ್ಬರಾಯ ದೇವಸ್ಥಾನವನ್ನು ಕ್ರಿ. ಶ. 1834 ರಿಂದ 1835ರ ನಡುವೆ ನವೀಕರಿಸಿ ಗೋಪುರಕ್ಕೆ ಸುವರ್ಣ ಕಲಶವನ್ನು ಮಾಡಿಸಿದ ಬಗೆಗೆ ಉಲ್ಲೇಖವಿದೆ. ಗರ್ಭಗೃಹದ ಗೋಡೆಯನ್ನು ಜಂಬಿಟ್ಟಿಗೆಯಿಂದ ಕಟ್ಟಲಾಗಿದೆ. ಇದರ ಮುಂಭಾಗದಲ್ಲಿ ಪ್ರಾಕಾರದ ಹೊರಗೆ ಬಲಿಪೀಠ ಹಾಗೂ

ಎರಡು ಮರದ ಕಂಬಗಳಿವೆ. ಮೇಲ್ಭಾಗದ ಮರದ ಛಾವಣಿಯಲ್ಲಿ ಹೂಬಳ್ಳಿಗಳ ಕೆತ್ತನೆಯುಳ್ಳ ಸುಂದರ ಅಲಂಕಾರವಿದೆ. ನವರಂಗ ಅಥವಾ ಮುಖಮಂಟಪವಿಲ್ಲದಿದ್ದರೂ ಗರ್ಭಗೃಹದ ಎದುರಿಗೆ ಮರದಲ್ಲಿ ನಿರ್ಮಿತವಾಗಿರುವ ನಂದಿಮಂಟಪವಿದ್ದು, ಇದರ ಇಳಿಜಾರಾದ ಛಾವಣಿಯು ಒಳಭಾಗದ ಹಂಚುಗಳಿಗೆ ತಾಮ್ರದ ತಗಡಿನ ಹೊದಿಕೆಯಿದೆ. ಗರ್ಭಗೃಹಕ್ಕೆ ಸಾಂಧಾರ ಪ್ರದಕ್ಷಿಣಾ ಪಥವಿದೆ ಮತ್ತು ಹೊರ ಪ್ರಾಕಾರವಿದೆ. ಹೊರ ಭಾಗದಲ್ಲಿರುವ ಬಲಿಪೀಠದ ಮೇಲೂ ಛಾವಣಿ ಇರುವುದು ಇಲ್ಲಿನ ವಿಶೇಷ. ಈ ಛಾವಣಿಯ ಒಳಭಾಗದಲ್ಲಿ ಬಲಿಪೀಠದ ಎಂಟು ಮೂಲೆಗಳಲ್ಲಿ ಎಂಟು ದಿಕ್ಪಾಲರನ್ನು ಪ್ರತಿನಿಧಿಸುವ ಪೀಠಗಳಿಗೆ ಸರಿಯಾಗಿ ಮರದ ಸುಂದರ ಮೂರ್ತಿಗಳ ಹಾಗೂ ಇತರ ಶಿಲ್ಪಾಲಂಕರಣಗಳೂ ಇದ್ದು ಅವುಗಳನ್ನೆಲ್ಲಾ ವರ್ಣಗಳಿಂದ ಅಲಂಕರಿಸಿದೆ. ಇವು ಉಬ್ಬುಶಿಲ್ಪಗಳು. ದೇವಾಲಯದ ಹೊರಗಡೆ ಬಲಭಾಗದಲ್ಲಿ ದೊಡ್ಡದಾದ ಕೆಂಡಸಂಪಗೆ ಮರದ ಕೆಳಗೆ ಅಯ್ಯಪ್ಪ ಹಾಗೂ ಹಲವು ತ್ರಿಶೂಲಗಳು ಕಂಡು ಬರುತ್ತವೆ. ಈ ಸ್ಥಳದಿಂದ ನಿಂತು ಗುಡ್ಡದ ಹಿಂಭಾಗದ ನಿಸರ್ಗದ ಸೊಬಗನ್ನು ನೋಡಿದರೆ ತಡಿಯಂಡಮೋಳು ಪರ್ವತವು ಹಸಿರು ವನಸಿರಿಯ ಮಧ್ಯದಲ್ಲಿ ಅತ್ಯಂತ ಆಕರ್ಷಕವಾಗಿ ಕಾಣುತ್ತದೆ. ಇಗ್ಗುತಪ್ಪ ದೇವರ ವಿಶೇಷ ಪೂಜಾ ವಿಧಿಗಳು ವಾರ್ಷಿಕ ಜಾತ್ರೆಯ ವೇಳೆಗೆ ಅಂದರೆ, ಕಾಮದಹನದ ಹಬ್ಬದ ತರುವಾಯ ಕೂಡಿಬರುವ ಹುಬ್ಬಾ ನಕ್ಷತ್ರದಲ್ಲಿ (ಸುಮಾರು ಮಾರ್ಚ್ ತಿಂಗಳಲ್ಲಿ) ನಡೆಯುತ್ತದೆ. ಆ ಸಮಯಕ್ಕೆ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಸಾವಿರಾರು ಜನ ಭಕ್ತಾದಿಗಳು ಬಂದು ಸೇರುತ್ತಾರೆ. ಇಗ್ಗುತಪ್ಪನ ಆರಾಧನೆಗೆ ಈ ಕಕ್ಕಬ್ಬೆ ಪಾಡಿಯೇ ಅಲ್ಲದೆ ಮಡಿಕೇರಿ ತಾಲೂಕಿನ ನೆಲಜಿಪಾಡಿ ಹಾಗೂ ಪೇರೂರುಪಾಡಿಗಳು ಪ್ರಸಿದ್ಧವಾಗಿವೆ.

### ಪಾಲೂರು

ಮಡಿಕೇರಿಯಿಂದ 18 ಕಿ. ಮೀ. (ಮಡಿಕೇರಿ ತಾಲೂಕು; ಜನಸಂಖ್ಯೆ : 852) ದೂರದಲ್ಲಿ ಕಾವೇರಿ ದಂಡೆಯ ಮೇಲಿರುವ ಪ್ರಾಚೀನ ಯಾತ್ರಾಸ್ಥಳ. ಇದೇ ಸ್ಥಳದಲ್ಲಿ ದೊರೆತಿರುವ ಕ್ರಿ. ಶ. 11ನೇಯ ಶತಮಾನದ ಶಾಸನದಲ್ಲಿ ಈ ಊರನ್ನು 'ಪಾಲಯೂರು' ಎಂದು ಹೆಸರಿಸಲಾಗಿದೆ. ನಾಪೋಕ್ಲುವಿಗೆ ಸಮೀಪವಿರುವ ಕಾವೇರಿ ತೀರದ ಪ್ರಸಿದ್ಧ ಯಾತ್ರಾಸ್ಥಳವೆಂದೂ ಸಹ ಜನಪ್ರಿಯವಾಗಿದೆ. ಇಲ್ಲಿರುವ ಮಹಾಲಿಂಗೇಶ್ವರ ದೇವಾಲಯವು ಮೂಲವಾಗಿ ಕೇರಳ ಶೈಲಿಯಲ್ಲಿದೆ. ಇದರ ಗರ್ಭಗೃಹವು ಚೌಕಾಕಾರವಾಗಿದ್ದು ಕೆಳಮಟ್ಟದಲ್ಲಿರುವ ಛಾವಣಿಯು ಶಂಕುವಿನಾಕಾರದಲ್ಲಿ ಮೇಲೇರುತ್ತದೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರವಿದ್ದು, ಇತ್ತೀಚೆಗೆ ನವೀಕರಿಸಲಾಗಿದೆ. ಈ ದೇವಾಲಯವನ್ನು ಕ್ರಿ. ಶ. 11ನೇಯ ಶತಮಾನಕ್ಕೂ ಮೊದಲೇ ನಿರ್ಮಿಸಿರಬೇಕು. ಏಕೆಂದರೆ, ಇಲ್ಲಿ ದೊರೆತಿರುವ ಶಿಲಾಶಾಸನವು (ಶಾ. ಸಂ. 20) ಆಗಲೇ ಇದ್ದ ಮಹಾಲಿಂಗೇಶ್ವರ ದೇವಾಲಯಕ್ಕೆ ನೀಡಿದ ಕೆಲವು ದಾನಗಳನ್ನು ತಿಳಿಸುತ್ತದೆ. ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಶಿಲಾಶಾಸನವು ಕ್ರಿ. ಶ. 11ನೇಯ ಶತಮಾನಕ್ಕೆ ಸೇರಿದ್ದು. ಗ್ರಂಥ, ಮಲಯಾಳಮ್, ತಮಿಳು ಮತ್ತು ವಟ್ಟಳತ್ತು ಲಿಪಿಗಳ ಲಕ್ಷಣಗಳನ್ನು ವ್ಯಕ್ತಪಡಿಸುವ ಮಿಶ್ರಲಿಪಿಯಾಗಿದೆ. ಇದರ ಪ್ರಕಾರ, ಭೋದರೂಪ ಭಗವರ್ ಎಂಬ ವ್ಯಕ್ತಿಯು ಹಾಗೂ ಕುನ್ನಿಯರಸ ಎಂಬ ರಾಜನ ಉಲ್ಲೇಖವಿದೆ. 'ಪಾಲಯೂರಿ'ನ ಮಹಾದೇವ ದೇವಾಲಯಕ್ಕೆ ಹಲವು ದಾನಗಳನ್ನು ನೀಡಿ ಶ್ರೀವೈಷ್ಣವ ವರ್ತಕರ ಒಂದು ಒಕ್ಕೂಟಕ್ಕೆ ದೇವಾಲಯದ ಪೂರ್ಣ ಆಡಳಿತವನ್ನು ವಹಿಸಿಕೊಟ್ಟ ವಿಚಾರ ಶಾಸನದಿಂದ ತಿಳಿದುಬರುತ್ತದೆ. ಬೋಧರೂಪ ಭಗವರ್ ಅವಿದ್ಯಾಮೃತ್ಯು ಭಟ್ಟಾರಕನ ಶಿಷ್ಯನೆಂದು ಈ ದಾಖಲೆಯು ವಿವರಿಸುತ್ತದೆ. ಇಂಥದೇ ಶಾಸನ ಭಾಗಮಂಡಲದಲ್ಲೂ ಇದೆ. (ಹೆಚ್ಚಿನ ವಿವರಗಳಿಗೆ ಪುಟ 79 ನೋಡಿ).

### ಪೊನ್ನಂಪೇಟೆ

ವೀರರಾಜಪೇಟೆಯಿಂದ 21 ಕಿ.ಮೀ. ದೂರದಲ್ಲಿರುವ (ವೀರರಾಜಪೇಟೆ ತಾಲೂಕು ; ಜನಸಂಖ್ಯೆ : 4,367) ಪೊನ್ನಂಪೇಟೆಯು ಕೊಡಗಿನ ಒಂದು ಮುಖ್ಯ ಪಟ್ಟಣವಾಗಿದೆ. ಚಿಕ್ಕವೀರರಾಜೇಂದ್ರನ ದಿವಾನನಾಗಿದ್ದ ಹಾಗೂ ಬ್ರಿಟಿಷರ ಆಡಳಿತದ ಕಾಲಾವಧಿಯಲ್ಲಿಯೂ ಇದೇ ಹುದ್ದೆಯಲ್ಲಿ ಮುಂದುವರೆದ ಚೆಪ್ಪುಡಿರ ಪೊನ್ನಪ್ಪನ ನೆನಪಿಗಾಗಿ ಅತನ ಮಗ ಮಾದಯ್ಯನು ಸುಮಾರು 1845–1850ರ ನಡುವೆ ನಿರ್ಮಿಸಿದ ಪೇಟೆಯಾಗಿದೆ. ಪ್ರಾಚೀನ ಕಾಲದಲ್ಲಿ ಕಿಗ್ಗಟ್ಟುನಾಡಿನ ಭಾಗವಾಗಿದ್ದ ಪೊನ್ನಂಪೇಟೆಯು ರಾಜ್ಯದ ಪುನರ್ಘಟನೆಯ (1956) ತರುವಾಯ ವೀರರಾಜಪೇಟೆ ತಾಲೂಕಿಗೆ ಸೇರ್ಪಡೆಯಾಯಿತು. ಪೊನ್ನಂಪೇಟೆಯು ಬತ್ತದ ವ್ಯಾಪಾರಕ್ಕೆ ಹಿಂದಿನಿಂದಲೂ ಪ್ರಧಾನವಾದ ಮಾರುಕಟ್ಟೆಯಾಗಿದೆ. ರಾಮಕೃಷ್ಣ ಆಶ್ರಮದವರ ಶ್ರೀ ಶಾರದಾಶ್ರಮ ಮತ್ತು ಇತ್ತೀಚಿನ ವರ್ಷದಲ್ಲಿ ಸ್ಥಾಪಿಸಿದ ಪ್ರಶಾಂತಿ ನಿಲಯ ಎಂಬ ಬೇರೊಂದು ಸಂಸ್ಥೆ, ಇವುಗಳು ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ಮುಖ್ಯ ಕೇಂದ್ರಗಳಾಗಿವೆ. ಪ್ರಶಾಂತಿನಿಲಯವು ನಡೆಸುತ್ತಿರುವ ಸಾಯಿಶಂಕರ ಸಾರ್ವಜನಿಕ ಆಸ್ಪತ್ರೆಯು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದೆ.

ನಗರದ ಪರಿಸರದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿ ಇದೆ. ಮತ್ತೂರು (ವೀರರಾಜಪೇಟೆ ತಾಲೂಕು) ಪೊನ್ನಂಪೇಟೆಯಿಂದ ಹತ್ತು ಕಿ.ಮೀ. ದೂರದಲ್ಲಿರುವ ಕಾಫಿ ತೋಟಗಳಿಂದ ಆವೃತವಾಗಿರುವ ಸ್ಥಳ. ಇಲ್ಲಿ ಮಹಾದೇವ, ಚಾಮುಂಡಿ, ಅಯ್ಯಪ್ಪ ಮುಂತಾದ ದೇವಾಲಯಗಳಿವೆ. ಅಯ್ಯಪ್ಪ ದೇವಸ್ಥಾನವೆಂದು ಸ್ಥಳೀಯವಾಗಿ ಕರೆಯಲಾಗುವ ಈ ಕಟ್ಟಡವು ಕೊಡಗು ರಾಜರ ಕಾಲದ ಶೈಲಿಯನ್ನು ವ್ಯಕ್ತಪಡಿಸುತ್ತದೆ. ಇದನ್ನು ಈಶ್ವರ ದೇವಾಲಯವೆಂದೂ ಹೇಳುತ್ತಾರೆ. ಇದರ ಸಮೀಪದಲ್ಲೇ ಇತ್ತೀಚಿನ ಚಾಮುಂಡಿ ದೇವಾಲಯವಿದೆ. ಗರ್ಭಗುಡಿಯಲ್ಲಿ ಶಿವಲಿಂಗ ಮತ್ತು ಪಕ್ಕದಲ್ಲಿ ಅಯ್ಯಪ್ಪ (ಆಧುನಿಕ) ಶಿಲಾಮೂರ್ತಿಗಳು ಕಂಡುಬರುತ್ತವೆ. ಪೂರ್ಣವಾಗಿ ಜಂಬಿಟ್ಟಿಗೆಯಿಂದ ಕಟ್ಟಲಾದ ಈ ದೇವಾಲಯವನ್ನು ಹಲವು ಬಣ್ಣಗಳಿಂದ ನೂತನವಾಗಿ ಅಲಂಕಾರಗೊಳಿಸಲಾಗಿದೆ. ಈ ದೇವಾಲಯದ ಹೊರ ಭಾಗದಲ್ಲಿ ಮುಕ್ತವಾದ ಕಟ್ಟೆಯ ಮೇಲೆ ಚಾಮುಂಡಿಯ ಇನ್ನೊಂದು ವಿಗ್ರಹವಿದೆ. ಈ ಚತುರ್ಭುಜ ಶಿಲಾಮೂರ್ತಿಯ ನಾಲ್ಕು ಕೈಗಳಲ್ಲಿ ತ್ರಿಶೂಲ,ಖಡ್ಗ,ಪಾನಪಾತ್ರೆ ಹಾಗೂ ಅಭಯ ಮುದ್ರೆಗಳಿವೆ. ಈ ದೇವಾಲಯದ ಜಾತ್ರೆಯು ಮಾರ್ಚಿ ತಿಂಗಳಲ್ಲಿ ನಡೆಯುತ್ತಿದ್ದು, ನೂರಾರು ಜನ ಭಕ್ತಾದಿಗಳು ಸೇರುತ್ತಾರೆ.

### ಬರ್ಪೊಳೆ ಜಲಪಾತ

ಬಿಟ್ಟಂಗಾಲದ ಮೂಲಕ ತಲುಪಬಹುದಾದ (ವೀರರಾಜಪೇಟೆ ತಾಲೂಕು) ಬರ್ಪೊಳೆ ಜಲಪಾತವು ವೀರರಾಜಪೇಟೆಯಿಂದ ಸುಮಾರು 16 ಕಿ.ಮೀ. ದೂರದಲ್ಲಿರುವ ಕೊಡಗು–ಕೇರಳ ಗಡಿಯಲ್ಲಿರುವ ಅತ್ಯಂತ ದಟ್ಟ ಅರಣ್ಯಗಳ ಹಸಿರು ಪರಿಸರದಲ್ಲಿರುವ ಪ್ರವಾಸ ತಾಣವಾಗಿದೆ. ಬಿಟ್ಟಂಗಾಲದವರೆಗೆ ರಸ್ತೆಯಿದೆ. ಮುಂದೆ 11 ಕಿ.ಮೀ. ದೂರ ವಾಹನ ಪ್ರಯಾಣ ಕಷ್ಟ. ಕಂಗನಹೊಳೆ ಹಾಗೂ ಕಕ್ಕಟ್ಟು ಹೊಳೆಗಳು ಕೂಡಿಕೊಂಡು ಬರ್ಪೊಳೆಯಾಗಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಯು ಬಂಡೆಗಳ ಪ್ರಪಾತಕ್ಕೆ ಧುಮುಕುವ ಜಲಪಾತದ ದೃಶ್ಯವು ಕಾಣಸಿಗುತ್ತದೆ. ಇಲ್ಲಿಯೇ ಇನ್ನೊಂದು ಉಪನದಿ ಇದನ್ನು ಸೇರಿ ಜೊತೆಗೂಡಿ ಧುಮುಕುತ್ತದೆ. ಸ್ಥಳೀಯವಾಗಿ ಈ ಜಲಪಾತವನ್ನು ಸಾರತಬ್ಬಿ ಎಂದು ಕರೆಯಲಾಗುತ್ತದೆ. ಇದರ ಎತ್ತರ 434 ಅಡಿಗಳು. ಶಿವಮೊಗ್ಗ ಜಿಲ್ಲೆಯ ಜೋಗ್‌ನಲ್ಲಿರುವಂತೆ ಇಲ್ಲಿಯೂ ಜಲವಿದ್ಯುತ್ಪಾದನಾ ಘಟಕವನ್ನು ಆರಂಭಿಸಬೇಕೆಂಬ ಯೋಜನೆಯಿದ್ದು ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಬರ್ಪೊಳೆ ಹಾಗೂ ಸುತ್ತಮುತ್ತಲ ಪರಿಸರವು ಜಿಲ್ಲೆಯಲ್ಲೇ ರಮ್ಯ ಪ್ರವಾಸಿತಾಣವೆಂದು ಹೇಳಬಹುದಾಗಿದೆ.

### ಬಲಮುರಿ

ಮಡಿಕೇರಿಯಿಂದ 18 ಕಿ. ಮೀ. ದೂರದಲ್ಲಿ ಮೂರ್ನಾಡಿನ ಸಮೀಪವಿರುವ ಬಲಮುರಿಯು (ಮಡಿಕೇರಿ ತಾಲೂಕು ; ಜನಸಂಖ್ಯೆ : 878) ಕಾವೇರಿಯ ತೀರದಲ್ಲಿರುವ ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಕೊಡವರಿಗೆ ಇದೊಂದು ಪುಣ್ಯಸ್ಥಳ. ಕಾವೇರಿ ನದಿಯು ಬಲಭಾಗಕ್ಕೆ ಅರ್ಧಚಂದ್ರಾಕಾರವಾಗಿ ದಿಕ್ಕು ಬದಲಿಸುವುದರಿಂದ ಈ ಸ್ಥಳಕ್ಕೆ ಪ್ರಾಚೀನ ಕಾಲದಲ್ಲಿ 'ವಲಂಪುರಿ' ಎಂದೂ ಅನಂತರ 'ಬಲಮುರಿ' ಎಂದೂ ರೂಢಿಗೆ ಬಂದಿತೆಂದು ಸ್ಥಳೀಯವಾಗಿ ತಿಳಿದು ಬರುತ್ತದೆ. 'ವಲಂಪುರಿ' ಎಂಬ ಹೆಸರಿನಿಂದ ಪ್ರಾಚೀನ ಕಾಲದಿಂದಲೂ ಶೈವಕ್ಷೇತ್ರವಾಗಿರುವ ಈ ಸ್ಥಳಕ್ಕೆ ವಿಪುಲವಾದ ಪೌರಾಣಿಕ ಹಿನ್ನೆಲೆಯನ್ನು ಸ್ಥಳಪುರಾಣದಲ್ಲಿ ತಿಳಿಸಲಾಗಿದೆ. ಇದರ ಪ್ರಕಾರ ಕಾವೇರಿಯು ನದಿಯಾಗಿ ಹರಿದು ಬರುವಾಗ ಉಂಟಾದ ಪ್ರವಾಹದ ರಭಸಕ್ಕೆ ಅಲ್ಲಿ ಸ್ನಾನ ಮಾಡುತ್ತಿದ್ದ ಸ್ತ್ರೀಯರ ಸೀರೆಯ ನೆರಿಗೆಗಳು ಹಿಂದಕ್ಕೆ ತಿರುಗಿಕೊಂಡ ಕಾರಣ ಅವರು ಅವುಗಳನ್ನು ಬಲಭಾಗದ ಸೊಂಟಕ್ಕೆ ಗಂಟುಹಾಕಿ ಸೀರೆಯನ್ನು ಬಿಗಿಮಾಡಿಕೊಂಡುದರಿಂದ ಇಲ್ಲಿಗೆ 'ಬಲಮುರಿ' ಎಂದು ಹೆಸರು ಬಂದಿತೆಂದು ಪ್ರತೀತಿಯಿದೆ*. ಹಿಂದೆ ಪೌರಾಣಿಕವಾಗಿ ಕೊಡಗಿನ ಅರಸನಾಗಿದ್ದನೆಂದು ನಂಬಲಾದ ದೇವಕಾಂತ ಮಹಾರಾಜನಿಗೆ ಮತ್ತು ದೇಶದ ಪ್ರಜೆಗಳಿಗೆ ಕಾವೇರಿಯು ಅನುಗ್ರಹವನ್ನು ನೀಡಿದ ಸ್ಥಳವಾದುದರಿಂದ ಇದನ್ನು 'ಅನುಗ್ರಹ ಕ್ಷೇತ್ರ' ಎಂದೂ ಜನರು ಗೌರವದಿಂದ ಕರೆದಿರುವರು ಎಂದೂ ಹೇಳಲಾಗಿದೆ. ಕಾವೇರಿ ನದಿಯ ಬಲಭಾಗದಲ್ಲಿ ಎತ್ತರವಾದ ಸ್ಥಳದಲ್ಲಿ ಜಂಬಿಟ್ಟಿಗೆಯ ಅಗಸ್ತ್ಯೇಶ್ವರ ದೇವಾಲಯವಿದೆ. ಚೌಕಾಕಾರದ ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಬೃಹದಾಕಾರವಾದ ಬಾಣಲಿಂಗವು ಬಹುತೇಕವಾಗಿ ಗಂಗರ ಕಾಲದ ಲಕ್ಷಣಗಳನ್ನು ಹೊಂದಿದೆ. ಗರ್ಭಗೃಹಕ್ಕೆ ಸಾಂಧಾರ ಪ್ರದಕ್ಷಿಣಾಪಥವಿದೆ. ಇಲ್ಲಿರುವ ಶಿವಲಿಂಗವನ್ನು ಅಗಸ್ತ್ಯ ಮಹರ್ಷಿಯು ಪ್ರತಿಷ್ಠಾಪಿಸಿರುವುದರಿಂದ 'ಅಗಸ್ತ್ಯೇಶ್ವರ' ಎಂದು ಜನಪ್ರಿಯವಾಯಿತೆಂದು ಪ್ರತೀತಿಯಿದೆ. ಗರ್ಭಗೃಹದ ಮುಂಭಾಗದಲ್ಲಿ ಮುಖಮಂಟಪವಿದ್ದು ಸುತ್ತಲೂ

* ಎಡುರ್ಕಳ ಕೆ. ಶಂಕರನಾರಾಯಣ ಭಟ್ಟ, 'ಶ್ರೀ ಕಾವೇರಿ ವೈಭವ', ಪುಟ 50.

ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಮುಖಮಂಟಪದ ದ್ವಾರದ ಮೆಟ್ಟಿಲುಗಳ ಎರಡೂ ಕಡೆಗಳಲ್ಲಿ ಯಾಳಿಯಿರುವ ತಾಳವಾರಗಳು ಕಂಡು ಬರುತ್ತವೆ. ಕುಂಭಮಾಸದಲ್ಲಿ (ಮಾರ್ಚ್ 4 ರಂದು) ಇಲ್ಲಿ ಅಗಸ್ತ್ಯೇಶ್ವರ ಜಾತ್ರೆಯು ಮೂರು ದಿನಗಳು ನಡೆಯುವ ಸಮಯಕ್ಕೆ ಸಾವಿರಾರು ಜನ ಭಕ್ತಾದಿಗಳು ಸೇರುತ್ತಾರೆ. ತುಲಾಸಂಕ್ರಮಣದ ಕಾಲದಲ್ಲಿ ತಲಕಾವೇರಿಗೆ ಹೋಗಲು ಸಾಧ್ಯವಾಗದವರು ಬಲಮುರಿಗೆ ತೀರ್ಥೋದ್ಭವದ ಸಂದರ್ಭದಲ್ಲಿ ಅಥವಾ ಮಾರನೇಯ ದಿನ ಬಂದು ಕಾವೇರಿ ಸ್ನಾನ ಮಾಡುತ್ತಾರೆ. ಹಾಗೆಯೇ ಸಂಕ್ರಮಣ, ಅಮಾವಾಸ್ಯೆ, ಹುಣ್ಣಿಮೆ ಮೊದಲಾದ ಪರ್ವಕಾಲಗಳಲ್ಲಿ ಭಕ್ತಾದಿಗಳು ಬಲಮುರಿಗೆ ಬಂದು ಕಾವೇರಿಸ್ನಾನ ಮಾಡುವುದು ಪವಿತ್ರ ಕಾರ್ಯವೆಂದು ಪರಿಗಣಿಸಿರುವರು. ನದಿಯ ಇನ್ನೊಂದು ದಡದಲ್ಲಿ ಮೂರ್ನಾಡು ರಸ್ತೆಯಲ್ಲಿ ಕಣ್ವಮಹರ್ಷಿಯು ಸ್ಥಾಪಿಸಿದ್ದೆಂದು ಹೇಳಲಾದ ಚಿಕ್ಕದಾದ ಆಕರ್ಷಕ ಈಶ್ವರ ದೇವಾಲಯವಿದೆ. ಇದೂ ಸಹ ಜಂಬಿಟ್ಟಿಗೆಯ ಕಟ್ಟಡವಾಗಿದ್ದು ವಾಸ್ತುಶಿಲ್ಪ ದೃಷ್ಟಿಯಿಂದ ಹೆಚ್ಚು ಮಹತ್ವದ್ದಾಗಿಲ್ಲ.

### ಬೆಳ್ಳೂರು

ಪೊನ್ನಂಪೇಟೆಯಿಂದ 11 ಕಿ.ಮೀ. ದೂರದಲ್ಲಿದ್ದು ಹುದಿಕೇರಿಯಿಂದ ತಲುಪಬಹುದಾದ ಬೆಳ್ಳೂರು (ವೀರರಾಜಪೇಟೆ ತಾಲೂಕು; ಜನಸಂಖ್ಯೆ 947) ಒಂದು ಪ್ರಾಚೀನ ಸ್ಥಳ. ಈ ಊರಿನ ಹೆಸರನ್ನು ಕ್ರಿ.ಶ. 888ರ ಗಂಗರ ಶಾಸನದಲ್ಲಿ 'ಬಿಳಿಯೂರು' ಎಂದು ಉಲ್ಲೇಖಿಸಲಾಗಿದೆ. ಊರಿನ ಹೊರಗೆ ಕಡಂಗ (ಕಂದಕ)ದಲ್ಲಿ ಬಿದ್ದಿರುವ (ಈಗ ಕಾಣಸಿಗದ) ಶಿಲಾಶಾಸನವು ಗಂಗ ಸತ್ಯವಾಕ್ಯ ರಾಚಮಲ್ಲನ ಕಾಲದ್ದು. ಇದರ ಪ್ರಕಾರ ರಾಜನು ಶಿವನಂದಿ ಸಿದ್ಧಾಂತ ದೇವರ ಶಿಷ್ಯರಾದ ಸರ್ವನಂದಿದೇವ ಭಟ್ಟಾರಕನಿಗೆ ಪೆನ್ನೆಕಡಂಗದಲ್ಲಿರುವ ಸತ್ಯವಾಕ್ಯ ಜಿನಾಲಯದ ನಡೆವಳಿಕೆಗೆ ಬಿಳಿಯೂರಿನ ಸುತ್ತಮುತ್ತ ಇರುವ 12 ಗ್ರಾಮಗಳನ್ನು ಹಾಗೂ ಇತರ ದಾನಗಳನ್ನು ನೀಡಿದುದರ ಬಗೆಗೆ ತಿಳಿದುಬರುತ್ತದೆ. ಆದರೆ, ಈಗ ತೋಟಗಳ ನಡುವೆ ಇರುವ ವಿಜಯನಗರೋತ್ತರ ಶೈಲಿಯ ಕಲ್ಲಿನ ಕಟ್ಟಡವನ್ನು ಸ್ಥಳೀಯವಾಗಿ ಜೈನ ಬಸದಿ ಎಂದು ಕರೆಯಲಾಗುತ್ತದೆ. ಈ ಕಟ್ಟಡದಲ್ಲಿ ಯಾವುದೇ ಜೈನಧರ್ಮದ ಶಿಲ್ಪಗಳು ಅಥವಾ ಸಂಕೇತಗಳು ಕಂಡುಬರುವುದಿಲ್ಲ. ಈ ಕಟ್ಟಡದಿಂದ ಸ್ವಲ್ಪ ದೂರದಲ್ಲಿರುವ ಖಾಸಗಿ ತೋಟದಲ್ಲಿ ಕೆಲವು ಪ್ರಾಚ್ಯ ಅವಶೇಷಗಳು ಕಂಡುಬರುತ್ತವೆ. ಅವುಗಳಲ್ಲಿ 1.5 ಮೀಟರ್ ಎತ್ತರವಿರುವ ವಾರಾಹಿ, ಚಂಡಿಕೇಶ್ವರ ಹಾಗೂ ಇತರ ಸಪ್ತಮಾತೃಕೆಯರ ಭಗ್ನ ಮೂರ್ತಿಗಳು, ಬ್ರಾಹ್ಮಿಯ ಶಿರೋಭಾಗ ಮುಂತಾದವು ದೊಡ್ಡಮರವೊಂದರ ಬುಡದಲ್ಲಿ ಬಿದ್ದಿವೆ. ಈ ಸ್ಥಳವನ್ನು ಉತ್ಖನನ ಮಾಡಿದರೆ ಇನ್ನೂ ಕೆಲವು ಪ್ರಾಚ್ಯ ಅವಶೇಷಗಳು ಸಿಗುವ ಸಾಧ್ಯತೆಗಳಿವೆ. ಊರಿನ ಮುಂಭಾಗದಲ್ಲಿ ಜಂಬಿಟ್ಟಿಗೆಯಿಂದ ಕಟ್ಟಲಾಗಿರುವ ಮಹಾದೇವ ದೇವಾಲಯವಿದೆ. ಇಲ್ಲಿದ್ದ ನಂದಿಯನ್ನು ಕಲ್ಕುಡೇಶ್ವರ ದೇವಾಲಯಕ್ಕೆ ತೆಗೆದುಕೊಂಡು ಹೋಗಲಾಗಿದೆ ಎಂದು ಸ್ಥಳೀಕರು ತಿಳಿಸುತ್ತಾರೆ. ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾಮಸೀದಿ ಇದೆ. ಅಡವಿಯ ಮಧ್ಯದಲ್ಲಿ ಕಟ್ಟೆಯೊಂದರ ಮೇಲೆ ಚಾಮುಂಡಿಯ ಚತುರ್ಭುಜ ವಿಗ್ರಹವಿದ್ದು, ಅದರ ಪಕ್ಕದಲ್ಲಿ ಭಕ್ತರು ಅರ್ಪಿಸಿದ ತ್ರಿಶೂಲಗಳೂ ಮಣ್ಣಿನನಾಯಿಗಳೂ ಇವೆ. ಜಾತ್ರೆಯ ಕಾಲಕ್ಕೆ (ಮೇ ತಿಂಗಳು) ಇಲ್ಲಿ ಪ್ರಾಣಿಬಲಿಯಾಗುವುದೆಂದು ತಿಳಿಯುತ್ತದೆ. ಇದರ ಸಮೀಪವೇ ಒಂದು ಚೌಕಾಕಾರದ ದುರ್ಗಾಲಯವಿದ್ದು ಇದರಲ್ಲಿ ದುರ್ಗೆಯ ಚತುರ್ಭುಜ ವಿಗ್ರಹವಿದೆ. ಇಲ್ಲಿ ವಿಷ್ಣು ವಿಗ್ರಹವೂ ಇದೆ. ದೇವಾಲಯದ ಎದುರು ಮಂಟಪವಿದ್ದು, ಸುತ್ತ ಪ್ರಾಕಾರವಿದೆ. ಇಲ್ಲಿಯೂ ಮೇ ತಿಂಗಳಲ್ಲಿ ಜಾತ್ರೆಯಾಗುವುದು.

### ಭಾಗಮಂಡಲ

ಮಡಿಕೇರಿಯಿಂದ 29 ಕಿ.ಮೀ. ಮತ್ತು ವೀರರಾಜಪೇಟೆಯಿಂದ 50 ಕಿ.ಮೀ. ದೂರದಲ್ಲಿರುವ ಜನಪ್ರಿಯ ಪುಣ್ಯಕ್ಷೇತ್ರ ಭಾಗಮಂಡಲವು (ಮಡಿಕೇರಿ ತಾಲೂಕು ; ಜನಸಂಖ್ಯೆ : 2,024) ಕಾವೇರಿ, ಕನ್ನಿಕೆ ಹಾಗೂ ಗುಪ್ತಗಾಮಿನಿಯಾಗಿರುವಳೆಂದು ನಂಬಲಾದ ಸುಜ್ಯೋತಿ ನದಿಗಳ ತ್ರಿವೇಣಿ ಸಂಗಮದ ದಡದಲ್ಲಿದೆ. ಶ್ರೀಭಗಂಡೇಶ್ವರ ದೇವಾಲಯದ ಸಮುಚ್ಚಯದಿಂದ ಇದು ಪ್ರಸಿದ್ಧವಾಗಿದೆ. ಪೌರಾಣಿಕವಾಗಿ ಭಗಂಡ ಮಹರ್ಷಿಗಳು ತಪಸ್ಸುಮಾಡಿದ ಪವಿತ್ರ ತಾಣವೆಂದೂ ಇದೇ ಸ್ಥಳದಲ್ಲಿ ಶ್ರೀಸ್ಕಂದನು ಒಲಿದು, ವರವಿತ್ತು, ಋಷಿಯನ್ನು ಅನುಗ್ರಹಿಸಿದನೆಂದೂ ಸ್ಕಾಂದ ಪುರಾಣದಲ್ಲಿದೆ. ಭಗಂಡ ಋಷಿಗಳು ಶಿವಲಿಂಗವನ್ನು ಪ್ರತಿಷ್ಠೆ ಮಾಡಿದ ಕಾರಣ ಇದಕ್ಕೆ 'ಭಂಗಡೇಶ್ವರ' ಎಂದೂ ಮತ್ತು ಈ ಕ್ಷೇತ್ರಕ್ಕೆ ಭಾಗಮಂಡಲವೆಂದೂ ಹೆಸರು ಬಂದಿತೆಂದು ಪ್ರತೀತಿಯಿದೆ. ಭಗಂಡೇಶ್ವರದೇವಾಲಯದ ಆವರಣದಲ್ಲಿ ದೊರೆತಿರುವ ಶಾಸನದಲ್ಲಿ ಈ ಸ್ಥಳವನ್ನು 'ಭಗಂಡಾಶ್ರಮ' ಎಂದು ಕರೆದಿರುವರು. ಈ ಶಾಸನದಲ್ಲಿ (ಶಾ. ಸಂ. 21) ಬೋದರೂಪ ಭಗವರ್ ಎಂಬ ಧಾರ್ಮಿಕ ಗುರು ಇಲ್ಲಿನ ದೇವಾಲಯದ ಸೇವೆಗಳನ್ನು ನಿಯತಗೊಳಿಸಿದ್ದು ತಿಳಿಯುತ್ತದೆ. ಇದು 11 ನೇಯ ಶತಮಾನದ ಬಹುಭಾಷಾ ಶಾಸನವಾಗಿದೆ. ಇಂಥದೇ ಶಾಸನ

ಪಾಲೂರಿನಲ್ಲೂ ಇದೆ. ಕರ್ನಾಟಕವನ್ನು ಆಳಿದ ಎಲ್ಲಾ ರಾಜ ವಂಶಗಳು ಭಾಗಮಂಡಲಕ್ಕೆ ಅದರ ಗೌರವಗಳನ್ನು ಸಲ್ಲಿಸಿರುವುದು ವ್ಯಕ್ತವಾಗುತ್ತದೆ. ಟಿಪ್ಪುಸುಲ್ತಾನನು ಭಾಗಮಂಡಲಕ್ಕೆ ಮುತ್ತಿಗೆ ಹಾಕಿ ಈ ದೇವಾಲಯದ ಪರಿಸರವನ್ನು ಆಕ್ರಮಿಸಿ ತನ್ನ ಕೋಟೆಯನ್ನಾಗಿ ಪರಿವರ್ತಿಸಿದುದು ಮಾತ್ರವಲ್ಲದೇ ಈ ಸ್ಥಳವನ್ನು ಅಬಜಲಾಬಾದ್ ಎಂದು ಕರೆದನು. ನಂತರ ಕೊಡಗಿನಲ್ಲಿದ್ದ ದೊಡ್ಡವೀರರಾಜೇಂದ್ರನು 1790 ರಲ್ಲಿ ಭಾಗಮಂಡಲವನ್ನು ತನ್ನ ಸೈನ್ಯದೊಂದಿಗೆ ದಾಳಿ ಮಾಡಿ, ಟಿಪ್ಪುಸುಲ್ತಾನನ ಸೈನಿಕರೊಡನೆ ಸತತವಾಗಿ ಐದು ದಿನಗಳ ಕಾಲ ಹೋರಾಡಿ ಜಯಗಳಿಸಿ ಭಾಗಮಂಡಲವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಎರಡೂ ಸೈನ್ಯಗಳ ಗುಂಡು ದಾಳಿಯ ಪರಿಣಾಮವಾಗಿ ದೇವಾಲಯದ ಛಾವಣಿಯಲ್ಲಿದ್ದ ಮೂರು ತಾಮ್ರದ ಮುಚ್ಚಿಗೆಯ ತಗಡುಗಳು ಹಾಳಾದವು ; ಮತ್ತು ನಂತರ ದೊಡ್ಡವೀರರಾಜೇಂದ್ರನು ಇವುಗಳಿಗೆ ಬದಲಾಗಿ ಬೆಳ್ಳಿಯ ಹೆಂಚುಗಳನ್ನು ಹಾಕಿಸಿದನು. ಈಗಲೂ ಈ ಹೆಂಚುಗಳು ಕಾಣಸಿಗುತ್ತವೆ. ಟಿಪ್ಪುವಿನ ದಾಳಿಯ ಸಮಯದಲ್ಲಿ ಇಲ್ಲಿದ್ದ ವಿಗ್ರಹಗಳನ್ನು ಗುಪ್ತ ಸ್ಥಳಕ್ಕೆ ಸಾಗಿಸಿ, ದೊಡ್ಡವೀರರಾಜೇಂದ್ರನು ಇವುಗಳನ್ನು ಪುನಃ ಪ್ರತಿಷ್ಠಾಪಿಸಿ ದಕ್ಷಿಣ ಕನ್ನಡದ ಶಿವಳ್ಳಿ ಬ್ರಾಹ್ಮಣ ಕುಟುಂಬದವರನ್ನು ನೇಮಕಮಾಡಿ ನಿರಂತರವಾಗಿ ಪೂಜಾ ವಿಧಿಗಳು ಇಲ್ಲಿ ನೆರವೇರುವಂತೆ ಮಾಡಿದನೆಂದು ತಿಳಿದುಬರುತ್ತದೆ.

ತ್ರಿವೇಣಿ ಸಂಗಮದ ಎಡದಂಡೆಯಲ್ಲಿ ಶ್ರೀ ಭಗಂಡೇಶ್ವರ ದೇವಾಲಯದ ಸಮುಚ್ಚಯವು ಕಂಡುಬರುತ್ತದೆ. ಕರಾವಳಿಯ ದೇವಾಲಯಗಳಂತೆ ಕೇರಳ ಶೈಲಿಯ ಮಿಶ್ರ ಮಾಳಿಗೆಗಳಲ್ಲಿ ನಿರ್ಮಿತಗೊಂಡಿರುವ ಈಶ್ವರ, ಸುಬ್ರಹ್ಮಣ್ಯ, ಮಹಾವಿಷ್ಣು ಮತ್ತು ಗಣಪತಿಯ ದೇವಾಲಯಗಳಿವೆ. ಗಣಪತಿಯ ದೇವಾಲಯವು ಹೊರ ಪ್ರಾಕಾರದಲ್ಲಿ ಕಂಡು ಬರುತ್ತದೆ. ಆದರೆ ಈಶ್ವರ ಅಥವಾ ಭಗಂಡೇಶ್ವರ, ಸುಬ್ರಹ್ಮಣ್ಯ ಮತ್ತು ಮಹಾವಿಷ್ಣು ದೇವಾಲಯಗಳು ಒಳ ಪ್ರಾಕಾರದಲ್ಲಿ ಸಾಲಾಗಿವೆ. ಈ ದೇವಾಲಯಗಳನ್ನು ಕ್ರಿ.ಶ. 11ನೇಯ ಶತಮಾನಕ್ಕೂ ಹಿಂದೆ ಚೋಳರು ನಿರ್ಮಿಸಿರಬಹುದಾದ ಕಟ್ಟಡಗಳೆಂದು ಪ್ರತೀತಿಯಿದ್ದರೂ, ವಾಸ್ತುಶಿಲ್ಪ ಶೈಲಿಯ ದೃಷ್ಟಿಯಿಂದ ಇವು ಕೇರಳದ ಶೈಲಿಯಿಂದ ಪ್ರಭಾವಿತವಾಗಿವೆ. ಈ ದೇವಾಲಯಕ್ಕೆ ಎತ್ತರವಾದ ದೊಡ್ಡಗೋಡೆಗಳಿಂದ ಸುತ್ತುವರೆದಿರುವ ವಿಶಾಲವಾದ ಪ್ರಾಕಾರವಿದೆ. ಭಗಂಡೇಶ್ವರ ದೇವಾಲಯವು ಸುಮಾರು ನಾಲ್ಕು ಅಡಿ ಎತ್ತರವಿರುವ ಜಗತಿಯ ಮೇಲೆ ಒಂದು ಚೌಕ ಗರ್ಭಗೃಹ ಹಾಗೂ ಚಿಕ್ಕದಾದ ಅರ್ಧಮಂಟಪಗಳನ್ನು ಮಾತ್ರ ಹೊಂದಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಶಂಕುವಿನಾಕಾರವಾದ ಶಿಖರವಿದ್ದು ಸ್ತೂಪಿಕೆಯ ತುದಿಯಲ್ಲಿ ದೊಡ್ಡವೀರರಾಜೇಂದ್ರನು ಹಾಕಿಸಿರುವ ಹೊನ್ನ ಕಲಶವಿದೆ. ಈ ದೇವಾಲಯದ ತಳಪಾಯವು ಕಲ್ಲಿನದಾಗಿದ್ದು ಗೋಡೆಗಳನ್ನು ಜಂಬಿಟ್ಟಿಗೆಯಿಂದ ನಿರ್ಮಿಸಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿರುವ ಅರ್ಧಮಂಟಪದ ಮೇಲೆ ಕೇರಳ ಶೈಲಿಯ ಇಳಿಜಾರಾದ ತಾಮ್ರದ ಹೊದಿಕೆಯಿರುವ ಛಾವಣಿ ಇದೆ. ಗರ್ಭಗೃಹದಲ್ಲಿ ಅತ್ಯಂತ ಪ್ರಾಚೀನ ಶೈಲಿಯ ಶಿವಲಿಂಗವಿದೆ ಮತ್ತು ಅದರ ಪಕ್ಕದಲ್ಲಿ ಪಾರ್ವತಿಯ ಕಂಚಿನ ಪ್ರತಿಮೆ ಇದೆ. ದೊಡ್ಡವೀರರಾಜೇಂದ್ರನು ಇಲ್ಲಿಯ ಉತ್ಸವಮೂರ್ತಿಯನ್ನು ಮಾಡಿಸಿಕೊಟ್ಟಿದ್ದಾನೆ. ಇದರ ಹೊರಭಾಗದ ಗೋಡೆಯಲ್ಲಿ ದೇವಕೋಷ್ಟಗಳಿದ್ದು ಒಳಗೆ ಆಕರ್ಷಕವಾದ ದೇವ–ದೇವತೆಗಳ ಶಿಲ್ಪಗಳಿವೆ. ಗೋಡೆಯ ಬೋದಿಗೆಗಳಲ್ಲಿ ಹೂಬಳ್ಳಿಗಳು ಹಾಗೂ ಸ್ತ್ರೀಪುರುಷರ ಉಬ್ಬು ಶಿಲ್ಪಗಳಿವೆ. ಭಗಂಡೇಶ್ವರ ದೇವಾಲಯದ ಹೊರಗಡೆ ಬಲಿಪೀಠದ ಮೇಲೆ ಮರದ ಚೌಕವಾದ ಛಾವಣಿಯಿದ್ದು ಒಳಭಾಗದಲ್ಲಿ ಬ್ರಹ್ಮ, ದಿಕ್ಪಾಲಕರು ಮತ್ತು ಬಳ್ಳಿಗಳ ಅಲಂಕಾರಯುತ ಕೆತ್ತನೆಗಳಿವೆ. ಹೂ ಬಳ್ಳಿಗಳಿಗೂ ಮೂರ್ತಿಗಳಿಗೂ ಬಣ್ಣಗಳನ್ನು ಉಪಯೋಗಿಸಲಾಗಿದೆ. ಅರ್ಧಮಂಟಪದ ಇಳಿಜಾರಾದ ಮರದ ಛಾವಣಿಯ ಒಳಭಾಗದಲ್ಲೂ ಅಷ್ಟದಿಕ್ಪಾಲಕರುಗಳು, ದೇವದೇವಿಯರುಗಳು ಋಷಿಗಳು, ನರ್ತಕಿಯರು, ಡೋಲು ಬಾರಿಸುವವರು, ನವಿಲು ಮುಂತಾದ ಪಕ್ಷಿಗಳು, ಹೂ ಬಳ್ಳಿಗಳು ಮುಂತಾದ ಉತ್ಕೃಷ್ಟವಾದ ಕಾಷ್ಟ ಶಿಲ್ಪಗಳು ಕಂಡು ಬರುತ್ತವೆ. ಮುಖಮಂಟಪದ ಮುಂಭಾಗದಲ್ಲಿ ಇಳಿಜಾರಾದ ತಾಮ್ರದ ಹೆಂಚಿನ ಛಾವಣಿಯ ಮೇಲ್ಭಾಗದಲ್ಲಿ ಮುಂದಕ್ಕೆ ಚಾಚಿಕೊಂಡಿರುವ 'ಮಂಕಿಟಾಪ್'ಗಳ ಒಳಭಾಗದಲ್ಲೂ ಸಹ ಅತ್ಯುತ್ತಮವಾದ ಕಾಷ್ಟಶಿಲ್ಪಗಳು ಹಾಗೂ ಇತರೆ ಅಲಂಕಾರಯುತ ಕೆತ್ತನೆಗಳು ಕಾಣಸಿಗುತ್ತವೆ. ಮುಂಭಾಗದಲ್ಲಿ ಛಾವಣಿಯ ತೋರಣದಲ್ಲಿ ಎಂಟು ಸರ್ಪಗಳು ಹೆಣೆದುಕೊಂಡ ಆಕರ್ಷಕ ಮರದ ಕೆತ್ತನೆಯ ವಿನ್ಯಾಸವಿದೆ.

ಮಧ್ಯದಲ್ಲಿರುವ ಸುಬ್ರಹ್ಮಣ್ಯ ದೇವಾಲಯವು ಭಾಗಮಂಡಲದ ಎಲ್ಲಾ ದೇವಾಲಯಗಳಿಗಿಂತಲೂ ಸುಂದರವಾದ ವಾಸ್ತುವಿನ್ಯಾಸವನ್ನು ಹೊಂದಿದೆ.[1] ಇದರಲ್ಲಿಯೂ ಸಹ

* ಕೆ. ಕೆ. ಸುಬ್ಬಯ್ಯ, 'ಆರ್ಕಿಯಾಲಜಿ ಆಫ್ ಕೂರ್ಗ್', ಪುಟ 212–213.

ಗರ್ಭಗೃಹ ಹಾಗೂ ಅದರ ಮುಂಭಾಗದಲ್ಲಿ ಕಿರಿದಾದ ಅರ್ಧ ಮಂಟಪವು ಕಂಡುಬರುತ್ತವೆ. ಈ ದೇವಾಲಯವನ್ನು ಪೂರ್ಣವಾಗಿ ಕಲ್ಲಿನಿಂದಲೇ ಕಟ್ಟಿರುವುದು ಮಾತ್ರವಲ್ಲದೇ, ಹೊರಭಾಗದ ಗೋಡೆಗಳು ನುಣುಪಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಇಳಿಜಾರಾದ ಛಾವಣಿಯು ಒಳಭಾಗದಲ್ಲಿ ತಾಮ್ರದ ಹೊದಿಕೆಯಿರುವುದನ್ನು ಕಾಣಬಹುದಾಗಿದೆ. ಗರ್ಭ ಗೃಹದಲ್ಲಿ ಪ್ರಾಚೀನ ಚೌರಸವಾದ ಪಾಣಿಪೀಠದ ಮೇಲೆ ನಿಂತಿರುವ (ಸು.2.5 ಅಡಿ ಎತ್ತರ) ದ್ವಿಬಾಹು ಸುಬ್ರಹ್ಮಣ್ಯನ ಸುಂದರ ಶಿಲಾಮೂರ್ತಿಯಿದ್ದು, ಒಂದು ಕೈಯನ್ನು ಸೊಂಟದ ಮೇಲೂ ಹಾಗೂ ಇನ್ನೊಂದರಲ್ಲಿ ತ್ರಿಶೂಲವನ್ನು ಹಿಡಿದಿದ್ದು, ಇದು ಬಹುಶಃ ಚೋಳ ಪಲ್ಲವರ ಶೈಲಿಯನ್ನು ಹೋಲುತ್ತದೆ ಎನ್ನಬಹುದು. ಗರ್ಭಗೃಹದ ಇಳಿಜಾರಾದ ಛಾವಣಿಯ ಚಾಚು ಪೀಠಗಳ ಮೇಲೆ ಯೋಗಾನರಸಿಂಹ, ಬ್ರಹ್ಮ, ಈಶ್ವರ, ಅಷ್ಟದಿಕ್ಪಾಲರು ಹಾಗೂ ಇತರ ಸುಂದರ ಮೂರ್ತಿಗಳ ಕಾಷ್ಠ ಶಿಲ್ಪಗಳಿವೆ. ಅರ್ಧಮಂಟಪದ ಮುಂಭಾಗದಲ್ಲಿರುವ ಪ್ರತ್ಯೇಕ ಮಂಟಪಕ್ಕೆ ಮರದ ಇಳಿಜಾರಾದ ಛಾವಣಿಯಿದ್ದು, ಒಳಭಾಗ ದಲ್ಲಿ ಅತ್ಯುತ್ತಮವಾದ ಪೌರಾಣಿಕ ಕಥೆಗಳನ್ನು ಪ್ರತಿನಿಧಿಸುವ ತಾರಕ ಜನನ, ತಾರಕವಧೆ, ಅಷ್ಟದಿಕ್ಪಾಲಕರು, ಸಮುದ್ರ ಮಥನ, ದಶಾವತಾರ, ಗಣಗಳು, ಋಷಿಗಳು, ಸಂಗೀತ ವಾದಕರು, ವಿಷ್ಣುವಿನ ಲೀಲೆಗಳು, ಅಲಂಕಾರ ಚಿತ್ತಾರಗಳು ಇನ್ನೂ ಮುಂತಾದ ದೃಶ್ಯಗಳನ್ನು ಪ್ರತಿನಿಧಿಸುವ ಅತ್ಯುತ್ಕೃಷ್ಟ ಕಾಷ್ಠಕೆತ್ತನೆಗಳು ಹಲವಾರು ಬಾರಿ ನೋಡಿದರೂ ಮತ್ತೆ ನೋಡಲೇಬೇಕೆನಿಸುವ ಕಲಾ ಪ್ರದರ್ಶನದಂತಿವೆ. ಇವು ಕಿರು ಶಿಲ್ಪಗಳಾಗಿದ್ದು ಹಲವು ಸಾಲುಗಳಲ್ಲಿವೆ. ಸುಬ್ರಹ್ಮಣ್ಯ ದೇವಾ ಲಯದ ಹೊರಭಾಗದ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಸುಂದರ ಶಿಲಾಮೂರ್ತಿಗಳಿವೆ. ಅರ್ಧಮಂಟಪದ ಮೇಲ್ಭಾಗದಲ್ಲಿ ಮುಂದಕ್ಕೆ ಚಾಚಿಕೊಂಡಿರುವ ಛಾವಣಿಯ ಮೇಲ್ಭಾಗದಲ್ಲಿರುವ ದೇವಕೋಷ್ಠದಲ್ಲಿ ನಾಲ್ಕು ಮುಖಗಳ ಗಣಪತಿ ಹಾಗೂ ಪಕ್ಕದಲ್ಲಿ ಅತನ ಪತ್ನಿ ಸಿದ್ಧಿಯ ಸುಂದರ ಶಿಲಾಮೂರ್ತಿ ಕಂಡುಬರುತ್ತವೆ. ಇದರ, ಮುಂಭಾಗದ ತೋರಣವು ಚೈತ್ಯದಾಕಾರವನ್ನು ಹೋಲುತ್ತದೆ. ಇಲ್ಲಿನ ಹೊರಭಾಗದ ಗೋಡೆಗಳಲ್ಲಿ ವೀರರಾಜೇಂದ್ರನು ದುರಸ್ತಿ ಮಾಡಿಸಿದ್ದರ ನೆನಪಿಗೆ 'ವಿ' ಅಕ್ಷರವನ್ನು ಹಿತ್ತಾಳೆಯ ಹಿನ್ನೆಲೆಯ ಅಲಂಕರಣಗಳಲ್ಲಿ ಕೆತ್ತಿದೆ.

ಸುಬ್ರಹ್ಮಣ್ಯ ದೇವಾಲಯದ ಎಡಭಾಗದಲ್ಲಿರುವುದೇ ಕೇರಳ ಶೈಲಿಯಲ್ಲಿ ನಿರ್ಮಿತವಾಗಿರುವ ಮಹಾವಿಷ್ಣು ದೇವಾಲಯ. ಇದರ ತಳಹದಿ ಹಾಗೂ ಬಾಗಿಲುವಾಡದವರೆಗಿನ ಭಾಗವು ಕಲ್ಲಿನಲ್ಲಿ ನಿರ್ಮಿತವಾಗಿದ್ದು. ಮೇಲ್ಭಾಗದ ಗೋಡೆಗಳು ಗಾರೆ ಮತ್ತು ಇಟ್ಟಿಗೆಯದಾಗಿದೆ. ಗರ್ಭಗೃಹದ ಒಳಗೆ ಪ್ರಾಚೀನ ಚೌರಸವಾದ ಪಾಣಿಪೀಠದ ಮೇಲೆ ನಿಂತಿರುವ ಚತುರ್ಭುಜ ವಿಷ್ಣುವಿನ ವಿಗ್ರಹವಿದೆ. ಇದರ ಮುಂಭಾಗದಲ್ಲಿ ಮುಕ್ತ ಮಂಟಪವಿದ್ದು ಮೇಲ್ಭಾಗದಲ್ಲಿ ವಿಪುಲವಾದ ಕೆತ್ತನೆಯ ಅಲಂಕಾರವುಳ್ಳ ಮರದ ಛಾವಣಿಯಿದೆ. ಇದರಲ್ಲಿ ನವಗ್ರಹ ಗಳು, ಋಷಿಗಳು, ನರ್ತಕರು, ಡೋಲುವಾದಕರು, ನವಿಲು ಮುಂತಾದ ಪಕ್ಷಿಗಳು ಹಾಗೂ ದೇವದೇವಿಯರನ್ನು ಪ್ರತಿನಿಧಿಸುವ ಆಕರ್ಷಕವಾದ ಕಾಷ್ಠಶಿಲ್ಪಗಳಿರುವುದು ಕಂಡು ಬರುತ್ತದೆ. ವಿಷ್ಣು ದೇವಾಲಯದ ಎದುರಿಗೆ ಕಂಡು ಬರುವ ಪ್ರತ್ಯೇಕವಾದ ಮಂಟಪದ ಕಂಬಗಳಲ್ಲಿ ಕಾಳಿಂಗಮರ್ದನ, ಗೋಪಿಕಾವಸ್ತ್ರಾಪಹರಣವನ್ನು ಮಾಡಿ ಮರದ ಮೇಲೆ ಅಡಗಿ ಕುಳಿತಿರುವ ಕೃಷ್ಣ ಮತ್ತು ನಗ್ನರಾಗಿ ಯಮುನಾ ನದಿಯ ದಂಡೆಯಲ್ಲಿ ನಿಂತು ನಾಚುತ್ತಿರುವ ಗೋಪಿಕಾ ಸ್ತ್ರೀಯರನ್ನು ಪ್ರತಿನಿಧಿಸುವ ದೃಶ್ಯಗಳು ಸಹಜ ಉತ್ಕೃಷ್ಟವಾದ ಕಾಷ್ಠ ಶಿಲ್ಪದ ಮಾದರಿಗಳಾಗಿವೆ. ವಿಷ್ಣು ವಿಗ್ರಹದ ಹಿತ್ತಾಳೆ ಪೀಠದ ಮೇಲಿರುವ ಶಾಸನದ ಪ್ರಕಾರ ಕೊಡಗಿನ ದೊಡ್ಡವೀರ ರಾಜೇಂದ್ರನು ದಿನಾಂಕ 29ನೇಯ ಜನವರಿ 1797 ರಂದು ಮಹಾ ವಿಷ್ಣು ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು ತಿಳಿಯುತ್ತದೆ. ಇದೇ ರೀತಿ ಕುಮಾರಸ್ವಾಮಿ ಹಾಗೂ ಭಗಂಡೇಶ್ವರ ಮೂರ್ತಿಯ ಪೀಠದ ಮೇಲೂ ಶಾಸನಗಳನ್ನು ಕೆತ್ತಲಾಗಿದ್ದು, ಅಂದೇ ಎರಡೂ ವಿಗ್ರಹಗಳನ್ನು ಪುನರ್ ಪ್ರತಿಷ್ಠಾಪಿಸಿದುದರ ಬಗೆಗೆ ಉಲ್ಲೇಖವಿದೆ.* ಭಗಂಡೇಶ್ವರ ದೇವಾಲಯದ ಆವರಣದಲ್ಲಿರುವ ಕಂಚಿನ ದೀಪಮಾಲೆ ಕಂಬದ ಪೀಠದ ಸುತ್ತಲೂ ಇರುವ ಶಾಸನವು ಕ್ರಿ. ಶ. 1881ಕ್ಕೆ ಸೇರಿದ್ದು ಕನ್ನಡ ಹಾಗೂ ಗ್ರಂಥ ಎರಡೂ ಲಿಪಿಗಳನ್ನು ಹೊಂದಿದೆ. ಕನ್ನಡ ಭಾಷೆಯಲ್ಲಿರುವ ಶಾಸನದ ಭಾಗವು ಮಣವಟ್ಟ ತಿಂಮ್ಮಯ್ಯನ ಮಗ ನೆಲೆಜಿ ಗ್ರಾಮದ ಬೆಳ್ಳಿಯಪ್ಪನು ಈ ದೀಪಮಾಲೆ ಕಂಬವನ್ನು ಹಾಕಿಸಿದನೆಂದು ತಿಳಿಸುತ್ತದೆ. ಹಾಗೆಯೇ ಗ್ರಂಥ ಭಾಷೆಯಲ್ಲಿರುವ ಶಾಸನದ ಭಾಗವು ಚಿನ್ನಪ್ಪ ನೆಂಬ ಪಣಿಕ್ಕಾರನು ಈ ಕಂಬ ತಯಾರಿಕೆಯ ಅಧೀಕ್ಷಣೆ ಯನ್ನು ಮಾಡಿದ ಬಗೆಗೂ ಮತ್ತು ಇದನ್ನು ಅಪ್ಪಟವಾದ ಕಂಚಿನಿಂದ ಸುಮಾರು ಐದು ಅಡಿ ಎತ್ತರವಿರುವಂತೆ ತಯಾರಿಸಲು ಪೂರ್ಣವಾಗಿ ನೆರವಾದನೆಂದು ತಿಳಿಸುತ್ತದೆ. ಭಗಂಡೇಶ್ವರ ದೇವಾಲಯದ ಪ್ರಾಕಾರದ ಪ್ರವೇಶದ ಮಧ್ಯ

---

* ಎದುರ್ಕಳ ಕೆ.ಶಂಕರನಾರಾಯಣ ಭಟ್ಟ, 'ಶ್ರೀ ಕಾವೇರಿ ವೈಭವ'.

ವಲ್ಲಿರುವ ಮರದ ಬಾಗಿಲುವಾಡದ ಅಲಂಕಾರವನ್ನು ದೊಡ್ಡ ವೀರರಾಜೇಂದ್ರನು ಮಾಡಿಸಿದನೆಂದು ತಿಳಿದುಬರುತ್ತದೆ. ಬಾಗಿಲುವಾಡದ ಲಲಾಟದಲ್ಲಿ ಅತ್ಯುತ್ತಮ ಕರಕುಶಲ ಜಾಣ್ಮೆಯನ್ನು ಪ್ರತಿನಿಧಿಸುವ 6'' ಮತ್ತು 36'' ಆಯದ ಕರಿಮರದಲ್ಲಿ ಶ್ರೀ ಸಂತಾನ ಗೋಪಾಲಕೃಷ್ಣಲೀಲೆಯನ್ನು ಚಿತ್ರಿಸಲಾಗಿದೆ. ಭಗಂಡೇಶ್ವರ ದೇವಾಲಯದ ಖಜಾನೆಯಲ್ಲಿರುವ ಬೆಳ್ಳಿಯ ಪೀಠದ ಮೇಲೆ ಶಾಸನವಿದ್ದು. ಕ್ರಿ.ಶ. 1839ರಲ್ಲಿ ಕೊಡಗಿನಲ್ಲಿದ್ದ ಬ್ರಿಟಿಷ್ ಸೂಪರಿಂಟೆಂಡೆಂಟ್ ಕ್ಯಾಪ್ಟನ್ ಲೀ ಹಾರ್ಡಿಯ ಕಾಲದಲ್ಲಿ ದಿವಾನ್ ಪೋಂನಪ್ಪಯಿಾ ಬೋಪು ಹಾಗೂ ಮಿಾನಾಕ್ಷಯ್ಯ ಎಂಬ ಅಧಿಕಾರಿಗಳು ಬೆಳ್ಳಿ ಖಜಾನೆಯ ಪೀಠ, ಬೆಳ್ಳಿ ಪ್ರಭಾವಳಿ, ಮೂರು ಸುವರ್ಣ ಛತ್ರಿಗಳು, ಎರಡು ಸೂರ್ಯಪಾನ ಮತ್ತು ಎರಡು ಪತ್ತಕ (ಪತಾಕೆ?) ಗಳನ್ನು ಮಾಡಿಸಿ ದೇವರಿಗೆ ಸಮರ್ಪಿಸಿದರೆಂದು ತಿಳಿಸುತ್ತದೆ. ಈ ದೇವಾಲಯದ ಹೊರ ಪ್ರಾಕಾರದಲ್ಲಿ ಗಣಪತಿಯ ಚಿಕ್ಕಗುಡಿಯಿದೆ. ಕೇವಲ ಗರ್ಭಗೃಹವನ್ನು ಮಾತ್ರ ಹೊಂದಿರುವ ಚಿಕ್ಕದಾದರೂ ಆಕರ್ಷಕ ಕಟ್ಟಡದಲ್ಲಿ ಗಣಪತಿಯ ಶಿಲಾಮೂರ್ತಿ ಇದೆ. ಗೋಡೆಯಲ್ಲಿ ಎರಡು ಮಾಡುಗಳಿದ್ದು, ಕಿರಿದಾದ ಲಕ್ಷ್ಮೀ ಮತ್ತು ಕಾಳಿಯ ಶಿಲಾ ಪ್ರತಿಮೆಗಳಿವೆ. ಈ ಗುಡಿಯು ಪಶ್ಚಿಮಾಭಿಮುಖವಾಗಿದ್ದು, ಮುಖ್ಯ ಕಟ್ಟಡಕ್ಕೆ ಸರಿಯಾಗಿ ಎದುರಿಗೆ ನಿರ್ಮಿತವಾಗಿದೆ. ಈ ಆವರಣದಲ್ಲಿರುವ ವಸಂತ ಮಂಟಪದ ಎದುರಿಗೆ ಎರಡು ಕಲ್ಲಿನ ಆನೆಗಳಿದ್ದು, ಅವುಗಳ ಸೊಂಡಿಲುಗಳು ಭಗ್ನವಾಗಿದ್ದು ಟಿಪ್ಪುವಿನ ಆಕ್ರಮಣದ ಕಾಲದಲ್ಲಿ ಹೀಗಾಯಿತೆಂದು ವದಂತಿ. ಭಗಂಡೇಶ್ವರವೂ ಕೊಡಗಿನ ಅತ್ಯಂತ ಸುಂದರ ಮತ್ತು ಆಕರ್ಷಕ ದೇವಾಲಯ. ಇಲ್ಲಿನ ಕಾಷ್ಟಶಿಲ್ಪಗಳು ಕರ್ನಾಟಕದಲ್ಲೇ ಅಪರೂಪವಾಗಿದ್ದು ಬಹುಶಃ ದೊಡ್ಡ ವೀರರಾಜೇಂದ್ರನ ಕಾಲದಲ್ಲೇ ರಚಿತವಾಗಿರಬೇಕು. ಅವುಗಳಿಗೆ ಬಳಿದ ಬಣ್ಣವೂ ಕಲಾತ್ಮಕವಾಗಿದೆ. ಇಲ್ಲಿನ ವಸಂತ ಮಂಟಪದಲ್ಲಿ ಹುತ್ತರಿ ಹಬ್ಬದ ದಿನ ದೇವರ ಗದ್ದೆಯಿಂದ ಹೊಸ ಕದಿರು ತಂದು ಪೂಜಿಸುತ್ತಾರೆ.

ಊರಿನಲ್ಲಿ ಕಾಶೀಮಠದ ಶಾಖೆ ಮತ್ತು ರಾಮಮಂದಿರಗಳು ಇವೆ. ತುಲಾಸಂಕ್ರಮಣದಿಂದ ಒಂದು ತಿಂಗಳು ಭಾಗಮಂಡಲದಲ್ಲಿ ದೊಡ್ಡದಾದ, ಜಾತ್ರೆ ನಡೆದಾಗ, ಒಂದು ಲಕ್ಷಕ್ಕೂ ಮೀರಿದಂತೆ ಭಕ್ತಾದಿಗಳು ಭಾಗಮಂಡಲದಲ್ಲಿ ಸೇರಿ ತೀರ್ಥ ಸ್ನಾನವನ್ನೂ ಪಿತೃದೇವತಾ ಪೂಜೆಯನ್ನೂ ಮಾಡುತ್ತಾರೆ.

ಭಾಗಮಂಡಲವು ಜೇನು ಉತ್ಪಾದನೆಯ ಪ್ರಮುಖ ಕೇಂದ್ರ. ಇಲ್ಲಿ ಸರಕಾರಿ ಜೇನು ಕೃಷಿ ತರಬೇತಿ ಕೇಂದ್ರವಿದೆ. ರಾಜ್ಯದಲ್ಲಿ ಇದು ಇಂಥ ಏಕೈಕ ಸಂಸ್ಥೆಯಾಗಿದ್ದು 'ಮಧುವನ' ಎಂದು ಹೆಸರನ್ನು ಹೊಂದಿದೆ. ಇಲ್ಲಿ ಜೇನುಕೃಷಿಗೆ ಸಂಬಂಧಿಸಿದ ಅಪೂರ್ವ ವಸ್ತುಸಂಗ್ರಹಾಲಯವಿದೆ. ಭಾಗಮಂಡಲವು ಏಲಕ್ಕಿ ಕೃಷಿಗೂ ಪ್ರಸಿದ್ಧ. ಭಾಗಮಂಡಲದ ಊರ ಹೊರಗೆ ಪ್ರವಾಸಿಗರಿಗೆ ಪರಿವೀಕ್ಷಣಾಲಯವಿದೆ.

**ಮಡಿಕೇರಿ**

ಬೆಂಗಳೂರಿನಿಂದ 260 ಕಿ.ಮೀ. ದೂರದಲ್ಲಿರುವ ಮಡಿಕೇರಿಯು (ಜನಸಂಖ್ಯೆ 28,729) ಜಿಲ್ಲಾ ಹಾಗೂ ತಾಲೂಕು ಕೇಂದ್ರವಾಗಿದೆ. ಪಶ್ಚಿಮಘಟ್ಟಗಳಿಗೆ ಸೇರಿದ ಕಡಿದಾದ ಬೆಟ್ಟಗುಡ್ಡಗಳ ಏರಿಳಿತಗಳ ನಡುವೆಯೇ ಈ ಪಟ್ಟಣವನ್ನು ನಿರ್ಮಿಸಲಾಗಿದೆ. ಈ ತಾಲೂಕಿನ ಪಶ್ಚಿಮ ಭಾಗದಲ್ಲಿರುವ ಬ್ರಹ್ಮಗಿರಿ ಶ್ರೇಣಿ ಕೊಡಗು ಜಿಲ್ಲೆಯನ್ನು ವೈನಾಡಿನಿಂದ ಬೇರ್ಪಡಿಸಿರುವ ಪರ್ವತ ಶ್ರೇಣಿಯಾಗಿದೆ. ಮಡಿಕೇರಿಯ ಉತ್ತರಕ್ಕೆ 14 ಕಿ.ಮೀ. ದೂರದಲ್ಲಿರುವ ಸುಬ್ರಹ್ಮಣ್ಯ ಪರ್ವತ ಶ್ರೇಣಿಗೆ ಸೇರಿದ ಕೋಟೆ ಬೆಟ್ಟವಿದೆ. ಮಡಿಕೇರಿಯ ಸುತ್ತಮುತ್ತ ಪರ್ವತಗಳಿದ್ದು ಪಟ್ಟಣದ ಈ ಪ್ರದೇಶವು ಗಿರಿಕಂದರಗಳಿಂದ, ಹಸಿರು ಕಾಡುಗಳಿಂದ ಮತ್ತು ಹುಲ್ಲುಗಾವಲುಗಳಿಂದ ಆವೃತವಾಗಿದೆ. ಹಲವಾರು ಬೆಟ್ಟ ದಿಣ್ಣೆಗಳ ಮೇಲೆ ಕಟ್ಟಲಾದ ಹೆಂಚಿನ ಮನೆಗಳ ಸಮೂಹದಿಂದ ಮಡಿಕೇರಿಯು ಹಿಮಾಲಯದ ತಪ್ಪಲಿನ ಊರೊಂದನ್ನು ಜ್ಞಾಪಿಸುವಂತಿದೆ. 'ಮಡಿಕೇರಿ' ಎಂಬ ಸ್ಥಳವನ್ನು ಬ್ರಿಟಿಷರು 'ಮರ್‌ಕೆರಾ' ಎಂದು ಉಚ್ಚರಿಸುತ್ತಿದ್ದು ಈಗ ಅಧಿಕೃತವಾಗಿ ಮಡಿಕೇರಿ ಎಂದೇ ಹೆಸರಿಸಿದೆ. ಹಾಲೇರಿ ವಂಶದ ಅರಸರ ಕಾಲದಲ್ಲಿ ಮುದ್ದುರಾಜನೆಂಬವನು ಮಡಿಕೇರಿ ನಗರವನ್ನು ಕ್ರಿ.ಶ. 1681 ರಲ್ಲಿ ಸ್ಥಾಪಿಸಿದನೆಂದು ತಿಳಿದುಬರುತ್ತದೆ. ಇದಕ್ಕೆ ಪೂರ್ವದಲ್ಲಿ ಮುದ್ದುರಾಜನು ಹಾಲೇರಿ ಅರಮನೆಯಲ್ಲೇ ಇರುತ್ತಿದ್ದನು; ನಂತರ ಮಡಿಕೇರಿಯನ್ನು ಸ್ಥಾಪಿಸಿ ತನ್ನ ರಾಜಧಾನಿಯನ್ನು ಅಲ್ಲಿಗೆ ಸ್ಥಳಾಂತರಿಸಿದನೆಂದು ಪ್ರತೀತಿ ಇದೆ. ಆತನ ಕಾಲದಲ್ಲಿ ಈ ಸ್ಥಳಕ್ಕೆ 'ಮುದ್ದುರಾಜನ ಕೇರಿ' ಎಂದು ಹೆಸರಿದ್ದು ನಂತರ ಜನರ ಬಾಯಲ್ಲಿ 'ಮಡಿಕೇರಿ' ಆಯಿತೆಂದು 'ರಾಜೇಂದ್ರನಾಮೆ' ಮುಂತಾದ ದಾಖಲೆಗಳು ಹೇಳಿವೆ. ಆದರೆ, ಭೂಗೋಳಿಕವಾಗಿ ಈ ನಗರವು 'ಮರಡಿ' ಅಥವಾ ಎತ್ತರವಾದ ಬೆಟ್ಟಗಳ ಮೇಲಿರುವ ಊರಾಗಿರುವುದರಿಂದ ಬಹುಶಃ 'ಮರಡಿಯ ಕೇರಿ' ಕಾಲಾನುಕಾಲಕ್ಕೆ 'ಮಡಿಕೇರಿ'ಯಾಯಿತೆಂದು ಒಂದು ಅಭಿಪ್ರಾಯ. ಮಡಿಕೇರಿಯಲ್ಲಿದ್ದ (ಈಗ ಸ್ವಿಟ್ಸರ್‌ಲ್ಯಾಂಡ್‌ನ ವಸ್ತುಸಂಗ್ರಹಾಲಯ

ದಲ್ಲಿರುವ) ಗಂಗರ ಕಾಲದ ತಾಮ್ರ ಶಾಸನದಲ್ಲಿ ದಾನನೀಡಲಾಗಿರುವ ಗ್ರಾಮದ ಭೌಗೋಳಿಕಾ ವಿವರಣೆಯನ್ನು ನೀಡುವ ಉತ್ತರ ದಿಸಿ 'ಕಾಯ್ಗ ಮೊರಡಿ' ಎಂಬ ಉಲ್ಲೇಖವು ಬಹುಶಃ 'ಮರಡಿಕೇರಿಯ' ವಾದಕ್ಕೆ ಪುಷ್ಟಿಕೊಡುತ್ತದೆ ಎನ್ನಬಹುದು.

ಹತ್ತೊಂಬತ್ತನೇಯ ಶತಮಾನದ ಪ್ರಾರಂಭದಲ್ಲಿ ಮಡಿಕೇರಿಯು ಒಂದು ಸಣ್ಣ ಊರಾಗಿತ್ತು. ಮತ್ತು ಇದು ನೆರೆ ಪ್ರಾಂತ್ಯಗಳೊಂದಿಗೆ ಯಾವುದೇ ರೀತಿಯ ವಾಣಿಜ್ಯ ಹಾಗೂ ವ್ಯಾಪಾರ ಸಂಪರ್ಕವನ್ನು ಹೆಚ್ಚಾಗಿ ಹೊಂದಿರಲಿಲ್ಲ. ರಾಜನ ಆಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳ ಮನೆಗಳು ಈಗಿನ ಕೋಟೆಯ ಸರಹದ್ದಿನಲ್ಲೇ ಇದ್ದವು. ಕೊಡಗಿನ ವೀರರಾಜೇಂದ್ರನು ಕ್ರಿ.ಶ.1800 ರಿಂದ 1805ರ ಅವಧಿಯಲ್ಲಿ ತನ್ನ ರಾಣಿ ಮಹಾದೇವಮ್ಮಾಜಿಯ ನೆನಪಿಗಾಗಿ 'ಮಹಾದೇವ ಪೇಟೆ' ಎಂಬ ಹೊಸ ಬಡಾವಣೆಯನ್ನು ಕೋಟೆಯಿಂದ ಉತ್ತರಕ್ಕೆ ನಿರ್ಮಿಸಿದನು. ಹಾಗೆಯೇ ನಗರದ ಉತ್ತರದ ಕೊನೆಯಲ್ಲಿ ಪೇಟಾಸುಭೇದಾರರ ಕಚೇರಿಯನ್ನೂ ಸಹ ವೀರರಾಜೇಂದ್ರನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈಗ ಈ ಕಟ್ಟಡದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಇದೆ.

ಮಡಿಕೇರಿಯಲ್ಲಿರುವ ಸಾರ್ವಜನಿಕ ಕಟ್ಟಡಗಳಲ್ಲಿ ಈಗಿರುವ ಕೋಟೆಯು ಪ್ರಮುಖವಾದುದು. ಎತ್ತರವಾದ ಸಮತಟ್ಟಾದ ಗುಡ್ಡವೊಂದರ ಮೇಲೆ ಅರಮನೆಯನ್ನು ಆವರಿಸಿ ಇದು ನಿರ್ಮಿತವಾಗಿದೆ. ಹಿಂದೆ ಇದ್ದ ಮಣ್ಣಿನ ಕೋಟೆಯನ್ನು ಟಿಪ್ಪುಸುಲ್ತಾನನು ಕಲ್ಲಿನಿಂದ ಪುನರ್ರಚಿಸಿ ಇದಕ್ಕೆ 'ಜಾಫರಾಬಾದ್' ಎಂದು ಕರೆದನು. ಆದರೆ, 1790ರಲ್ಲಿ ದೊಡ್ಡವೀರರಾಜೇಂದ್ರನು ತನ್ನ ಪ್ರಬಲವಾದ ಸೈನ್ಯದಿಂದ ಸುತ್ತುವರೆದಾಗ, ಇಲ್ಲಿದ್ದ ಬಂದೂಕಗಳು, ಮದ್ದುಗುಂಡುಗಳು ಹಾಗೂ ಎಲ್ಲಾ ಸೈನ್ಯ ಸಲಕರಣೆಗಳೂ ರಾಜನ ವಶಕ್ಕೆ ಬಂದುವು. ಪುನಃ ಮಡಿಕೇರಿಯ ಕೋಟೆಯು ಏಪ್ರಿಲ್1834ರಲ್ಲಿ ಬ್ರಿಟಿಷರ ಹತೋಟಿಗೆ ಒಳಪಟ್ಟಿತು. ಈಗಲೂ ಈ ಕೋಟೆಯು ಸುರಕ್ಷಿತ ಸ್ಥಿತಿಯಲ್ಲಿ ಇದೆ. ಒಳಗಿನ ಅರಮನೆ ಹಾಗೂ ಇತರೆ ಕಟ್ಟಡಗಳಲ್ಲಿ ಈಗ ಜಿಲ್ಲಾಧಿಕಾರಿಗಳ ಮತ್ತು ಇತರ ಸರ್ಕಾರಿ ಕಚೇರಿಗಳು ಇವೆ. ಕೋಟೆಯ ಸ್ಥಳ ವಿನ್ಯಾಸವು ಅಂಕುಡೊಂಕಾದ ಷಟ್‌ಕೋನಾಕಾರವಾಗಿದೆ. ಮತ್ತು ನಗರದ ಯಾವುದೇ ಭಾಗದಿಂದ ನಿಂತು ನೋಡಿದರೂ ಈ ಕಲ್ಲಿನ ಕಟ್ಟಡವು ಎದ್ದು ಕಾಣುತ್ತದೆ. ಆರು ವಿವಿಧ ಮೂಲೆಗಳಲ್ಲಿ ಕೊತ್ತಲಗಳನ್ನು ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಕೋಟೆಯ ಮಹಾದ್ವಾರವು ಪೂರ್ವಾಭಿಮುಖವಾಗಿದ್ದು, ವಿಶಾಲವಾದ ಬೃಹದಾಕಾರವಾದ ಬಾಗಿಲುವಾಡದಲ್ಲಿ ವಿಫುಲವಾದ ಗಾರೆಯ ಹೂಬಳ್ಳಿಗಳ ಮತ್ತು ಉಬ್ಬುಶಿಲ್ಪಗಳ ಅಲಂಕಾರವಿದೆ. ನೇರವಾಗಿ ಈ ದ್ವಾರದಿಂದ ಪ್ರವೇಶಿಸಿದರೆ ಸುಭದ್ರವಾದ ಮತ್ತೆರಡು ದ್ವಾರಗಳು ಸಿಗುತ್ತವೆ. ಇವುಗಳನ್ನು ದಾಟಿ ಹೋದರೆ ಕೋಟೆಯ ಒಳಭಾಗಕ್ಕೆ ಪ್ರವೇಶ ಸಾಧ್ಯವಾಗುತ್ತದೆ. ಕೋಟೆಯ ಒಳಗೆ ದಕ್ಷಿಣಕ್ಕೆ ಮುಂಭಾಗದಲ್ಲಿ ಮೊದಲು ಇದ್ದ ವೀರಭದ್ರ ದೇವಾಲಯವನ್ನು ಕೆಡವಿ ಹಾಕಿ ಅದೇ ಸ್ಥಳದಲ್ಲಿ ರೆ|| ಎ. ಫೆನೆಲ್ ಎಂಬ ಪಾದ್ರಿಯು 1855ರಲ್ಲಿ ಸರಕಾರದ ನೆರವಿನಿಂದಾಗಿ ಒಂದು ಆ್ಯಂಗ್ಲಿಕನ್ ಚರ್ಚ್ ಅನ್ನು ನಿರ್ಮಿಸಿದನೆಂದು ರಿಕ್ಟರ್ ತಿಳಿಸುತ್ತಾನೆ. ಈಗ ಇದೇ ಕಟ್ಟಡದಲ್ಲಿ ರಾಜ್ಯ ಪ್ರಾಚ್ಯವಸ್ತು ಇಲಾಖೆಯವರ ಆಶ್ರಯದಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸಲಾಗಿದೆ. ಆಂಗ್ಲರ ಚರ್ಚ್ ಕಟ್ಟಡವು ಕೋನಾಕಾರದ ಗಾಥಿಕ್ ಶೈಲಿಯ ಗೋಪುರಗಳನ್ನು ಹೊಂದಿದೆ. ಹಿಂಭಾಗದಲ್ಲಿ ಕೋನಾಕಾರದ ಕಮಾನುಗಳಿರುವ ಕಿಟಕಿಯು ಅಲಂಕಾರ ಹೊಂದಿರುವ ಗಾಜಿನ ಚಿತ್ರಕಲೆಯಿಂದ ಅತ್ಯಂತ ಮನೋಹರವಾಗಿ ಕಾಣುತ್ತದೆ. ಬೆಟ್ಟಗೇರಿಯ ಜೈನ ಬಸದಿಯಿಂದ ತಂದಿರುವ ಎರಡು ತೀರ್ಥಂಕರರುಗಳು, ಕುಬೇರ, ಪದ್ಮಾವತಿ ಯಕ್ಷಿ, ಹೊಯ್ಸಳರ ಶೈಲಿಯ ವಿಪುಲ ಕೆತ್ತನೆಯುಳ್ಳ ಬಾಗಿಲುವಾಡದ ಭಾಗ, ಶಾಂತಿನಾಥ ತೀರ್ಥಂಕರ ಹಾಗೂ ವೀರರಾಜಪೇಟೆಯಿಂದ ತಂದಿರುವ ವಿಷ್ಣು ಮುಂತಾದ ಆಸಕ್ತಿಯುತ ಶಿಲ್ಪಗಳು ಈ ವಸ್ತು ಸಂಗ್ರಹಾಲಯದಲ್ಲಿ ಕಂಡುಬರುತ್ತವೆ. ಹೊರಗಡೆ ಅನೇಕ ವೀರಗಲ್ಲುಗಳನ್ನು ತಂದು ಸ್ಥಾಪಿಸಲಾಗಿದೆ. ಜನರಲ್ ಕೆ. ಎಂ. ಕಾರಿಯಪ್ಪನವರಿಗೆ ಕಾಣಿಕೆಯಾಗಿ ಬಂದಿದ್ದ ಹಲವಾರು ವಸ್ತುಗಳನ್ನು ಇಲ್ಲಿ ಸಂಗ್ರಹಿಸಿ ಇಡಲಾಗಿದೆ. ಅನೇಕ ಬ್ರಿಟಿಷ್ ದಾಖಲೆ ಪತ್ರಗಳನ್ನು ಇಲ್ಲಿ ಪ್ರದರ್ಶಿಸಿದೆ. ಅದರಲ್ಲಿ ಕೊಡಗಿನ ರಾಜರ ಪತ್ರ ವ್ಯವಹಾರವೂ ಸೇರಿದೆ. ಕೊಡಗಿನ ಜನರ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳು, ವೇಷ–ಭೂಷಣಗಳ ಸಂಗ್ರಹವೂ ಇದೆ. ಮಡಿಕೇರಿಗೆ ಬರುವ ಯಾತ್ರಿಕರಿಗೆ ಕೋಟೆ ಹಾಗೂ ಇತರ ಕಟ್ಟಡಗಳ ಜೊತೆಗೆ ವಸ್ತುಸಂಗ್ರಹಾಲಯವೂ ಒಂದು ಕಲಾ ಹಾಗೂ ವಾಸ್ತುಶಿಲ್ಪ ಸೌಂದರ್ಯಗಳನ್ನು ಒದಗಿಸುವ ಉತ್ತಮ ಆಕರ್ಷಣೆಯಾಗಿದೆ.

ಕೋಟೆಯ ಒಳಗಿರುವ ಕಟ್ಟಡಗಳಲ್ಲಿ ಬೃಹದಾಕಾರವಾಗಿ ಕಂಡು ಬರುವ ಕಟ್ಟಡವೆಂದರೆ ಎರಡನೇಯ ಲಿಂಗರಾಜೇಂದ್ರನ ಕಾಲದಲ್ಲಿ 1812 ರಿಂದ 1814ರ ಅವಧಿಯಲ್ಲಿ ಪುನರ್ರಚನೆಗೊಂಡ ಅರಮನೆ ಎನ್ನಬಹುದು. ಇವಕ್ಕೆ

ಹಿಂದೆ ಹುಲ್ಲಿನ ಛಾವಣಿಯಿದ್ದು ಬ್ರಿಟಿಷರು ಅದಕ್ಕೆ ಹಂಚು ಹೊದಿಸಿದ್ದಾರೆ. ಅರಮನೆಯ ಬಾಗಿಲೊಂದರ ಮೇಲ್ಭಾಗದಲ್ಲಿರುವ ಹಿತ್ತಾಳೆಯ ಫಲಕದ ಮೇಲಿರುವ ಶಾಸನವು ಅರಮನೆಯ ನಿರ್ಮಾಣದ ಆರಂಭ ಹಾಗೂ ಮುಕ್ತಾಯದ ಬಗೆಗೆ ವಿವರಿಸುತ್ತದೆ. ಇದರ ಪ್ರಕಾರ ಇದರಲ್ಲಿನ ಕಲಿವರ್ಷಕ್ಕೆ ಹೊಂದುವ 1812ರಲ್ಲಿ ಕಟ್ಟಡದ ಕಾರ್ಯವು ಆರಂಭವಾಗಿ 1814ರಲ್ಲಿ ಪೂರ್ಣಗೊಂಡಿತೆಂದು ತಿಳಿದುಬರುತ್ತದೆ. ಆಂಗ್ಲ ಅಧಿಕಾರಿ ಲೆಫ್ಟಿನೆಂಟ್ ಕೊನ್ನೋರ್ "ಈ ಸುಂದರ ಕಟ್ಟಡವು ಎರಡು ಅಂತಸ್ತುಗಳನ್ನು ಹೊಂದಿದ್ದು, ಚೌರಸ ಸ್ಥಳ ವಿನ್ಯಾಸವನ್ನು ಹೊಂದಿದೆ. ಒಳಗೆ ವಿಶಾಲವಾದ ತೊಟ್ಟಿಯ ಆಕಾರದಲ್ಲಿ ತೆರೆದ ಸ್ಥಳವಿದೆ ಹಾಗೂ ಅರಮನೆಯ ಸಭಾಂಗಣವು ವಿಶಾಲವಾಗಿದ್ದು ಕಟ್ಟಡದ ಮಧ್ಯದಲ್ಲಿದೆ. ವಾಸ್ತುಶಿಲ್ಪ ವಿನ್ಯಾಸದಲ್ಲಿ ಹೊಸತನವನ್ನು ಪ್ರದರ್ಶಿಸುವ ಈ ಕಟ್ಟಡವು ಯುರೋಪಿಯನ್ನರ ಶೈಲಿಯಂತೆ ಮುಂಭಾಗದಲ್ಲಿ 110 ಅಡಿಗಳಷ್ಟು ಅಗಲವಿರುವ ಕಟ್ಟಡದಲ್ಲಿ ಕಮಾನುಗಳು ಹಾಗೂ ಎತ್ತರವಾದ ಚೌಕಾಕಾರವಾದ ಕಿಟಕಿಗಳು ಬಣ್ಣದ ಗಾಜುಗಳಿಂದ ಅಲಂಕೃತವಾಗಿದ್ದು ವೆನಿಷಿಯಾದ ತಮ್ಮದೇ ರೀತಿಯ ಮಾದರಿಗಳನ್ನು ಬಹುಪಾಲು ಹೋಲುತ್ತವೆ. ಮುಂಭಾಗದಲ್ಲಿರುವ ಕೊಠಡಿಗಳು ಪಾಶ್ಚಿಮಾತ್ಯರ ಅವಶ್ಯಕತೆಯಂತೆಯೇ ವಿಶಾಲವಾಗಿದೆ. ಭಾರತೀಯ ಶಿಲ್ಪಿಗಳು ತಮ್ಮದೇ ಆದ ಸ್ಥಳೀಯ ಪ್ರಾವೀಣ್ಯತೆಯನ್ನೂ, ಹಾಗೂ ಇತರ ಹಿಂದೂ ರಾಜರ ನಿವಾಸಗಳ ಕಟ್ಟಡಗಳಲ್ಲಿ ಪ್ರದರ್ಶಿಸಿರುವ ವಾಸ್ತು ಪರಿಪೂರ್ಣತೆಯನ್ನೂ ಕೇವಲ ಇಟ್ಟಿಗೆ ಮತ್ತು ಗಾರೆಯ ಸಹಾಯದಿಂದ ಇಂಥಹ ಗಟ್ಟಿಮುಟ್ಟಾದ ಅರಮನೆಯಲ್ಲಿ ಪ್ರದರ್ಶಿಸಿರುವುದು ನಿಜಕ್ಕೂ ಅಭಿನಂದನೀಯ", ಎಂದು ಅಭಿಪ್ರಾಯ ಪಡುತ್ತಾನೆ. ತರುವಾಯ ಬ್ರಿಟಿಷರು ಈ ಅರಮನೆಯನ್ನು ಎರಡು ಬಾರಿ ಜೀರ್ಣೋದ್ಧಾರ ಮಾಡಿರುವುದು ಅವರ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈಗ ಮುಂಭಾಗದಲ್ಲಿರುವ ಗಡಿಯಾರದ ಗೋಪುರ ಹಾಗೂ ಕೆಳಭಾಗದ ಪ್ರವೇಶ ಮಂಟಪಗಳನ್ನು 1933ರಲ್ಲಿ (ಕಮೀಷನರ್‌ರವರ ವಾಹನ ನಿಲ್ಲಿಸುವುದಕ್ಕಾಗಿ) ನಿರ್ಮಿಸಲಾಯಿತು. ಕೋಟೆಯ ಹೊರಾಂಗಣದ ಈಶಾನ್ಯ ಭಾಗದಲ್ಲಿ ಗಾರೆಯಲ್ಲಿ ಮಾಡಲಾಗಿರುವ ನಿಜಗಾತ್ರದ ಎರಡು ಆನೆಗಳು ಗಮನ ಸೆಳೆಯುತ್ತದೆ. ಈಗ ಅರಮನೆಯ ಬಲಭಾಗದಲ್ಲಿ ಮಹಾತ್ಮಾಗಾಂಧಿ ಸಾರ್ವಜನಿಕ ಗ್ರಂಥಾಲಯವು ಕಂಡು ಬರುತ್ತದೆ. ಜಿಲ್ಲಾಧಿಕಾರಿಗಳ ಹಾಗೂ ಸರಕಾರದ ಬಹುಪಾಲು ಕಚೇರಿಗಳು ಕೋಟೆಯ ಆವರಣದೊಳಗೆ ಕಾರ್ಯ ನಿರ್ವಹಿಸುತ್ತಿವೆ. ಇದರ ಗೋಡೆಗಳಲ್ಲಿ ಐರೋಪ್ಯ ಶೈಲಿಯಿಂದ ಪ್ರಭಾವಿತ ವರ್ಣಚಿತ್ರಗಳು ಕೆಲವೆಡೆ ಇದ್ದು ಅಲ್ಲಿ ರಾಜರ ಮುದ್ರೆಗಳ ವಿವಿಧ ವಿನ್ಯಾಸಗಳನ್ನು ಬೃಹದಾಕಾರದಲ್ಲಿ ಚಿತ್ರಿಸಿದ್ದಾರೆ. (ಈಗ ಜಿಲ್ಲಾ ಪರಿಷತ್ತಿನ ಕಚೇರಿ ಇರುವ ಭಾಗದಲ್ಲಿ ಈ ಚಿತ್ರಗಳಿವೆ). ಕೋಟೆಯ ಪೂರ್ವ ದ್ವಾರದಲ್ಲಿ ಕೋಟೆ ಮಹಾಗಣಪತಿ ದೇವಾಲಯವಿದೆ. ಇಲ್ಲಿ ಭಾದ್ರಪದ ಚೌತಿಗೆ ನೂರಾರು ಭಕ್ತರು ಬಂದು ಈಡುಗಾಯಿ ಒಡೆಯುತ್ತಾರೆ.

ಮಡಿಕೇರಿ ನಗರದ ಮಧ್ಯಭಾಗದಲ್ಲಿ ಕೋಟೆಯಿಂದ ಪೂರ್ವಕ್ಕೆ ಕಣಿವೆಯಲ್ಲಿ ಓಂಕಾರೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಕ್ರಿ.ಶ. 1820 ರಲ್ಲಿ ಎರಡನೇಯ ಲಿಂಗರಾಜೇಂದ್ರನು ನಿರ್ಮಿಸಿದನು. 'ಬ್ರಹ್ಮ ರಾಕ್ಷಸ' ನೊಬ್ಬನ ಪೀಡೆಯಿಂದ ಲಿಂಗರಾಜನು ಎಡಬಿಡದೇ ತೊಂದರೆಗೆ ಒಳಗಾಗಲು ಕಾಶಿಯಿಂದ ಶಿವಲಿಂಗವನ್ನು ತರಿಸಿ ಓಂಕಾರೇಶ್ವರ ದೇವಾಲಯವನ್ನು ಕಟ್ಟಿಸಿ ತನಗೊದಗಿದ್ದ ಪೀಡೆಯಿಂದ ಪಾರಾದನೆಂದು ಐತಿಹ್ಯವಿದೆ.* ಈ ದೇವಾಲಯವು ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿತವಾಗಿದೆ. ವೃತ್ತಾಕಾರವಾದ ಶಿಖರ, ನಾಲ್ಕು ಮೂಲೆಗಳಲ್ಲಿ ನಾಲ್ಕು ಮಿನಾರ್‌ಗಳು ಕಂಡು ಬರುತ್ತವೆ. ವಿಶಾಲವಾದ ದೇವಾಲಯದ ಕಟ್ಟಡ ಹಾಗೂ ಪ್ರಾಂಗಣವು ಅತ್ಯಂತ ಆಕರ್ಷಕವಾಗಿ ಗಾರೆ ಮತ್ತು ಇಟ್ಟಿಗೆಯ ಸಹಾಯದಿಂದ ಕಟ್ಟಲಾಗಿದೆ. ದೇವಾಲಯದ ಎದುರಿಗೆ ಒಂದು ಚೌರಸವಾದ ದೊಡ್ಡ ಕಲ್ಯಾಣಿಯನ್ನು ಕಟ್ಟಿಸಿ ಇದರ ಮಧ್ಯಭಾಗದಲ್ಲಿ ಒಂದು ಉತ್ಸವ ಮಂಟಪವನ್ನು ಸಹ ನಿರ್ಮಿಸಿದೆ. ದೇವಾಲಯದಲ್ಲಿ ಶಿವಲಿಂಗವನ್ನು 27ನೇಯ ಮಾರ್ಚ್ 1820ರಂದು ಪ್ರತಿಷ್ಠಾಪಿಸಲಾಯಿತು. ದೇವಾಲಯದಲ್ಲಿ ಗರ್ಭ ಗೃಹವಿಲ್ಲ; ಒಂದು ದರ್ಗಾ ಮಾದರಿಯಲ್ಲಿ ಕಟ್ಟಡದ ಕೇಂದ್ರ ಸ್ಥಾನದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿದೆ. ದೇವಾಲಯವು ಶಾಂತ ಪರಿಸರದಲ್ಲಿದೆ. ಗರ್ಭಗೃಹದಲ್ಲಿರುವ ಶಿವಲಿಂಗವನ್ನು ಕೇರಳದ ನೀಲೇಶ್ವರದಿಂದ ಬಂದಿದ್ದ ತಂತ್ರಿಗಳು ದೀರ್ಘವಾದ ಪೂಜಾವಿಧಿಗಳೊಂದಿಗೆ ಪ್ರತಿಷ್ಠಾಪಿಸಿದರೆಂದು ಶಾಸನದಿಂದ ತಿಳಿದುಬರುತ್ತದೆ. ಇಲ್ಲಿ ದಿನಕ್ಕೆ ಮೂರು ಸಲ ಪೂಜೆ ನಡೆಸುವಂತೆಯೂ ಪರಸ್ಥಳದವರಿಗೆ ಹಲವು ಅವಶ್ಯಕ ಸೌಲಭ್ಯಗಳು ಒದಗಿಸು

* ಡಿ. ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಪು. 447.

ವಂತೆಯೂ ಹಾಗೂ ಸರ್ವಕಾಲಗಳಲ್ಲಿ ಉತ್ಸವಗಳನ್ನು ನಡೆಸುವಂತೆಯೂ ಲಿಂಗರಾಜೇಂದ್ರನು ವ್ಯವಸ್ಥೆ ಮಾಡಿರುವುದಾಗಿ ಈ ಶಾಸನದಲ್ಲಿ ದಾಖಲಿಸಿರುವನು. ತನ್ನ ಹಲವಾರು ದಾನಗಳನ್ನು ಕುರಿತು ತಾಮ್ರಶಾಸನವನ್ನು ಲಿಂಗರಾಜೇಂದ್ರನು ಗರ್ಭಗುಡಿಯ ಬಾಗಿಲುವಾಡದ ಮೇಲೆ ಹಾಕಿಸಿರುವನು. ಈ ರಾಜನು ಮಡಿಕೇರಿಯಲ್ಲಿ ಓಂಕಾರೇಶ್ವರ ದೇವಾಲಯವನ್ನು ಕಟ್ಟಿಸಿದುದಲ್ಲದೇ ಈ ಊರಿನ ಸಮೀಪವಿರುವ ಕರ್ಣಂಗೇರಿ ಗ್ರಾಮದ ಕರವೇಲ ಬಾಡಗದಲ್ಲಿ ಈಶ್ವರ ದೇವಾಲಯವನ್ನೂ ಕಟ್ಟಿಸಿ, ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿಸಿರುವನೆಂದು ತಿಳಿದು ಬರುತ್ತದೆ.

ಲಿಂಗರಾಜೇಂದ್ರನು ತನ್ನ ಅಣ್ಣನಾದ ವೀರರಾಜೇಂದ್ರನ ಕಾಲದಲ್ಲಿ ಆರಂಭವಾಗಿದ್ದ ರಾಜಗದ್ದುಗೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದನು. ಮಹಾದೇವಪೇಟೆಯಿಂದ ಉತ್ತರಕ್ಕೆ ಸ್ವಲ್ಪ ದೂರದಲ್ಲಿರುವ ಎತ್ತರವಾದ ಗುಡ್ಡವೊಂದರ ಮೇಲೆ ಎಲ್ಲಾ ದಿಕ್ಕುಗಳಿಂದಲೂ ಕಾಣುವಂತೆ ಈ ರಾಜಗದ್ದುಗೆಗಳನ್ನು ನಿರ್ಮಿಸಲಾಗಿವೆ. ವೀರರಾಜೇಂದ್ರನ ಸಮಾಧಿಯ ಪಕ್ಕದಲ್ಲೇ ಆತನ ರಾಣಿಯ ಸಮಾಧಿಯೂ ಸಹ ಇದೆ. ಬಳಿಯಲ್ಲೇ ಲಿಂಗರಾಜೇಂದ್ರನ ಗದ್ದುಗೆಯೂ ಇದೆ. ಇದನ್ನು ಅವನ ಮಗ ಚಿಕ್ಕವೀರರಾಜನು 1820ರಲ್ಲಿ ಕಟ್ಟಿಸಿದನು. ಇದಲ್ಲದೇ ರಾಜಗುರುವಾಗಿದ್ದ ರುದ್ರಪ್ಪನವರ ಸಮಾಧಿಯನ್ನು 1834ರಲ್ಲಿ ಕೊಡಗಿನ ಅಂದಿನ ದಿವಾನನಾಗಿದ್ದ ಚೆಪ್ಪುಡಿರ ಪೊನ್ನಪ್ಪನು ನಿರ್ಮಿಸಿದನು. ಇದೇ ಸ್ಥಳದಲ್ಲಿ ಬಿದ್ದಂಡ್ರ ಬೋಪು ಮತ್ತು ಆತನ ಮಗ ಬಿದ್ದಂಡ್ರ ಸೋಮಯ್ಯ ಎಂಬ ರಾಜರ ಕಾಲದ ಅಧಿಕಾರಿಗಳ ಸಮಾಧಿಗಳಿವೆ. ತನ್ನ ಸೈನ್ಯಾಧಿಕಾರಿಗಳಾಗಿ ಹುತಾತ್ಮರಾದವರ ಸ್ಮರಣೆಗಾಗಿ ದೊಡ್ಡ ವೀರರಾಜೇಂದ್ರನು 1779ರಲ್ಲಿ ಹಾಕಿಸಿರುವ ಒಂದು ಫಲಕವು ಕಂಡುಬರುತ್ತದೆ. ಟಿಪ್ಪುಸುಲ್ತಾನನ ವಿರುದ್ಧ ನಡೆದ ಯುದ್ಧಗಳಲ್ಲಿ ಬೋಪು ದಂಡನಾಯಕನು ಪ್ರಮುಖ ಪಾತ್ರ ವಹಿಸಿ ವೀರಸ್ವರ್ಗವನ್ನು ಸೇರಿದನೆಂದು ಈ ಶಾಸನವು ತಿಳಿಸುತ್ತದೆ. ಎಲ್ಲಾ ಗದ್ದುಗೆಗಳೂ ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿತವಾಗಿವೆ. ಹಾಗೂ ಗದ್ದುಗೆಗಳ ಕಿಟಕಿಗಳ ಹಿತ್ತಾಳೆಯ ಸರಳುಗಳ ಮೇಲೆ ಕಲಾತ್ಮಕ ಕೆತ್ತನಗಳಿವೆ. ಕಿಟಕಿಗಳ ಮೇಲೆ ಗಾರೆಯ ಉಬ್ಬು ಶಿಲ್ಪಗಳು ಕಂಡು ಬರುತ್ತದೆ. ಮಡಿಕೇರಿಯ ರಾಜರ ಗದ್ದುಗೆಗಳನ್ನು 1811ರಲ್ಲಿ ಕಂಡಿದ್ದ ಜನರಲ್ ವೇಲ್ಸ್‌ನ ಅಭಿಪ್ರಾಯದಂತೆ, "ಈ ನಗರವು ಬಹಳ ಸ್ವಚ್ಛವಾಗಿದೆ ಮತ್ತು ವಿಶಾಲವಾದ ರಸ್ತೆಗಳಿಂದ (ಘಟ್ಟಗಳ ಪರಿಮಿತಗಳಿದ್ದರೂ) ಉತ್ತಮವಾಗಿ ಯೋಜಿಸಲಾಗಿದೆ. ಒಂದು ರಾಜಮಾರ್ಗದ ಕೊನೆಯಲ್ಲಿ ಎತ್ತರವಾದ ನಿವೇಶನದಲ್ಲಿ ಮಣ್ಣಿನ ಗೋಡೆಗಳ ಮಧ್ಯದಲ್ಲಿ ಇಂದಿನ ರಾಜನು ಕಟ್ಟಿಸಿರುವ ತನ್ನ ಅಣ್ಣ ಹಾಗೂ ಅತ್ತಿಗೆಯರ ಸ್ಮಾರಕಗಳು ಇಂಡೋ–ಸಾರ್ಸೆನಿಕ್ ವಾಸ್ತುಶೈಲಿಯಲ್ಲಿ ಇವೆ. ಇದು ಅರ್ಧಗೋಳಾಕಾರವಾದ ಗುಮ್ಮಟಗಳು, ನಾಲ್ಕು ಮೂಲೆಗಳಲ್ಲಿ ಸಣ್ಣ ಮಿನಾರ್‌ಗಳನ್ನು ಒಳಗೊಂಡು ನಿರ್ಮಿತವಾಗಿದ್ದು, ಅತ್ಯಂತ ಆಕರ್ಷಕವಾಗಿ ಕಂಡುಬರುತ್ತದೆ. ಗೋಪುರದ ತುಟ್ಟತುದಿಯಲ್ಲಿರುವ ಕಳಶಗಳಿಗೆ ಚಿನ್ನದ ಮುಲಾಮನ್ನು ಲೇಪಿಸಲಾಗಿದೆ ಮತ್ತು ಎಲ್ಲಾ ಕಿಟಕಿಯ ಸರಳುಗಳನ್ನು ಉತ್ಕೃಷ್ಟವಾದ ಹಿತ್ತಾಳೆಯಿಂದ ಮಾಡಲ್ಪಟ್ಟಿರುವುದು ಇಲ್ಲಿಯ ವಾಸ್ತುಕಲಾ ಸೌಂದರ್ಯದ ಉನ್ನತ ನಿದರ್ಶನವಾಗಿದೆ".

ನಿಸರ್ಗ ಪ್ರೇಮಿಗಳಿಗೆ ಮಡಿಕೇರಿ ನಗರವು ಒದಗಿಸುವ ಮತ್ತೊಂದು ಆಕರ್ಷಕ ತಾಣವೆಂದರೆ 'ರಾಜಾಸೀಟ್'. ಎತ್ತರವಾದ ಸಮತಟ್ಟಾದ ಸುಂದರ ಉದ್ಯಾನವನದ ಮಧ್ಯದಲ್ಲಿರುವ, ಚೌರಸ ವಿನ್ಯಾಸವನ್ನು ಹೊಂದಿರುವ, ಕಮಾನುಗಳಿಂದ ಹಾಗೂ ನಾಲ್ಕು ಕಂಬಗಳಿಂದ ಕೂಡಿರುವ, ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿರುವ ಮಂಟಪ ಇದಾಗಿದೆ. ಕೊಡಗಿನ ರಾಜ–ರಾಣಿಯರುಗಳು ಈ ಸ್ಥಳದಿಂದ ನಿಸರ್ಗ ಸೌಂದರ್ಯವನ್ನು ಸವಿಯುತ್ತಿದ್ದುದರಿಂದ ಇದಕ್ಕೆ ಅಂಗ್ಲರ ಕಾಲದಲ್ಲಿ 'ರಾಜಾಸೀಟ್' ಎಂದು ಕರೆದರೆಂದು ತಿಳಿದುಬರುತ್ತದೆ. ಮುಂಜಾನೆಯ ಸೂರ್ಯೋದಯವಾಗುವ ಸಮಯದಲ್ಲಿ ಈ ಸ್ಥಳದಿಂದ ದೂರದ ಪ್ರಪಾತವನ್ನು ವೀಕ್ಷಿಸಿದರೆ ಹಸಿರು ಹಸಿರಾದ ಬೆಟ್ಟ ಶ್ರೇಣಿಗಳು ಮಂಜಿನ ತೆರೆಗಳನ್ನು ಹೊದ್ದು ಸೂರ್ಯನ ಕಿರಣಗಳ ಹಿನ್ನೆಲೆಯಲ್ಲಿ ಚಿನ್ನದ ಪರದೆಗಳಂತೆ ಉಜ್ವಲವಾಗಿ ಗೋಚರವಾಗುವ ದೃಶ್ಯವು ಒಂದು ವಿಶೇಷ ಅನುಭವವೆನ್ನಬಹುದು. ನಗರಕ್ಕೆ ಬರುವ ಎಲ್ಲಾ ಪ್ರವಾಸಿಗರಿಗೆ 'ರಾಜಾಸೀಟ್' ಒಂದು ಪ್ರಮುಖ ಆಕರ್ಷಣೆಯಾಗಿದೆ. ಸಂಧ್ಯಾಕಾಲದ ಸೂರ್ಯಾಸ್ತ ದೃಶ್ಯವೂ ಹೆಚ್ಚು ಆಕರ್ಷಕ. ರಾಜಾಸೀಟ್‌ಗೆ ಹೋಗುವ ದಾರಿಯಲ್ಲಿ ಎಡಭಾಗದಲ್ಲಿ ಮಹಾತ್ಮಾಗಾಂಧೀಜಿಯ ಅಸ್ತಿ ಶೇಷದ ಮೇಲೆ 1956ರಲ್ಲಿ ನಿರ್ಮಿಸಲಾಗಿರುವ ಆಧುನಿಕವಾದ ಮಂಟಪವು ಕಂಡುಬರುತ್ತದೆ. ಪ್ರಸ್ತುತ ಈ ಸ್ಥಳದಲ್ಲಿ ಸುಂದರ ಉದ್ಯಾನವನವನ್ನು ನಿರ್ಮಿಸಲಾಗಿದೆ. ಹಾಗೂ ಇತ್ತೀಚೆಗೆ ಮಕ್ಕಳಿಗಾಗಿ ಪುಟಾಣಿ ರೈಲು ಹಾಕಲಾಗಿದೆ. ರಾಜಾಸೀಟ್‌ನ ಬಳಿ ಇರುವ ಬೆಟ್ಟದ ತಳದಲ್ಲಿ ಕುಂದೂರಮೊಟ್ಟೆ ಮಾರಿಯಮ್ಮನ ಪುರಾತನ ಗುಡಿಯಿದೆ. ಈ ಬೆಟ್ಟವನ್ನು ಸ್ಟುವರ್ಟ್ ಹಿಲ್ ಎನ್ನುತ್ತಿದ್ದರು. ಊರಲ್ಲಿ ಇನ್ನೂ ಅನೇಕ ದೇವಿಯರ ಗುಡಿಗಳು ಇವೆ.

ಮಡಿಕೇರಿಯಲ್ಲಿರುವ ಮಸೀದಿಗಳ ಪೈಕಿ ಪುರಾತನವಾದುದೆಂದರೆ, ಕೋಟೆಯ ಬಳಿ ಚಿಕ್ಕಪೇಟೆಯಲ್ಲಿರುವ ಲಷ್ಕರ್ ಮಸೀದಿ ಮತ್ತು ಮಹಾದೇವಪೇಟೆಯಲ್ಲಿರುವ ಜಾಮಿಯಾ ಮಸೀದಿ. ಲಷ್ಕರ್ ಮಸೀದಿಯು ಸುಮಾರು 200 ವರ್ಷಗಳಿಗೂ ಹಿಂದೆ ನಿರ್ಮಿತವಾಗಿತ್ತು. ಇದು ಎತ್ತರವಾದ ಮಿನಾರ್‌ಗಳು ಹಾಗೂ ಅರ್ಧಗೋಳಾಕಾರವಾದ ಇಂಡೋ-ಸಾರ್‌ಸೆನಿಕ್ ಶೈಲಿಯ ಗುಮ್ಮಟ ಮತ್ತು ಗಾರೆಯ ಉಬ್ಬು ಅಲಂಕಾರವಿರುವ ಕಮಾನುಗಳಿಂದ ಅಲಂಕೃತವಾಗಿದೆ. ಇದನ್ನು ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಮಸೀದಿಯ ಸಮೀಪವೇ ಒಂದು ದರ್ಗಾ ಇದೆ. ಹನಫಿ ಸಂಪ್ರದಾಯದ ಪೀರ್ ಒಬ್ಬರ (ಹೆಸರು ತಿಳಿದಿಲ್ಲ) ದರ್ಗಾ ಇದೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಮಡಿಕೇರಿಯಲ್ಲಿರುವ ಇತರ ಮಸೀದಿಗಳಲ್ಲಿ ಮಹಾದೇವಪೇಟೆಯಲ್ಲಿರುವ ಜಾಮಿಯಾ ಮಸೀದಿಯು ಸಹ ಟಿಪ್ಪುಸುಲ್ತಾನನ ಕಾಲದ್ದೆಂದು ಪ್ರತೀತಿಯಿದೆ. ಇದರಲ್ಲಿಯೂ ಆಕರ್ಷಕವಾದ ಏಕೈಕ ಮಿನಾರ್ ಹಾಗೂ ಮಧ್ಯದಲ್ಲಿ ಅರ್ಧಗೋಳಾಕಾರವಾದ ಗುಮ್ಮಟವಿದೆ. ವಾಸ್ತುಶಿಲ್ಪ ದೃಷ್ಟಿಯಿಂದ ಜಾಮಿಯಾ ಮಸೀದಿಯು ವಿಶಾಲವಾದ ನಿವೇಶನದಲ್ಲಿ ಬೃಹದಾಕಾರವಾಗಿ ನಿರ್ಮಿತವಾಗಿದೆ. ಇದರ ಬಳಿಯಲ್ಲಿ ಯಾಕುಬ್-ಅಲಿ-ಷಾ ಎಂಬ ಪೀರ್‌ನ ದರ್ಗಾ ಇದೆ ಮತ್ತು ಇಲ್ಲಿ ಉರುಸನ್ನು ನಿಯತಕಾಲಿಕವಾಗಿ ನಡೆಸಲಾಗುವುದಿಲ್ಲ. ಮಡಿಕೇರಿ ನಗರದಲ್ಲಿರುವ ಇತರ ಮಸೀದಿಗಳೆಂದರೆ ಮಹಾದೇವಪೇಟೆಯಲ್ಲಿ ಷಾಫಿ ಸಂಪ್ರದಾಯದ ಭಟ್ಕಳ ಜಾಮಿಯಾ ಮಸೀದಿ, ಮಾರುಕಟ್ಟೆಯ ಬಳಿಯಿರುವ ಸಿಕಂದರ್ ಅಲಿಷಾ ಖಲೀಜ ಮಸೀದಿ, ಗಣಪತಿ ಬೀದಿಯಲ್ಲಿರುವ ಷಾಫಿ ಸಂಪ್ರದಾಯದ ಬದ್ರಿಯಾ ಜುಮ್ಮಾ ಮಸೀದಿ, ಹಾಗೂ ಇದೇ ಬೀದಿಯಲ್ಲಿರುವ ಎಂ. ಎಂ. ಜಮಾತ್ (ಮಂಗಳೂರಿನ ಮುಸಲ್ಮಾನರ) ಮಸೀದಿ, ಬಸ್ ನಿಲ್ದಾಣದ ಬಳಿಯಿರುವ ಮದೀನಾ ಮಸೀದಿ, ಮುಂತಾದವುಗಳು. ಜಾಮಿಯಾ ಮಸೀದಿಯ ಸಮೀಪ ಸೈಯದ್ ಇಬ್ರಾಹಿಂ ಷಾ ಎಂಬ ಪೀರ್‌ನ ದರ್ಗಾಯಿದೆ ಮತ್ತು ಇಲ್ಲಿ ಉರುಸ್ ನಡೆಯುವುದಿಲ್ಲ. ಈತ ತುಮಕೂರು ಜಿಲ್ಲೆ ಕೆಸರಮಡುವಿನಿಂದ ಬಂದವನೆಂದು ನಂಬಿಕೆ. ಭಟ್ಕಳ ಜಾಮಿಯಾ ಮಸೀದಿಯ ಬಳಿ ಪೀರ್ ಹಜರತ್ ಗಂಜೀಗೌಹರ್ ಅಲಿ ಷಾ ದರ್ಗಾಯಿದೆ. ಇಲ್ಲಿ ರಮ್‌ಜಾನ್ ತಿಂಗಳಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಉರುಸ್ ನಡೆಯುತ್ತದೆ. ಈ ಮಸೀದಿಯ ಹಿಂದೆ ಗುಲ್ ಹುಸೇನ್ ಷಾ ಇವರ ದರ್ಗಾ ಇದೆ. ಇಲ್ಲಿ ಉರುಸ್ ನಿಯಮಿತವಾಗಿ ಆಗುವುದಿಲ್ಲ. ಇಲ್ಲಿಂದ ಅನತಿ ದೂರದಲ್ಲೇ ಆರೀಫ್ ಉಲ್ ಹಕ್ಸಾ ಉರುಫ್ ಸೈಯದ್ ಸಿಕಂದರ್ ಅಲಿ ಷಾ ದರ್ಗಾಯಿದೆ. ಈ ದರ್ಗಾದಲ್ಲಿ ರಬಿಲಾವಲ್ ತಿಂಗಳಲ್ಲಿ ಉರುಸ್ ನಡೆಸುವ ಪದ್ಧತಿ ಇದೆ. ಬಸ್ ನಿಲ್ದಾಣದ ಬಳಿಯಿರುವ ಮದೀನಾ ಮಸೀದಿಯಲ್ಲಿ ಅರೆಬಿಕ್ ಮದ್‌ರಸಾದಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡಲಾಗುತ್ತದೆ. ಈದ್‌ಗಾ ಮೈದಾನದ ಬಳಿ ಒಂದು ದರ್ಗಾ ಇದ್ದು ಪೀರ್‌ರ ಹೆಸರು ತಿಳಿದಿಲ್ಲ. ಹಾಗೆಯೇ ಸರಕಾರೀ ಪ್ರವಾಸಿ ಮಂದಿರದ ಬಳಿ ಜಚ್ಚಾಬಿ ದರ್ಗಾಯಿದೆ; ಮತ್ತು ಈ ಎರಡೂ ಕಡೆ ಉರುಸ್ ಜರಗುವುದಿಲ್ಲ.

ಮಡಿಕೇರಿಯಲ್ಲಿರುವ ಚರ್ಚ್‌ಗಳ ಪೈಕಿ ಪ್ರಮುಖವಾದುದೆಂದರೆ ರೋಮನ್ ಕ್ಯಾಥೋಲಿಕ್ ಪಂಥದವರು 1768ರಲ್ಲಿ ನಿರ್ಮಿಸಿರುವ ಸೈಂಟ್ ಮೈಕೇಲ್ ಚರ್ಚ್ ಎನ್ನಬಹುದು. ಇದೂ ಸಹ ಯೂರೋಪಿನ ಗಾಥಿಕ್ ಶೈಲಿಯಲ್ಲಿ ನಿರ್ಮಿತವಾಗಿದೆ. ಮೇಲ್ಭಾಗದಲ್ಲಿ ಕೋನಾಕಾರವಾದ ಕಮಾನುಗಳುಳ್ಳ ಗಾಥಿಕ್ ಶೈಲಿಯ ಗೋಪುರವಿದೆ. ಕಿಟಕಿಗಳು ಹಾಗೂ ಬಾಗಿಲುಗಳಿಗೂ ಗಾರೆಯಿಂದ ಮಾಡಿರುವ ನವಿರಾದ ಕಮಾನುಗಳ ವಿನ್ಯಾಸವಿದೆ. ಬಣ್ಣಬಣ್ಣದ ಗಾಜುಗಳನ್ನು ಹಿಂಭಾಗದ ಎಲ್ಲಾ ಕಿಟಕಿಗಳಿಗೂ ಸೂರ್ಯನ ರಶ್ಮಿಯನ್ನು ಒಳಸೂಸುವಂತೆ ನಿರ್ಮಿಸಲಾಗಿದೆ. ಈ ಚರ್ಚಿನ ಸಂಸ್ಥೆಯ ಆಶ್ರಯದಲ್ಲಿ ಹಲವಾರು ಶಿಕ್ಷಣ ಶಾಲೆಗಳನ್ನು ನಡೆಸಲಾಗುತ್ತಿರುವುದು ವ್ಯಕ್ತವಾಗುತ್ತದೆ. ಮೈಸೂರು ರಸ್ತೆಯಲ್ಲಿ ಬಾಸೆಲ್ ಮಿಶನ್ ನವರ ಸುಂದರವಾದ ಪ್ರಾಚೀನ ಚರ್ಚ್ ಇದೆ.

ಮಡಿಕೇರಿಯಲ್ಲಿ 1953ರಲ್ಲಿ ಕಟ್ಟಲಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಒಂದು ಭವ್ಯ ಕಟ್ಟಡವಾಗಿದೆ. ಈ ಸ್ಥಳದ ಮತ್ತೊಂದು ಪ್ರಮುಖ ಕಟ್ಟಡವೆಂದರೆ 1954ರಲ್ಲಿ ನಿರ್ಮಿಸಲಾಗಿರುವ ಪುರಭವನ. ಈ ಕಟ್ಟಡವು 1912ರಲ್ಲೆ ಆರಂಭವಾಗಿದ್ದ ಕಾರೋನೇಷನ್ ಉದ್ಯಾನವನದ ಮಧ್ಯದಲ್ಲಿ ಕಟ್ಟಲಾಗಿದೆ. ಸಧ್ಯದಲ್ಲಿ ಕಟ್ಟಡದ ಸ್ವಲ್ಪ ಭಾಗದಲ್ಲಿ ಪುರಸಭೆಯ ಕಚೇರಿಗಳಿವೆ. ಸಾರ್ವಜನಿಕ ಸಮಾರಂಭಗಳು, ಸಭೆಗಳು ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ ಜರುಗುತ್ತವೆ. ಈ ಸಭಾಭವನದಲ್ಲಿ ಸುಮಾರು ಒಂದು ಸಾವಿರ ಸಭಿಕರಿಗೆ ಅವಕಾಶವಿರುವಂತೆ ಪೀಠಗಳ ವ್ಯವಸ್ಥೆಯಿದೆ. ಮಡಿಕೇರಿ ನಗರದ ಇತರ ಕಟ್ಟಡಗಳ ಪೈಕಿ ಮತ್ತೊಂದು ಆಕರ್ಷಕ ಕಟ್ಟಡವೆಂದರೆ ಚಿಕ್ಕಗುಡ್ಡವೊಂದರ ಸಮತಟ್ಟಾದ ನಿವೇಶನದಲ್ಲಿ 1912ರಲ್ಲಿ ನಿರ್ಮಿಸಲಾಗಿರುವ ಸುದರ್ಶನ ಅತಿಥಿಗೃಹ. ಈ ಕಟ್ಟಡವನ್ನು 'ಬೇವಾಯಿರ್ ಬಂಗ್ಲೆ' ಎಂದು ಹಿಂದೆ ಕರೆಯಲಾಗುತ್ತಿದ್ದು, ಕೊಡಗಿನಲ್ಲಿದ್ದ ಮುಖ್ಯ ಕಮಿಷನರ್‌ರವರ ಖಾಸಗಿ ವಸತಿ ಗೃಹವಾಗಿತ್ತು. ತೇಗ ಹಾಗೂ ಕರೀಮರದ ಅಲಂಕೃತ ಚಿತ್ತಾರವಿರುವ ಎತ್ತರವಾದ ಬಾಗಿಲುವಾಡಗಳು, ಬಣ್ಣಬಣ್ಣದ ಗಾಜುಗಳಿಂದ

ಅಲಂಕರಿಸಲ್ಪಟ್ಟಿರುವ ಬಾಗಿಲು ಕಿಟಿಕಿಗಳು ಹಾಗೂ ಆಕರ್ಷಕ ಗವಾಕ್ಷಗಳು ಕಟ್ಟಡದ ವಾಸ್ತು ವಿನ್ಯಾಸಕ್ಕೆ ಮೆರಗು ಕೊಟ್ಟಿವೆ. ಮಹಾದ್ವಾರದ ಎರಡೂ ಕಡೆಗಳಲ್ಲಿ ಅರ್ಧ ಗೋಳಾಕಾರವಾದ ಬಟ್ಟಲಿನಂತಹ ಛಾವಣಿಗಳುಳ್ಳ ಸಂದರ್ಶನಾ ಕೊಠಡಿಗಳು ಕಂಡು ಬರುತ್ತವೆ. ಎತ್ತರವಾದ ಪ್ರದೇಶದ ಮೇಲೆ ಕಟ್ಟಡವಿರುವುದರಿಂದ, ಇದರ ಮುಂಭಾಗದ ಉದ್ಯಾನವನದಲ್ಲಿ ನಿಂತು ವೀಕ್ಷಿಸಿದರೆ ಮಡಿಕೇರಿ ನಗರದ ವಿಹಂಗಮ ನೋಟವನ್ನು ಕಾಣಬಹುದಾಗಿದೆ. 1934ರಲ್ಲಿ ಮಹಾತ್ಮಾ ಗಾಂಧೀಜಿ ಕೊಡಗಿಗೆ ಬಂದಿದ್ದಾಗ ಮಡಿಕೇರಿಯಲ್ಲಿ ಆಗಿದ್ದ ಕೃಷ್ಣರಾಜವಿಲ್ಲಾ ಎಂಬ ಮನೆಯಲ್ಲಿ ತಂಗಿದ್ದರು; ಮತ್ತು ಇದು ಕೋದಂಡ ಮನೆತನಕ್ಕೆ ಸೇರಿದ್ದು ಅಲ್ಲಿ ಒಂದು ಸ್ಮಾರಕ ಫಲಕ ಹಾಕಿರುವರು. 1929ರಲ್ಲಿ ಲಾರ್ಡ್ ಇರ್‌ವಿನ್ ಕೊಡಗಿಗೆ ಬಂದುದರ ನೆನಪಿಗೆ ರಾಜಾಸೀಟ್ ಬಳಿ ಒಂದು ಸ್ಮಾರಕ ಕಂಬ ಹಾಕಿದ್ದರೆಂದು ಸ್ಥಳೀಯವಾಗಿ ಹೇಳಲಾಗುತ್ತದೆ (ಈಗ ಇರುವುದಿಲ್ಲ). ಪ್ರಸಿದ್ಧ ದೇಶಭಕ್ತ ಬಂಗಾಳದ ಶರತ್ ಚಂದ್ರ ಬೋಸ್‌ರವರನ್ನು 1942ರಲ್ಲಿ ಮಡಿಕೇರಿಯ ಮ್ಯಾಕ್‌ಫರ್‌ಸನ್ ಬಂಗಲೆಯಲ್ಲಿ ಬಂಧಿಯಾಗಿಡಲಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿನ ಚಿಕ್ಕಪೇಟೆಯಲ್ಲಿ ಮಡಿಕೇರಿ–ಮೈಸೂರು–ಮಂಗಳೂರು ರಸ್ತೆಗಳು ಸಂಧಿಸುವ ಆಯಕಟ್ಟಿನ ಸ್ಥಳದಲ್ಲಿ (ಸರಕಾರೀ ಪರಿವೀಕ್ಷಣಾ ಬಂಗಲೆಯ ಬಳಿ) ಭಾರತದ ಭೂಸೇನಾ ದಂಡನಾಯಕರಾಗಿದ್ದ ಜ॥ ಕೆ. ಎಸ್. ತಿಮ್ಮಯ್ಯನವರ ಆಳೆತ್ತರದ ಪ್ರತಿಮೆ ಇದೆ.

ಜನರಲ್ ಜೇಮ್ಸ್ ವೆಲ್ಶ್‌ನು 1811ರಲ್ಲಿ ಕೊಡಗಿಗೆ ಬೇಟೆಗೋಸ್ಕರ ಬಂದಿದ್ದಾಗ ಮಡಿಕೇರಿಗೆ ಭೇಟಿ ನೀಡಿ ತನ್ನ ಸಂದರ್ಶನದ ವೃತ್ತಾಂತವನ್ನು ಹೀಗೆ ಬರೆಯುತ್ತಾನೆ. "ಈ ನಗರವು ಮನಸ್ಸಿಗೆ ಸಂತೋಷವನ್ನುಂಟುಮಾಡುವ ಹಾಗೂ ಉನ್ನತವಾದ ಮತ್ತು ದುರ್ಗಮವಾದ ಬೆಟ್ಟಸಾಲುಗಳು ಹತ್ತಿರದಲ್ಲಿ ಒಂದು ಎತ್ತರವಾದ ಪ್ರದೇಶದಲ್ಲಿದೆ. ಈ ಬೆಟ್ಟ ಸಾಲುಗಳಿಂದ ಈ ಪ್ರದೇಶವು ಚೆನ್ನಾಗಿ ಕಾಣುತ್ತದೆ. ಇದನ್ನು ಕಡಂಗ ದಿಣ್ಣೆಗಳಿಂದ ಭದ್ರಪಡಿಸಲಾಗಿದ್ದು ದಾರಿಗಳಲ್ಲಿ ಪಹರೆಯವರಿದ್ದಾರೆ. ಈ ಬೆಟ್ಟ ಸಾಲುಗಳಿಂದ ಹೊರಗಿನಿಂದ ಬರುವ ದಾರಿಗಳೆಲ್ಲಾ ಕಾಣುತ್ತವೆ. ರಾಜನ ಅರಮನೆಯು ಕೋಟೆಯ ಒಳಗಡೆ ಇದೆ. ಆವನ ಕುದುರೆ ಮತ್ತು ಆನೆ ಲಾಯಗಳು ಕೋಟೆಯ ಹೊರಗಿನ ಇಳಿಜಾರಿನಲ್ಲಿವೆ. ಪೇಟೆಯು ಕೋಟೆಯಿಂದ ಸುಮಾರು ಅರ್ಧ ಮೈಲಿ ದೂರದಲ್ಲಿದ್ದು ಗಮನಾರ್ಹವಾಗಿ ಶುಚಿಯಾಗಿದೆ ಮತ್ತು ಮನೆಗಳು ಚೆನ್ನಾಗಿ ಕಟ್ಟಲ್ಪಟ್ಟಿವೆ. ಕೋಟೆಯಿಂದ ಪೇಟೆಗೆ ಹೋಗಲು ಉತ್ತಮವಾದ ಹೆದ್ದಾರಿಯಿದೆ. ಪೇಟೆಯ ಆಚೆ ತುದಿಯಲ್ಲಿ ಎತ್ತರವಾಗಿದ್ದು ಸಮತಟ್ಟಾದ ನಿವೇಶನವಿದೆ. ಅಲ್ಲಿಗೆ ಹೋಗುವ ಎದಿರು ಭಾಗದಲ್ಲಿ ಬಲವಾದ ಮಣ್ಣಿನ ದಿಣ್ಣೆಯಿತ್ತು. ಈ ದಿಣ್ಣೆಯ ಮಧ್ಯದ ದಾರಿಯಲ್ಲಿ ನಿವೇಶನದೊಳಕ್ಕೆ ಹೋದಾಗ ಒಂದು ಸಣ್ಣ ಮೈದಾನವೂ, ಆ ಮೈದಾನದಲ್ಲಿ ಒಂದು ಭವ್ಯವಾದ ಗೋರಿಯೂ ಕಾಣಬರುತ್ತದೆ (ಆಗ ದೊಡ್ಡವೀರರಾಜೇಂದ್ರನ ಗೋರಿಯೊಂದೇ ಇತ್ತು). ಇಲ್ಲಿರುವ ಜನರು ಐರೋಪ್ಯರನ್ನು ಗೋರಿಯೊಳಕ್ಕೆ ಕರೆದು ಅದರ ಎಲ್ಲಾ ಭಾಗಗಳನ್ನೂ ತೋರಿಸುತ್ತಾರೆ. ಈ ಗೋರಿಯು ಅಂದದಲ್ಲಿ ಔರಂಗಜೇಬನು ಔರಂಗಾಬಾದಿನಲ್ಲಿ ತನ್ನ ಪ್ರೀತಿಯ ಹೆಂಡತಿಯ ಸಮಾಧಿಯ ಮೇಲೆ ಕಟ್ಟಿಸಿದ ಗೋರಿಯನ್ನೂ, ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಗೋರಿಯನ್ನೂ ಮೀರಿಸುತ್ತದೆಂದು ನನ್ನ ಭಾವನೆ. ಈ ಗೋರಿಯ ಒಂದು ಚಿಕ್ಕ ಗೋಪುರ, ಹಾಗೂ ಮಧ್ಯದಲ್ಲಿ (ಮೇಲ್ಭಾಗದ ಛಾವಣಿಯಲ್ಲಿ) ಒಂದು ಸುಂದರವಾದ ಗೋಲಾಕೃತಿಯ ಗುಮ್ಮಟದ ಮೇಲೆ ಒಂದು ಪುಟ್ಟದಾದ ಚಿನ್ನದ ಮುಲಾಮಿರುವ ಚೆಂಡೂ ಮತ್ತು ಅದರ ಮೇಲೆ ಗಾಳಿಯ ಕೋಳಿಗಳೂ ಇವೆ."*

ಮಡಿಕೇರಿಯು ತನ್ನ ರಾಜಧಾನಿಯ ಪ್ರಾಮುಖ್ಯತೆಯನ್ನು ಪ್ರಾರಂಭದಿಂದಲೂ ಉಳಿಸಿಕೊಂಡು ಬಂದಿರುವುದಕ್ಕೆ ಮುಖ್ಯ ಕಾರಣವೆಂದರೆ, ಕೊಡಗಿನ ರಾಜರಿಗೆ ಈ ನಗರವು ಕೇಂದ್ರ ಸ್ಥಾನವಾದುದೇ ಆಗಿದೆ. ಹೀಗಿದ್ದಾಗಲೂ 1817ರ ವೇಳೆಗೆ ಮಡಿಕೇರಿಯಲ್ಲಿ ಕೇವಲ 300 ಮನೆಗಳಿದ್ದವು. ಆದರೆ, 1834 ರಲ್ಲಿ ಬ್ರಿಟಿಷರು ಕೊಡಗನ್ನು ತಮ್ಮ ಆಡಳಿತದ ವ್ಯಾಪ್ತಿಗೆ ಸೇರಿಸಿಕೊಂಡ ನಂತರವೇ ಈ ನಗರವು ಪ್ರಗತಿ ಹೊಂದಲಾರಂಭಿಸಿತು. ನಗರದ ಪುರಾತನವಾದ ಬಡಾವಣೆಗಳೆಂದರೆ ಬ್ರಾಹ್ಮಣರ ಹಾಗೂ ಗೌಳಿಗಳ ಮನೆಗಳಿರುವ ಸ್ಥಳ. ಮಡಿಕೇರಿಯ ಪುರಸಭೆಯು 1870 ರಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಇದರ ನಿಯೋಜಿತ ಬೆಳವಣಿಗೆಯಾಯಿತು. ಇಡೀ ನಗರವನ್ನು 12 ವಲಯಗಳನ್ನಾಗಿ ವಿಂಗಡಿಸಿ ನಗರಾಡಳಿತವನ್ನೂ ಸೂಕ್ತವಾಗಿ ವಿಂಗಡಿಸಲಾಯಿತು. ಪ್ರಸ್ತುತ ಮಡಿಕೇರಿಯು ಒಂದು ಕೈಗಾರಿಕಾ ಮತ್ತು ಶಿಕ್ಷಣ ಕೇಂದ್ರವಾಗಿ ಬೆಳೆದುಬಂದಿದೆ. ಅಕ್ಟೋಬರ್‌ನಿಂದ ಜನವರಿಯ ಕೊನೆಯ

---

* ಡಿ. ಎನ್. ಕೃಷ್ಣಯ್ಯ, 'ಕೊಡಗಿನ ಇತಿಹಾಸ', ಪುಟ 222–23 (ಇಂಗ್ಲಿಷ್‌ನಿಂದ ಅನುವಾದ).

ವರೆಗೆ ಮಡಿಕೇರಿ ನಗರವು ಹಿತಕರವಾದ ಹವಾಗುಣವನ್ನು ಹೊಂದಿರುತ್ತದೆ. ಡಿಸೆಂಬರ್ ತಿಂಗಳಲ್ಲಿ ಚಳಿ ಹೆಚ್ಚಾಗಿದ್ದರೂ ಎಲ್ಲೆಲ್ಲೂ ಹಿಮವು ಆವರಿಸಿರುವುದರಿಂದ ಮಡಿಕೇರಿಯನ್ನು 'ದಕ್ಷಿಣದ ಕಾಶ್ಮೀರ' ಎಂದು ಕರೆಯಲಾಗುತ್ತದೆ.

ಮಡಿಕೇರಿಯಲ್ಲಿ ದಸರಾದ ಕೊನೆಯ ದಿನ ವಿಜಯದಶಮಿ ಯಂದು ಭಾರೀ ಉತ್ಸವ ನಡೆಯುತ್ತದೆ. ಸಹಸ್ರಾರು ಜನ ಪಾಲುಗೊಳ್ಳುವ ಈ ಉತ್ಸವದಲ್ಲಿ ವಿವಿಧ ಭಾಗಗಳಿಂದ ಸಾಲಂಕೃತವಾದ ಮಂಟಪಗಳು ಒಂದೆಡೆ ಸೇರುತ್ತವೆ. ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಗ ನಡೆಯುತ್ತವೆ.

ಮಾದಾಪುರ

ಲಕ್ಷ್ಮಣತೀರ್ಥದ ಉಪನದಿಯಾದ ಮಾದಾಪುರ ನದಿಯ ತೀರದಲ್ಲಿ ಸೋಮವಾರಪೇಟೆಯಿಂದ 15 ಕಿ. ಮೀ. ದೂರ ದಲ್ಲಿರುವ ಸ್ಥಳ ಮಾದಾಪುರ (ಸೋಮವಾರಪೇಟೆ ತಾಲೂಕು). ಕೊಡಗಿನ ಲಿಂಗರಾಜೇಂದ್ರ I ಒಡೆಯನ (ದೊಡ್ಡ ವೀರ ರಾಜೇಂದ್ರನ ತಂದೆ) ಸಮಾಧಿ ಮಾದಾಪುರದಲ್ಲಿದೆ. ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ಕಟ್ಟಲಾಗಿರುವ ಈ ಸಮಾಧಿಯು ಚೌಕಾಕಾರವಾದ ತಳವಿನ್ಯಾಸ ಹೊಂದಿದ್ದು, ಅರ್ಧಗೋಳಾ ಕಾರವಾದ ಗೋಪುರವು ಮಧ್ಯದಲ್ಲಿದ್ದು, ಅದಕ್ಕೆ ಸುಂದರ ಹೂವಿನ ರೇಖೆಗಳುಳ್ಳ ಗಾರೆಯಿಂದ ಮಾಡಿದ ಅಲಂಕಾರವಿದೆ. ಇದರ ಸುತ್ತಲೂ ಚೌಕಾಕಾರವಾದ ವಿಶಾಲವಾದ ಸ್ಥಳವಿದ್ದು ಮೂಲೆಗಳಲ್ಲಿ ಸಣ್ಣ ಸಣ್ಣ ಅರ್ಧಗೋಳಾಕಾರವಾದ ಗೋಪುರ ಗಳನ್ನು ಜೋಡಿಸಲಾಗಿದೆ. ಮುಂಭಾಗದಲ್ಲಿ ಸಣ್ಣದಾಗಿ ಮುಂದುವರಿಕೆಯ ಭಾವಣಿಯಿದ್ದು ಎರಡೂ ಮೂಲೆಗಳಲ್ಲಿ ಗಾರೆಯ ಬಸವನ ಶಿಲ್ಪಗಳನ್ನು ಇರಿಸಲಾಗಿವೆ. ಈ ಸಮಾಧಿಯ ಬಲಭಾಗದಲ್ಲಿ ಮುರುಘ ಸಂಪ್ರದಾಯದ ವೀರಶೈವ ಮಠವಿದೆ. ಅದಕ್ಕೆಹೊಂದಿಕೊಂಡಂತೆ ಗುರುಪಾದ ಸ್ವಾಮಿ ಗದ್ದುಗೆ ಇದೆ. ಈ ಮಠದ ಮುಂಬಾಗಿಲಿನ ಮೇಲೆ ಕೆತ್ತಲಾಗಿರುವ ಶಾಸನವು ಕ್ರಿ. ಶ. 1779ರಲ್ಲಿ (ಕಲಿ ವರ್ಷ 4881) ಅಪ್ಪಾಜೇಂದ್ರನ ಮಗನಾದ ಮೊದಲನೇಯ ಲಿಂಗರಾಜೇಂದ್ರನು ನಿಧನವಾದು ದನ್ನು ದಾಖಲಿಸುತ್ತದೆ. ಈ ದಾಖಲೆಯ ಪ್ರಕಾರ ಲಿಂಗ ರಾಜೇಂದ್ರನ ಮಗನಾದ ವೀರರಾಜೇಂದ್ರನು ಇಲ್ಲಿರುವ ಬಸವೇಶ್ವರ ದೇವಾಲಯವನ್ನು ಮತ್ತು ಸಮಾಧಿಯನ್ನು ಕಟ್ಟಿಸಿದನೆಂದೂ ಮತ್ತು ಚಿಕ್ಕಹರವೆ, ಬೇಲೂರು, ಜಂಬೂರು ಬಸವನಹಳ್ಳಿ ಹಾಗೂ ಮಾದಾಪುರಗಳಲ್ಲಿ ಇರುವ ಕೆಲವು ಭೂಮಿಗಳನ್ನು ಈ ದೇವಾಲಯಕ್ಕೆ ದತ್ತಿ ಬಿಟ್ಟನೆಂದೂ ತಿಳಿಸುತ್ತದೆ. ಇಲ್ಲಿಯ ಬಸವೇಶ್ವರ ದೇವಾಲಯವನ್ನು ಕ್ರಿ. ಶ. 1780 ಮತ್ತು 1782ರ ನಡುವೆ ನಿರ್ಮಿಸಿರ ಬೇಕೆಂದು ಇದೇ ಶಾಸನದಿಂದ ತಿಳಿಯುತ್ತದೆ. ಬಸವೇಶ್ವರ ದೇವಾಲಯದ ಒಳಬಾಗಿಲ ಮೇಲಿರುವ ಎರಡನೇಯ ಶಾಸನವು (ಕಲಿವರ್ಷ 4943) ಕ್ರಿ. ಶ. 1843ಕ್ಕೆ ಸೇರುತ್ತದೆ. ಮುರುಘ ಮಠದ ಶಾಂತವೀರಸ್ವಾಮಿಯವರ ಶಿಷ್ಯರಾದ ಸೋಮಶೇಖರ ಶಿವಯೋಗೀಶ್ವರ ಸ್ವಾಮಿಗಳು ಈ ಗದ್ದುಗೆಯ ಮೇಲೆ ಕಲಶವನ್ನು ಪ್ರತಿಷ್ಠಾಪಿಸಿದರೆಂದು ಈ ಶಾಸನವು ತಿಳಿಸುತ್ತದೆ. ಮಠದ ಆವರಣದಲ್ಲಿರುವ ಬಸವೇಶ್ವರ ದೇವಾಲಯದ ಶಿಖರದ ಮೇಲಿನ ಕಲಶದ ತುದಿಯಲ್ಲಿರುವ ಹಿತ್ತಾಳೆ ತಗಡಿನ ಪತಾಕೆಯ ಮೇಲಿರುವ ಶಾಸನ ಮೂರನೇಯ ಶಾಸನದ ಒಕ್ಕಣೆಯನ್ನೇ ಹೊಂದಿದೆ. ಆದರೆ ದೇವಾಲಯದ ನಿರ್ಮಾಣದ ಸರಿಯಾದ ಕಾಲವನ್ನು ತಿಳಿಸುವುದಿಲ್ಲ. ಶಾಸನದ ಮಧ್ಯಭಾಗದಲ್ಲಿ 'ವಿ' (ವೀರರಾಜೇಂದ್ರ) ಎಂದು ಪ್ರಮುಖ ವಾಗಿ ಕಂಡುಬರುತ್ತದೆ–ಹಾಗೂ ಕಲಿವರ್ಷ 4881ರ ಕಾಲಕ್ಕೆ ಇದು ಸಹ ಸೇರುತ್ತದೆ. ಮಠದಲ್ಲಿದ್ದ ಒಂದು ತಾಮ್ರ ಶಾಸನವು ಕ್ರಿ. ಶ. 1796ಕ್ಕೆ ಸೇರುತ್ತದೆ. ಮೊದಲನೇಯ ವೀರರಾಜೇಂದ್ರನು ತನ್ನ ತಂದೆ ಲಿಂಗರಾಜೇಂದ್ರನ ಸಮಾಧಿ ಗಳನ್ನು ಮತ್ತು ಬಸವೇಶ್ವರ ದೇವಾಲಯದ ನಿರ್ಮಾಣ (ಹಿಂದೆಯೇ ಆರಂಭವಾಗಿದ್ದ) ಕಾರ್ಯವನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಈ ಮಠಕ್ಕೆ ಭೇಟಿಯಿತ್ತಿದ್ದ ಶಾಂತವೀರಸ್ವಾಮಿ ಗಳಿಗೆ ನೀಡಿದ ದಾನಗಳ ಬಗೆಗೆ ತಿಳಿಸುತ್ತದೆ.

ಮಾಲಂಬಿ

ಶನಿವಾರಸಂತೆಯಿಂದ ಹತ್ತು ಕಿ. ಮೀ. ದೂರದಲ್ಲಿರುವ ಮತ್ತು ಸೋಮವಾರಪೇಟೆಯ ಮುಖ್ಯ ರಸ್ತೆಯಲ್ಲಿರುವ ಒಂದು ಪ್ರಾಚೀನ ಸ್ಥಳ ಮಾಲಂಬಿ. (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 1,237). ಇದೇ ಊರಿನ ಹಳೇಗ್ರಾಮ ನಿವೇಶನದಲ್ಲಿರುವ ಸು. 11 ನೇಯ ಶತಮಾನದ ಶಾಸನದಲ್ಲಿ ಈ ಸ್ಥಳವನ್ನು 'ಮಾಲವ್ವಿ' ಎಂದು ಉಲ್ಲೇಖಿಸ ಲಾಗಿದೆ. ಇಲ್ಲಿರುವ ಬಸವಣ್ಣ ದೇವಾಲಯವು ಸಾಧಾರಣ ಕಟ್ಟಡವಾದರೂ ಇದರಲ್ಲಿ ಕೆಲವು ಪ್ರಾಚೀನ ಅವಶೇಷಗಳಾದ ಶಿವಲಿಂಗ, ಗಣಪತಿ, ಎರಡು ಮಾತೃಕೆಯರ ಮೂರ್ತಿ ಮುಂತಾದವು ಕಂಡುಬರುತ್ತವೆ. ಇದರ ಸಮೀಪವೇ ಇರುವ ವೀರಗಲ್ಲಿನ ಶಾಸನವು ಸುಮಾರು 11ನೇಯ ಶತಮಾನಕ್ಕೆ ಸೇರಿದ್ದು ಕೊಂಗಾಳ್ವರ ವಂಶಾವಳಿಯ ವಿವರಗಳನ್ನು ನೀಡುವ ಮುಖ್ಯ ದಾಖಲೆಯಾಗಿದೆ. ಈ ಶಾಸನವು ಚೋಳರಾಜನು ಮಣಿಜನೆಂಬ ಅಧಿಕಾರಿಯ ಶೌರ್ಯಕ್ಕೆ ಮೆಚ್ಚಿ ಮಾಲವ್ವಿ

ಗ್ರಾಮವನ್ನು ಅವನಿಗೆ ದಾನವಾಗಿ ನೀಡಿದ ಬಗೆಗೆ ತಿಳಿಸುತ್ತದೆ. ಕುದುರೆಯ ಮೇಲೆ ಕುಳಿತವೀರ ಪಕ್ಕದಲ್ಲಿ ಖಡ್ಗ ಹಿಡಿದಿರುವ ಆತನ ಹೆಂಡತಿ ಹಾಗೂ ನಾಯಿಯನ್ನು ಹಿಡಿದ ಸೇವಕನನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಇದರ ಸಮೀಪವೇ ಇರುವ ಇನ್ನೊಂದು ಶಾಸನವು ಕ್ರಿ.ಶ. 1756ಕ್ಕೆ ಸೇರಿದ್ದು, ಬೇಲೂರಿನ ಮುಖ್ಯಸ್ಥನಾಗಿದ್ದ ಕೃಷ್ಣಪ್ಪನಾಯಕನ ಮಗನಾದ ವೆಂಕಟಾದ್ರಿನಾಯಕನು ಮಾಲಂಬಿಯ ರಾಜೇಗೌಡನೆಂಬ ಅಧಿಕಾರಿಗೆ ನೀಡಿದ ಕೆಲವು ಭೂದಾನಗಳ ಬಗೆಗೆ ಉಲ್ಲೇಖಿಸುತ್ತದೆ. ಊರಿನಲ್ಲಿ ಖಾಸಗಿ ತೋಟದಲ್ಲಿ ಇನ್ನೂ ಎರಡು ವೀರಗಲ್ಲುಗಳಿದ್ದು ಮಧ್ಯದ ಸಾಲಿನಲ್ಲಿರುವ ಕೆತ್ತನೆಯಲ್ಲಿ ವೀರನು ರುದ್ರವೀಣೆಯನ್ನು ಹಿಡಿದಿರುವಂತೆ ಕೆತ್ತಿರುವುದು ವ್ಯಕ್ತವಾಗುತ್ತದೆ. ಇದರ ಸಮೀಪವೇ ಪಟೇಲರ ಜಮೀನಿನ ಬಳಿ ರಸ್ತೆಯ ಬದಿಯಲ್ಲಿ ಕ್ರಿ. ಶ. 19ನೇಯ ಶತಮಾನದ (ಧಾತು ಸಂವತ್ಸರದ) ಲಕ್ಷಣವನ್ನು ವ್ಯಕ್ತಪಡಿಸುವ ಆಧುನಿಕ ಶೈಲಿಯ ಶಾಸನವು ಕಂಡುಬರುತ್ತದೆ.

### ಮುಳ್ಳೂರು

ನಿಡತ ಹೋಬಳಿಯಲ್ಲಿನ ಮುಳ್ಳೂರು (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 798) ಕೊಡಗಿನಲ್ಲೇ ಅತ್ಯಂತ ಪ್ರಾಚೀನ ಜೈನಕೇಂದ್ರವೆಂದು ಜನಪ್ರಿಯವಾಗಿದೆ. ಇದಕ್ಕೂ ಹಿಂದೆಯೇ ಕ್ರಿ.ಶ. 1004ರಲ್ಲಿ ಹನಸೋಗೆ (ಮೈಸೂರು ಜಿಲ್ಲೆ) ಶಾಸನದಲ್ಲಿ ಉಲ್ಲೇಖವಾಗಿರುವಂತೆ ಗಂಗ–ಚೋಳರ ಯುದ್ಧದಲ್ಲಿ ಚೋಳರು ಜಯಶಾಲಿಗಳಾದ ಮೇಲೆ, ಇವರ ಮಾಂಡಲಿಕರಾಗಿದ್ದ ಕೊಂಗಾಳ್ವರು, ಮುಳ್ಳೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿರಬೇಕು. ಅನಂತರ ಕ್ರಿ.ಶ. 1175ರ ನಂದಿಗೊಂದದ (ಸೋಮವಾರಪೇಟೆ ತಾಲೂಕು) ಶಾಸನದಲ್ಲಿ ಮುಳ್ಳೂರು–70 ಎಂದು ಉಲ್ಲೇಖವಾಗಿರುವುದರಿಂದ[1] ಇದೊಂದು ಪ್ರಮುಖ ಆಡಳಿತ ವಿಭಾಗವಾಗಿತ್ತೆಂದು ಹೇಳಬಹುದು. ಸೋಮವಾರಪೇಟೆಯಿಂದ 25 ಕಿ.ಮೀ. ದೂರದಲ್ಲಿರುವ ಶನಿವಾರಸಂತೆ–ಬಾಣಾವರ ರಸ್ತೆಯಿಂದ ಹೋದರೆ ಬಲಭಾಗದಲ್ಲಿ ಕಚ್ಚಾ ರಸ್ತೆಯ ಕೊನೆಯಲ್ಲಿ ಮಾವಿನ ತೋಪಿನಿಂದ ಆವೃತವಾಗಿರುವ ಪ್ರದೇಶದಲ್ಲಿ ಕಲ್ಲಿನ ಮೂರು ಜೈನ ಬಸದಿಗಳು ಕಾಣಸಿಗುತ್ತವೆ. ಇದೇ ಪ್ರಾಚೀನ ಮುಳ್ಳೂರು ನಿವೇಶನ. ಇಲ್ಲಿ ಸಾಲಾಗಿರುವ ಮೂರು ಬಸದಿಗಳೆಂದರೆ ಪಾರ್ಶ್ವನಾಥ, ಶಾಂತಿನಾಥ ಹಾಗೂ ಚಂದ್ರನಾಥ ತೀರ್ಥಂಕರರುಗಳ ಬಸದಿಗಳು. ಪಾರ್ಶ್ವನಾಥ, ಬಸದಿಯನ್ನು ಎರಡನೇಯ ಕೊಂಗಾಳ್ವನ ರಾಣಿ ಪೋಚಬ್ಬೆಯು ಮುಳ್ಳೂರಿನಲ್ಲಿ ಸುಮಾರು 11ನೇಯ ಶತಮಾನದ ಮಧ್ಯಭಾಗದಲ್ಲಿ ಕಟ್ಟಿಸಿದಳೆಂದೂ[2] ಮತ್ತು ಆಕೆ ಪ್ರಸಿದ್ಧ ಜೈನ ಗುರು ಗುಣಸೇನ ಪಂಡಿತನ ಶಿಷ್ಯಳೆಂದೂ ಇದೇ ಬಸದಿಯ ನವರಂಗದ ಗೋಡೆಯ ಮೇಲಿರುವ ಶಾಸನವು ತಿಳಿಸುತ್ತದೆ. ಈ ಬಸದಿಯ ತಳಪಾಯದ ಮೇಲೆ ಇರುವ ಶಾಸನದ ಪ್ರಕಾರ ರಾಜೇಂದ್ರ ಚೋಳನ ಮಗನಾದ ರಾಜಾಧಿರಾಜ ಕೊಂಗಾಳ್ವನು ತನ್ನ ತಾಯಿ ಪೋಚಬ್ಬರಸಿಯು ಕಟ್ಟಿಸಿದ ಬಸದಿಯನ್ನು ರಾಣಿಯ ಗುರುವಾಗಿದ್ದ ಗುಣಸೇನ ಪಂಡಿತನು ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ. ಯಾವುದೇ ಕಾಲವು ಈ ದಾಖಲೆಯಲ್ಲಿಲ್ಲದಿದ್ದರೂ ಲಿಪಿಶಾಸ್ತ್ರದ ಆಧಾರದಿಂದ ಇದನ್ನು ಕ್ರಿ.ಶ. 11ನೇಯ ಶತಮಾನದ್ದೆಂದು ಹೇಳಬಹುದು. ಈ ಬಸದಿಯಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿವೆ. ಗರ್ಭಗೃಹವು ಚೌರಸ್ರವಾಗಿದ್ದು ಒಳಗೆ ಎತ್ತರವಾದ ಪಾಣಿಪೀಠದ ಮೇಲೆ ಸುಮಾರು ಒಂದು ಮೀಟರ್ ಎತ್ತರವಿರುವ ಧ್ಯಾನಾಸಕ್ತನಾಗಿ ಕುಳಿತಿರುವ ಪಾರ್ಶ್ವನಾಥನ ಆಕರ್ಷಕ ಹೊಯ್ಸಳ ಶೈಲಿಯ ಶಿಲಾಮೂರ್ತಿ ಇದೆ. ವಿಗ್ರಹದ ಹಿಂಭಾಗದಲ್ಲಿ ಅಲಂಕೃತವಾದ ಸರ್ಪದ ಹೆಡೆಯುಳ್ಳ ಪ್ರಭಾವಳಿ ಇದೆ. ಗರ್ಭಗೃಹದ ಮೇಲ್ಭಾಗದಲ್ಲಿ ಹೊಸದಾಗಿ (ದುರಸ್ತಿ ಮಾಡಿ) ಕಟ್ಟಲಾಗಿರುವ ಗಾರೆ ಮತ್ತು ಇಟ್ಟಿಗೆಯ ಶಿಖರವಿದೆ. ನವರಂಗದಲ್ಲಿರುವ ನಾಲ್ಕು ಪ್ರಾಚೀನ ಕಂಬಗಳು ಚೌಕಾಕಾರವಾದ ಪೀಠವನ್ನು ಹೊಂದಿದ್ದು ಮಧ್ಯಭಾಗವು ವೃತ್ತಾಕಾರವಾಗಿದ್ದು ಮೇಲ್ಭಾಗದಲ್ಲಿ ದುಂಡನೆಯ ದಿಂಬಿನೋಪಾದಿಯ ಶಿರೋಭಾಗವನ್ನು ಹೊಂದಿದ್ದು ಗಂಗ–ಚೋಳ ಶೈಲಿಯಲ್ಲಿವೆ. ನವರಂಗದಿಂದ ಇಳಿದು ಹೊರಗೆ ಹೋಗಲು ಮೆಟ್ಟಲುಗಳಿವೆ. ಆದರೆ ಮುಖಮಂಟಪವಿಲ್ಲ. ಪಾರ್ಶ್ವನಾಥ ಬಸದಿಯ ನವರಂಗದಲ್ಲಿಟ್ಟಿರುವ ಶಾಸನವು ಬಹುತೇಕವಾಗಿ ಅಳಿಸಿಹೋಗಿದ್ದು ರಾಜೇಂದ್ರ ಚೋಳ ಕೊಂಗಾಳ್ವನ ರಾಣಿ ರುಕ್ಮಿಣಿ ಮಹಾದೇವಿಯು ಈ ಬಸದಿಯಲ್ಲಿ ಕೆಲವು ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಬಗೆಗೆ ತಿಳಿಸುತ್ತದೆ. ಇದೇ ಬಸದಿಯ ಪಕ್ಕದಲ್ಲಿರುವ ಇನ್ನೊಂದು ನಿಷಿಧಿ ಶಾಸನದಲ್ಲಿ ಪುಷ್ಪದಂತನ ಶಿಷ್ಯನಾದ ಗುಣಸೇನನು ವ್ಯಾಕರಣ, ಆಗಮ, ವೇದಾಂತ ಹಾಗೂ ತರ್ಕಶಾಸ್ತ್ರದ ಆರು ಅಂಗಗಳಲ್ಲಿ ಅಪಾರವಾದ ಪಾಂಡಿತ್ಯ ಪ್ರೌಢಿಮೆಯನ್ನು

---

1 ಎ. ಕ. I, ಶಾಸನ ಸಂಖ್ಯೆ 87.

2 ಅದೇ, 68.

ಹೊಂದಿದ್ದು, ಸುಮಾರು ಕ್ರಿ.ಶ. 1064ರಲ್ಲಿ ಸಲ್ಲೇಖನ ವ್ರತ ಕೈಗೊಂಡು ಮುಳ್ಳೂರಿನಲ್ಲಿ ನಿಷಿಧಿ ಹೋದುದರ ಬಗೆಗೆ ವಿವರಗಳನ್ನು ನೀಡುತ್ತದೆ. ಇದರ ಸಮೀಪವೇ ಇರುವ ಮತ್ತೊಂದು ಶಾಸನದಲ್ಲಿ ರಾಜೇಂದ್ರ ಕೊಂಗಾಳ್ವನು ತನ್ನ ತಂದೆಯು ಕಟ್ಟಿಸಿದ ಬಸದಿಗೆ ಹಲವು ಗ್ರಾಮಗಳನ್ನು ದತ್ತಿ ಬಿಟ್ಟಿದುದಾಗಿ ತಿಳಿಸುತ್ತದೆ ಮತ್ತು ಗುಣಸೇನ ಪಂಡಿತನಿಗೆ ರಾಜಾಧಿರಾಜನ ತಾಯಿ ಪೋಚಬ್ಬರಸಿಯು ಈ ದತ್ತಿಯನ್ನು ನೀಡಿದಳೆಂದೂ ತಿಳಿಸುತ್ತದೆ. ಇದರ ಕಾಲವು ಕ್ರಿ.ಶ. 1059ರ ಸುಮಾರಿಗೆ ಸಲ್ಲುತ್ತದೆ. ಇದೇ ಬಸದಿಯಲ್ಲೇ ಇರುವ ಮೂರನೇಯ ಶಾಸನದಲ್ಲಿ ಪೃಥ್ವೀಕೊಂಗಾಳ್ವರಸನ ಪತ್ನಿಯ ಸ್ಮರಣೆಗಾಗಿ ಈ ಶಿಲೆಯನ್ನು ಹಾಕಿಸಿರುವುದಾಗಿ ತಿಳಿದು ಬರುತ್ತದೆ. ಇದರ ಕಾಲವು 11ನೇಯ ಶತಮಾನಕ್ಕೆ ಸೇರುತ್ತದೆ.

ಪಾರ್ಶ್ವನಾಥ ಬಸದಿಯ ಎಡಭಾಗದಲ್ಲಿ ಶಾಂತಿನಾಥ ಬಸದಿ ಇದೆ. ಇದರ ವಾಸ್ತುಶಿಲ್ಪ ವಿನ್ಯಾಸವನ್ನು ಗಮನಿಸಿದರೆ ಬಹುಶಃ ಇದು ಗಂಗರ ಕಾಲದ ಕಟ್ಟಡವೆಂದು ಹೇಳಬಹುದು. ಗರ್ಭಗೃಹದ ಉಪಾನವು ಗಂಗರ ಶೈಲಿಯಲ್ಲಿ ನಿರ್ಮಿತವಾಗಿದೆ. ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳನ್ನು ಈ ಬಸದಿಯು ಹೊಂದಿದೆ. ಗರ್ಭಗೃಹದಲ್ಲಿ ಎತ್ತರವಾದ ಚೌರಸವಾದ ಪಾಣಿಪೀಠದ ಮೇಲಿರುವ ಶಾಂತಿನಾಥ ತೀರ್ಥಂಕರ ಮೂರ್ತಿಯ ಪೀಠದಲ್ಲಿರುವ ಶಾಸನವು ಸುಮಾರು ಕ್ರಿ.ಶ. 12 ನೇಯ ಶತಮಾನಕ್ಕೆ (1125) ಸೇರಿದ್ದು, ಇದರ ಪ್ರಕಾರ ಜೈನಗುರು ಶ್ರೀಪಾಲತ್ರೈವಿದ್ಯಾದೇವನ ಮಲ್ಲಿಸೇನದೇವರು ಶಿಥಿಲವಾಗಿದ್ದ ಬಸದಿಯನ್ನು ಜೀರ್ಣೋದ್ಧಾರ ಮಾಡಿ ಶಾಂತಿನಾಥ ತೀರ್ಥಂಕರನ ವಿಗ್ರಹವನ್ನು ಪುನರ್ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ. ಆದುದರಿಂದ, ಈ ಬಸದಿಯು ಸುಮಾರು ಕ್ರಿ.ಶ. 10ನೇಯ ಶತಮಾನದಲ್ಲಿ ನಿರ್ಮಿತವಾಗಿರಬಹುದು. ಇದರ ಗರ್ಭಗೃಹದ ಮೇಲೆ ಕುಸಿದ ಶಿಖರವನ್ನು ಇತ್ತೀಚೆಗೆ ದುರಸ್ತಿ ಮಾಡಿದೆ. ಧ್ಯಾನಾಸಕ್ತನಾಗಿ ಕುಳಿತಿರುವ ಶಾಂತಿನಾಥ ಮೂರ್ತಿಯು ಚೋಳ–ಗಂಗ ಶೈಲಿಯಲ್ಲಿದ್ದು ಅಲಂಕೃತವಾದ ಪ್ರಭಾವಳಿಯನ್ನು ಹೊಂದಿದೆ. ಪೀಠದ ಮುಂಭಾಗದಲ್ಲಿ ಯಕ್ಷ–ಯಕ್ಷಿಯರ ಸುಂದರ ಉಬ್ಬುಶಿಲ್ಪಗಳಿವೆ. ಅರ್ಧಮಂಟಪದಲ್ಲಿ ಮತ್ತೊಂದು ತೀರ್ಥಂಕರರ (ಭಿನ್ನವಾದ) ಮೂರ್ತಿಯಿದೆ. ಇದರ ಎರಡೂ ಪಕ್ಕಗಳಲ್ಲಿ ಯಕ್ಷ–ಯಕ್ಷಿಯರ ಶಿಲ್ಪಗಳಿವೆ. ನವರಂಗದಲ್ಲಿರುವ ಕೇಂದ್ರೀಯ ಕಂಬಗಳು ವಿಜಯನಗರ ಶೈಲಿಯಲ್ಲಿರುವುದರಿಂದ ಬಹುಶಃ ಇದನ್ನು ಕ್ರಿ.ಶ. 15–16ನೇಯ ಶತಮಾನದಲ್ಲಿ ದುರಸ್ತಿ ಮಾಡಿರಬಹುದೆಂದು ಹೇಳಬಹುದು. ನವರಂಗದಲ್ಲಿ ಭಿನ್ನವಾಗಿರುವ ಎರಡು ತೀರ್ಥಂಕರರ ವಿಗ್ರಹಗಳು ಕಂಡುಬರುತ್ತವೆ ಮತ್ತು ಅವುಗಳಲ್ಲಿ ಒಂದು ಹೊಯ್ಸಳರ ಶೈಲಿಯಲ್ಲಿದೆ. ಶಾಂತಿನಾಥ ಬಸದಿಯ ಮುಂದೆ ಇರುವ ಪೀಠದ ಮೇಲಿನ ಶಾಸನವು ಕ್ರಿ.ಶ. 11 ನೇಯ ಶತಮಾನಕ್ಕೆ ಸೇರಿದ್ದು, ಗುಣಸೇನ ಪಂಡಿತರ ಗುರುವಾಗಿದ್ದ ಪುಷ್ಪಸೇನ ಸಿದ್ಧಾಂಥ ದೇವರ ಹೆಸರನ್ನು ಕೆತ್ತಲಾಗಿದೆ. ಇದೇ ಬಸದಿಯ ಪ್ರಾಕಾರದಲ್ಲಿರುವ ಶಾಸನವೂ ಸಹ ಕ್ರಿ.ಶ. 11ನೇಯ ಶತಮಾನಕ್ಕೆ ಸೇರುತ್ತದೆ. ಇದು ಬಸದಿಯ ಆವರಣದಲ್ಲಿ ಗುಣಸೇನ ಪಂಡಿತರು ಕಟ್ಟಿಸಿದ ನಾಗಬಾವಿಯ ಬಗೆಗೆ ಉಲ್ಲೇಖಿಸುವುದಲ್ಲದೇ ಊರಿನ ಸಮಸ್ತ ನಖರರೂ (ವ್ಯಾಪಾರಿಗಳು) ಬಾವಿಯ ನಿರ್ಮಾಣಕ್ಕಾಗಿ ನೀಡಿದ ದಾನಗಳ ಬಗೆಗೆ ತಿಳಿಸುತ್ತದೆ. ಶಾಸನದ ಕೆಳಗೆ ಸರ್ಪವನ್ನು ಕೆತ್ತಲಾಗಿದೆ. ನವರಂಗದ ದ್ವಾರದ ಮುಂಭಾಗದಲ್ಲಿ ಎತ್ತರವಾದ ಜಗತಿಯಿದ್ದು ಹೊರಗೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಈ ಬಸದಿಯ ಎಡಭಾಗದಲ್ಲಿರುವುದೇ ಕ್ರಿ.ಶ.1058ರ ಸುಮಾರಿಗೆ ನಿರ್ಮಿಸಲಾದ ಚಂದ್ರನಾಥ ಬಸದಿ. ವಾಸ್ತುಶಿಲ್ಪ ದೃಷ್ಟಿಯಿಂದ ಚೋಳ–ಗಂಗ ಶೈಲಿಯಲ್ಲಿರುವ ಈ ಬಸದಿಯಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿವೆ. ಗರ್ಭಗೃಹದಲ್ಲಿ ಎತ್ತರವಾದ ಪಾಣಿಪೀಠದ ಮೇಲೆ ಧ್ಯಾನಾಸಕ್ತನಾಗಿ ಕುಳಿತಿರುವ ಚಂದ್ರನಾಥ ತೀರ್ಥಂಕರರ ಶಿಲಾಮೂರ್ತಿ ಇದೆ. ಗರ್ಭಗೃಹದ ದ್ವಾರದ ಎರಡೂ ಬದಿಗಳಲ್ಲಿ ಸುಮಾರು ಒಂದು ಮೀಟರ್ ಎತ್ತರವಿರುವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗದಲ್ಲಿರುವ ಕಂಬಗಳು ಚೋಳ–ಗಂಗ ಶೈಲಿಯಲ್ಲಿದ್ದು ಉರುಳೆಯಾಕಾರವಾಗಿದೆ. ಮುಂಭಾಗದಲ್ಲಿ ಜಗತಿಯಿಂದ ಇಳಿದು ಹೋಗಲು ಮೆಟ್ಟಿಲುಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿರುವ ಆಧುನಿಕ ಶಿಖರವಿದೆ. ಹೊರಭಾಗದ ಗೋಡೆಗಳ ಮೇಲೆ ಅಲಂಕಾರಿಕ ಶಿಲ್ಪಗಳಾದ ನರ್ತನ ಮಾಡುತ್ತಿರುವ ಯಕ್ಷ, ಕುಳಿತಿರುವ ಯಕ್ಷಿ, ಕುಳಿತಿರುವ ಮಂಗ ಮುಂತಾದವುಗಳನ್ನು ಕೆತ್ತಲಾಗಿವೆ. ಚಂದ್ರನಾಥ ಬಸದಿಯ ಮುಂಭಾಗದ ಗೋಡೆಗೆ ಒರಗಿಸಿಟ್ಟಿರುವ ಶಾಸನವು ತುಂಡಾಗಿದ್ದು ಎರಡು ಹಂತಗಳನ್ನು ಹೊಂದಿದೆ. ಮೇಲ್ಭಾಗದಲ್ಲಿ ಕುಳಿತ ಜಿನನ ಎರಡೂ ಪಕ್ಕಗಳಲ್ಲಿ ಗಂಡು ಮತ್ತು ಹೆಣ್ಣು ಭಕ್ತರ ಉಬ್ಬುಶಿಲ್ಪಗಳಿವೆ. ಕೆಳಭಾಗದಲ್ಲಿ ಎರಡು ಪಂಕ್ತಿಗಳ ಶಾಸನವಿದ್ದು ಶಕ ವರ್ಷ 980ರ ವಿಳಂಬ ಸಂವತ್ಸರ ಎಂದು ಮಾತ್ರ ಇರುವುದರಿಂದ ಇದು ಕ್ರಿ.ಶ. 1058ಕ್ಕೆ ಸೇರುತ್ತದೆ. ಇದರ ಸಮೀಪವೇ ಇರುವ ಎರಡನೇಯ ಶಾಸನವು ಕ್ರಿ.ಶ.1390ಕ್ಕೆ ಸೇರಿದ್ದು ವಿಜಯನಗರದ ಎರಡನೇಯ ಹರಿಹರನ ದಂಡನಾಯಕನಾಗಿದ್ದ ಗುಂಡಪ್ಪನೆಂಬವನು ಮುಳ್ಳೂರಿನಲ್ಲಿರುವ

ಬಸದಿಗಳ ಜೀರ್ಣೋದ್ಧಾರವನ್ನು ಮಾಡಿಸಿದ ಬಗೆಗೆ ತಿಳಿಸುತ್ತದೆ. ಕೊಂಗಾಳ್ವ ರಾಜಾಧಿರಾಜನ ತಾಯಿಯಾದ ಪೋಚಬ್ಬರಸಿಯು ನೀಡಿದ ದಾನಗಳನ್ನು ಈ ಶಾಸನವು ನವೀಕರಿಸುತ್ತದೆ. ಈ ದಾಖಲೆಯಲ್ಲಿ ಕರಗೋಡು ಗ್ರಾಮವನ್ನು ಅಣ್ಣಂಗಪುರವೆಂದು ಹೆಸರು ಬದಲಾಯಿಸಿ ವಿಜಯನಗರದ ಅಧಿಕಾರಿ ಗುಂಡಪ್ಪ ದಂಡನಾಯಕನು ಪಾರ್ಶ್ವನಾಥನಿಗೆ ದತ್ತಿಕೊಟ್ಟ ಬಗೆಗೆ ಉಲ್ಲೇಖಿಸಲಾಗಿದೆ. ಆ ಕಾಲದಲ್ಲಿ ಅನೇಕ ಯುದ್ಧಗಳಲ್ಲಿ ಜಯಶೀಲನಾಗಿದ್ದ ಗೋಂಕಾರಡ್ಡಿ ನಾಯಕನೆಂಬ ವಿಜಯನಗರದ ಅಧಿಕಾರಿ ಮುಳ್ಳೂರು–70 ಎಂಬ ಆಡಳಿತ ವಿಭಾಗದ ಆಳ್ವಿಕೆ ಮಾಡುತ್ತಿದ್ದನೆಂದೂ ಈ ದಾಖಲೆಯು ತಿಳಿಸುತ್ತದೆ. ಇದೇ ಬಸದಿಯ ಎದುರಿಗಿರುವ ಮಂಟಪದ ಬಳಿಯಿರುವ ಶಾಸನವು ಕ್ರಿ.ಶ. 1216ಕ್ಕೆ ಸೇರಿದ್ದು ಬಹುತೇಕ ಅಳಿಸಿಹೋಗಿದೆ. ಇದು ಕಾಟಕಾಚಾರ್ಯರೆಂದು ಜನಪ್ರಿಯರಾಗಿದ್ದ ವಿದ್ಯಾಧರ ಬುಚ್ಚಿದೇವರಸನ ಮರಣದ ಸ್ಮಾರಕ ಶಿಲೆ ಎಂದು ತಿಳಿಸುತ್ತದೆ. ಈಗ ಮುಳ್ಳೂರು ಬಸದಿಗಳ ಸಮುಚ್ಚಯವು ಕೇಂದ್ರ ಸರ್ಕಾರದ ಪ್ರಾಚ್ಯಸರ್ವೇಕ್ಷಣಾ ಇಲಾಖೆಯ ಸಂರಕ್ಷಣೆಗೆ ಒಳಪಟ್ಟು ಇಲ್ಲಿನ ಕಟ್ಟಡಗಳನ್ನು ಅಚ್ಚುಕಟ್ಟಾಗಿ ಶಿಸ್ತಿನಿಂದ ದುರಸ್ತಿ ಮಾಡಿದೆ. ಬಸದಿಗಳ ಮುಂಭಾಗದಲ್ಲಿ ವಿಶಾಲವಾದ ಬಯಲು ಪ್ರದೇಶವಿದ್ದು ಅಲ್ಲಿ ಸುಮಾರು ಇಪ್ಪತ್ತು ಶಾಸನಗಳು, ವೀರಗಲ್ಲುಗಳು ಹಾಗೂ ನಿಷಿಧಿಕಲ್ಲುಗಳನ್ನು ಸಾಲಾಗಿ ನಿಲ್ಲಿಸಿ ಸಂರಕ್ಷಿಸಲಾಗಿದೆ.

### ಮೋರೆಬೆಟ್ಟ

ಸೋಮವಾರಪೇಟೆಯಿಂದ ಸುಮಾರು ಆರು ಕಿ.ಮೀ. ದೂರದಲ್ಲಿರುವ ಮೋರೆಬೆಟ್ಟವು (ಸೋಮವಾರಪೇಟೆ ತಾಲೂಕು) ಆದಿಮಾನವನ ಪುರಾತನವಾದ ನಿವೇಶನವೆನ್ನಬಹುದು. ಇದಕ್ಕೆ ಹೋಗುವ ದಾರಿಯು ದೊಡ್ಡಮೊಳ್ತೆಗೆ ಒಂದು ಕಿ.ಮೀ. ಮೊದಲೇ ಇದೆ. ಮೋರೆಬೆಟ್ಟಕ್ಕೆ ಸ್ಥಳೀಯವಾಗಿ ಪಾಂಡವರ ಪಾರೆ ಎಂದೂ ಕರೆಯಲಾಗುತ್ತದೆ. ಬೆಟ್ಟದ ಪಾದದವರೆಗೆ ವಾಹನದಲ್ಲಿ ಹೋಗಬಹುದಾದ ವ್ಯವಸ್ಥಿತ ರಸ್ತೆಯಿದೆ. ಅನಂತರ ಸುಮಾರು ಮೂರು ಕಿ.ಮೀ. ಬೆಟ್ಟವನ್ನು ಹಾವಿನೋಪಾದಿಯಲ್ಲಿ ಹತ್ತುತ್ತಾ ಹೋದರೆ ಮೇಲ್ಭಾಗದಲ್ಲಿ ವಿಶಾಲವಾದ ಬಂಡೆಯ ಹರಿವಿನ ಪರಿಳಿತಗಳಲ್ಲಿ ಸುಮಾರು 20ಕ್ಕೂ ಮೀರಿದ ಬೃಹತ್ ಶಿಲಾಯುಗದ ಶಿಲಾಗೋರಿಗಳು ಕಂಡುಬರುತ್ತವೆ. ಈ ಶಿಲಾಗೋರಿಗಳನ್ನು ಫರ್ಗುಸನ್ ಎಂಬ ವಿದ್ವಾಂಸನು ಇಂಗ್ಲೆಂಡಿನಲ್ಲಿರುವ ಶಿಲಾಗೋರಿಗಳಿಗೆ ಹೋಲಿಸಿದ್ದಾನೆ.* ಇವುಗಳಲ್ಲಿ ಅನೇಕವು ಸಂಪತ್ತು ಕೊಳ್ಳೆ ಹೊಡೆಯುವವರ ಕೈಗೆ ಸಿಕ್ಕು ಅಗೆತಕ್ಕೆ ಒಳಗಾಗಿವೆ. ಅಗಲವಾದ ದೊಡ್ಡ ಚಪ್ಪಡಿ (ನಾಲ್ಕು) ಕಲ್ಲುಗಳನ್ನು ಗೋಡೆಯಂತೆ ನಿಲ್ಲಿಸಿ ಅದರ ಮೇಲ್ಭಾಗದಲ್ಲಿ ಬೃಹದಾಕಾರವಾದ ಟೋಪ್ಪಿಗೆ ಚಪ್ಪಡಿಯನ್ನು ಅದಕ್ಕೆ ಛಾವಣಿಯಂತೆ ಹೊದಿಸಲಾಗಿದೆ. ಮುಂಭಾಗದ ಗೋಡೆಯ ಚಪ್ಪಡಿಯ ಮೇಲ್ಭಾಗದಲ್ಲಿ ಅರ್ಧಚಂದ್ರಾಕಾರವಾದ ಕಿಂಡಿಯನ್ನು ಮಾಡಲಾಗಿದೆ. ಶಿಲಾಗೋರಿಗಳ ಸುತ್ತ ದೊಡ್ಡ ದೊಡ್ಡ ಗುಂಡುಕಲ್ಲುಗಳಿಂದ ನಿರ್ಮಿಸಲಾಗಿರುವ ಶಿಲಾವೃತ್ತಗಳೂ ಕಂಡುಬರುತ್ತವೆ. ಮೋರೆಬೆಟ್ಟದಲ್ಲಿರುವ ಒಂದು ಶಿಲಾಗೋರಿಯ ಸಮೀಪ ಸುಮಾರು ಎಂಟು ಅಡಿ ಎತ್ತರವಿರುವ ಚಪ್ಪಡಿಯು ಒಂದು ಪಕ್ಷಿ ಅಥವಾ ಕುದುರೆಯ ರೂಪದಲ್ಲಿ ಮಾದರಿಗೊಂಡಿದೆ. ಬಹುಶಃ ಇದು ಒಂದು ಅತ್ಯಂತ ಪ್ರಾಚೀನ ಪಕ್ಷಿ ಅಥವಾ ಕುದುರೆ ಎಂದು ಕೆ. ಕೆ. ಸುಬ್ಬಯ್ಯ ಅಭಿಪ್ರಾಯ ಪಡುತ್ತಾರೆ. ನೂರಾರು ಕಲ್ಲುಚಪ್ಪಡಿಗಳ ನಡುವೆ ಈ ವಿಶಿಷ್ಟ ರೂಪದ ಚಪ್ಪಡಿ ಇರುವುದು ಕುತೂಹಲಕಾರಿಯಾಗಿದೆ. ಕ್ಯಾಪ್ಟನ್ ಕೋಲ್ ಎಂಬುವ ಸಂಶೋಧಕನು ಮೋರೆಬೆಟ್ಟದ ಕೆಲವು ಶಿಲಾಗೋರಿಗಳನ್ನು ಉತ್ಖನನಮಾಡಿ ನೋಡಿರುವನು. ಶವದ ಜೊತೆಗೆ ಯಾವುದೋ ಕಾಲದಲ್ಲಿ ಹೂಳಲಾಗಿದ್ದ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಯ ಚೂರುಗಳು ಬೆಳಕಿಗೆ ಬಂದವು. ಕೆಲವು ಮಡಕೆಗಳಿಗೆ ಮೂರು ಹಾಗೂ ನಾಲ್ಕು ಕಾಲುಗಳಿರುವಂತೆಯೂ ಮಾಡಲಾಗಿರುವುದು ಇಲ್ಲಿ ವ್ಯಕ್ತವಾಗುತ್ತದೆ. ಇಷ್ಟೇ ಅಲ್ಲದೇ ಚಪ್ಪಡಿ ಆಕಾರದ ಅಗಲ ಬಾಯಿಯ ಪಾತ್ರೆಗಳು,ಬಟ್ಟಲುಗಳು, ಕುಂಡಗಳು, ಇನ್ನೂ ಮುಂತಾದ ಮಣ್ಣಿನ ಪಾತ್ರೆಗಳು ಹೇರಳವಾಗಿ ಕಂಡುಬಂದಿವೆ. ಇನ್ನೂ ಕೆಲವು ಶಿಲಾಗೋರಿಗಳಲ್ಲಿ ಅಲಂಕಾರದ ಮಣಿಗಳೂ ಕಂಡುಬಂದುವೆಂದು ಕೆ. ಕೆ. ಸುಬ್ಬಯ್ಯ ತಿಳಿಸುತ್ತಾರೆ (ಅಧ್ಯಾಯ 2 ನೋಡಿ). ಬಹುಶಃ ದೊಡ್ಡಮೊಳ್ತೆಯ ಪರಿಸರದಲ್ಲಿದ್ದ ಬೃಹತ್ ಶಿಲಾಯುಗದ ಮಾನವನು ಹೊನ್ನಮ್ಮನ ಕೆರೆಯನ್ನು ನೀರಾವರಿಗೆ ಬಳಸಿ ಕೃಷಿಕಾರ್ಯದಲ್ಲಿ ತೊಡಗಿದ್ದು ಬೆಟ್ಟದ ಮೇಲಿನ ಈ ತಾಣವನ್ನು ಗೋರಿಗಳ ನಿರ್ಮಾಣಕ್ಕೆ ಬಳಸಿರಬೇಕು. ಕೇಂದ್ರ ಪುರಾತತ್ವ ಇಲಾಖೆಯು ಈ ಗೋರಿಗಳ ರಕ್ಷಣೆಗೆ ಕ್ರಮ ಕೈಗೊಂಡಿದೆ.

* ಕೆ. ಕೆ. ಸುಬ್ಬಯ್ಯ, 'ಆರ್ಕಿಯಾಲಜಿ ಆಫ್ ಕೂರ್ಗ್', ಪುಟ 65.

ಯಡವನಾಡು

ಸೋಮವಾರಪೇಟೆ–ಕುಶಾಲನಗರದ ರಸ್ತೆಯಲ್ಲಿರುವ ಯಡವನಾಡು (ಸೋಮವಾರಪೇಟೆ ತಾಲೂಕು) ಕುಶಾಲನಗರದಿಂದ 13 ಕಿ. ಮೀ. ದೂರದಲ್ಲಿದೆ. ಊರಿನಲ್ಲಿ ಜೇನು ಕುರುಬರ ವಸತಿಯಿದ್ದು ಯಾವುದೇ ಮುಖ್ಯವಾದ ಸ್ಮಾರಕಗಳಿಲ್ಲ. ಆದರೆ, ಬಸ್‌ನಿಲ್ದಾಣದ ಬಳಿ ಮರದ ಕೆಳಗೆ ಕಟ್ಟೆಯ ಮೇಲೆ ಹುಂಡೂರಿನಿಂದ ತಂದಿದೆ ಎಂದಿರುವ ವಿಷ್ಣು ವಿಗ್ರಹ, ನಂದಿ ಮುಂತಾದವುಗಳ ಅವಶೇಷಗಳು ಕಂಡುಬರುತ್ತವೆ. ಊರಿನಲ್ಲಿ ಬಸವಣ್ಣ ಮತ್ತು ಆಂಜನೇಯ ಗುಡಿಗಳಿವೆ. ಯಡವನಾಡಿನಿಂದ ಸುಮಾರು ನಾಲ್ಕು ಕಿ. ಮೀ. ದೂರದಲ್ಲಿ ಹಾರಂಗಿಯ ದಂಡೆಯಲ್ಲಿ ಕಾಲ್ನಡಿಗೆಯಲ್ಲಿ ಕಾಡಿನ ಮಧ್ಯದಲ್ಲಿ ಹೋದರೆ ಚಂಗಾಳ್ವರ ಕಾಲದ ದೇವಾಲಯವು ಕೇವಲ ಬೇಸಿಗೆಯಲ್ಲಿ ಮಾತ್ರ ಕಾಣಸಿಗುತ್ತದೆ. ಉಳಿದಂತೆ ಈ ಪ್ರದೇಶದಲ್ಲಿ ನದಿಯ ನೀರು ಆವರಿಸಿರುತ್ತದೆ. ಗರ್ಭಗೃಹವು ಚೌರಸ್ರವಾಗಿದ್ದು ಅದರ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ ಮತ್ತು ಅದರ ಮೇಲೆ ಕಾಲು ಮಡಚಿ ಕುಳಿತು ಯೋನಿಯನ್ನು ಪ್ರದರ್ಶಿಸುತ್ತಿರುವ ಕಿರೀಟಧಾರಿ ಸ್ತ್ರೀಯ ವಿಗ್ರಹವಿರುವುದು ಕುತೂಹಲಕಾರಿಯಾಗಿದೆ. ದ್ವಾರದ ಪಕ್ಕದಲ್ಲಿ ಎರಡು ವಿಕೃತ ಮೈಥುನ ಶಿಲ್ಪಗಳು ಕಂಡುಬರುತ್ತವೆ. ಗರ್ಭಗೃಹದ ಒಳಗೆ ಯಾವುದೇ ಶಿಲಾಮೂರ್ತಿಗಳೂ ಕಂಡುಬರುವುದಿಲ್ಲ. ನವರಂಗದಲ್ಲಿ ಪೀಠದ ಭಾಗವು ಚೌರಸ್ರವಾಗಿದ್ದು ಮೇಲ್ಭಾಗದಲ್ಲಿ ಉರುಳೆಯಾಕಾರವಿರುವ ಕಂಬಗಳು ಕಂಡುಬರುತ್ತವೆ. ಇದರ ಛಾವಣಿಯು ಬಿದ್ದುಹೋಗಿದೆ. ಮುಖಮಂಟಪದ ಮಧ್ಯದಲ್ಲಿ ಹುಂಡೂರಿನಿಂದ ತಂದಿರಿಸಲಾಗಿರುವ ಬಸವಶಿಲಾಮೂರ್ತಿಯಿದೆ. ದೇವಾಲಯದ ಕಟ್ಟಡವನ್ನು ನುಣುಪುಗೊಳಿಸಿದ ಚೌಕಾಕಾರ ಕಲ್ಲುಗಳಿಂದ ನಿರ್ಮಿಸಲಾಗಿದೆ. ನವರಂಗವು ಯಾವುದೇ ಬಗೆಯ ಅಲಂಕಾರಗಳಿಲ್ಲದೇ ಬರಡಾಗಿದೆ. ಮಧ್ಯಾಹ್ನದ ವೇಳೆ ಬೇಸಿಗೆಯಲ್ಲಿ ಆನೆಗಳು ನೀರಿಗಾಗಿ ಹಿಂಡುಹಿಂಡಾಗಿ ಇಲ್ಲಿಗೆ ಬರುತ್ತವೆಂದು ಸ್ಥಳೀಕರು ಹೇಳುತ್ತಾರೆ; ನದಿಯ ಆಚೆಗಿನ ದಡದಲ್ಲಿರುವ ಹೆರೂರಿನಲ್ಲಿ ನವೀಕರಿಸಲಾಗಿರುವ ಹಂಚಿನ ಛಾವಣಿಯ ಬಸವಣ್ಣನ ಗುಡಿಯಿದೆ. ಹೆರೂರಿನ ಖಾಸಗಿ ಜಮೀನಿನಲ್ಲಿ ಬಿದ್ದಿರುವ ವೀರಗಲ್ಲು ಶಾಸನವು ಕ್ರಿ. ಶ. 13ನೇಯ ಶತಮಾನದ ಲಕ್ಷಣದಲ್ಲಿದ್ದು ಅಕ್ಷರಗಳು ಶಿಥಿಲಗೊಂಡಿವೆ. ಇದರಲ್ಲಿ ಚೆಂಗಾಳ್ವರ ಆಳ್ವಿಕೆಯಲ್ಲಿದ್ದ ಮುನಿವರಾದಿತ್ಯನೆಂಬ ಅಧಿಕಾರಿಯ ಹೆಸರನ್ನು ಮಾತ್ರ ಗುರುತಿಸಬಹುದಾಗಿದೆ. ಉಳಿದ ವಿವರಗಳು ಅಳಿಸಿಹೋಗಿವೆ.

ಯಡೂರು

ಸೋಮವಾರಪೇಟೆಯಿಂದ ಐದು ಕಿ.ಮೀ. ದೂರದಲ್ಲಿರುವ ಯಡೂರಿನ (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 750) ಕೆರೆಯಿಂದ ರಸ್ತೆ ಬದಿಯಲ್ಲಿ ಎಡಗಡೆ 15 ಕೊಲೆಗಲ್ಲುಗಳು ಕಂಡುಬರುತ್ತವೆ. ಮದುವೆಯಾದ ಸಂದರ್ಭದಲ್ಲಿ ಇಲ್ಲಿರುವ ಕಲ್ಲುಗಳಿಗೆ ಆಯಾ ಕುಟುಂಬದವರಿಗೆ ಸಂಬಂಧವಿದ್ದವರು ಮಾತ್ರ ಎಡೆ ಇಡುತ್ತಾರೆ. ಆದ ಕಾರಣ ಈ ಸ್ಥಳಕ್ಕೆ 'ಎಡೆ + ಊರು' ಅಥವಾ ಯಡೂರು ಎಂದು ಹೆಸರು ರೂಢಿಗೆ ಬಂದಿದೆ ಎಂದು ಎಂ. ಜಿ. ನಾಗರಾಜ್ ಅಭಿಪ್ರಾಯಪಡುತ್ತಾರೆ.[1] ಇತ್ತೀಚಿಗೆ 1990ರಲ್ಲಿ ಅದಕ್ಕೂ ನಾಲ್ಕು ಐದು ವರ್ಷಗಳ ಹಿಂದೆ ಸತ್ತ ಒಬ್ಬರಿಗೆ ಕೊಲೆಕಲ್ಲನ್ನು ಹಾಕಿಸಿರುವುದು ವ್ಯಕ್ತವಾಗುತ್ತದೆ. ಸತ್ತಿರುವ ವ್ಯಕ್ತಿಗೆ ಮದುವೆ ಆಗಿರದಿದ್ದರೆ, ಇಲ್ಲವೇ ಮದುವೆ ಆಗಿ ಮಕ್ಕಳಾಗದೇ ಸಾವನ್ನಪ್ಪಿದರೆ, ಕೊಲೆಗಲ್ಲುಗಳನ್ನು ಹಾಕುವ ಪದ್ಧತಿಯು ಜಾರಿಯಲ್ಲಿದೆ. ಒಂದೇ ನಿವೇಶನದಲ್ಲಿ ಹಸೆಗೋಡಿನ ಕಲ್ಲರಾಟರ ಗುಂಪಿನವರ 20ಕ್ಕೂ ಮಿರಿದ ಕೊಲೆಗಲ್ಲುಗಳಿವೆ. ಬಹುತೇಕವಾಗಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ತುಳುಭಾಷೆಯಲ್ಲಿ ಉಪಯೋಗವಾಗುವ 'ಕುಲೆ' (ಪ್ರೇತ) ಶಬ್ದವನ್ನು ಇದನ್ನು ಅರ್ಥೈಸಲು ಬಳಸಬಹುದೆಂದೂ ಅಭಿಪ್ರಾಯವಿದೆ. ಈ ಕೊಲೆಗಲ್ಲುಗಳ ನಿವೇಶನದ ಸಮೀಪವೇ ಮಾರಿಯಮ್ಮನ ಗುಡಿಯಿದೆ. ಯಡೂರಿನಲ್ಲಿರುವ ಸುಗ್ಗಿಕಟ್ಟೆಯು ಮೊದಲಿಗೆ ಹಾಳೂರು ಮಕ್ಕಿ (ಜಾನಪದದಲ್ಲಿ 'ಹಾಳಾರ್‌ಮಕ್ಕಿ' ಎಂದಿರುವ) ಎಂಬ ಹಳೆಯೂರಿನ ನೆಲೆಯಲ್ಲಿತ್ತು.[2] ಎತ್ತರವಾದ ಕಂಬಗಳ ಉಯ್ಯಾಲೆಯ ಎದುರಿಗೆ ಮೂರು ಶಾಸನಗಳಿವೆ. ಇದರಲ್ಲಿ ಪ್ರಕಟವಾಗಿರುವ ಒಂದು ಶಾಸನವು 1095ಕ್ಕೆ ಸೇರಿದ್ದು ಮಂಜರಾಬಾದಿನಲ್ಲಿದ್ದ ಕದಂಬ (ಬಾಣ ?) ವಂಶಕ್ಕೆ ಸೇರಿದ್ದು ರಾಜದುದ್ದರಸನಿಗೆ ಸಂಬಂಧಪಟ್ಟಿದೆ. ಇದು ಒಂದು ವೀರ ಶಾಸನವಾಗಿದ್ದು ದುದ್ದರಸನ ಸ್ಮರಣೆಗೆ ಅವನ ತಮ್ಮ ಜುಂಜರಸನು ಹಾಕಿಸಿದನೆಂದು ತಿಳಿದುಬರುತ್ತವೆ. ಮಹಾಮಂಡಲೇಶ್ವರ, ತ್ರಿಪುರಾದ ಅಧಿಪತಿ, ಬಲೀಂದ್ರ ಕುಲಪುತ್ರ ಮುಂತಾದ ಬಿರುದುಗಳನ್ನು ಹೊಂದಿದ್ದ ದುದ್ದರಸನು ಪಿಟ್ಟೆಯರಸ ಮತ್ತು ಜುಂಜಲದೇವಿಯರ ಮಗನೆಂದು ಈ

1. ಎಂ. ಜಿ. ನಾಗರಾಜ್, ಕೊಡಗಿನ ಸುಗ್ಗಿಕಟ್ಟೆಗಳು.
2. ಅದೇ.

ದಾಖಲೆಯು ತಿಳಿಸುತ್ತದೆ. ಈ ಶಾಸನವನ್ನು ಸಂಧಿವಿಗ್ರಹಿ ಮೊಳತೆಯ ದುದ್ದಮಲ್ಲನ ನಿರ್ದೇಶನದಂತೆ ರಾಜೀವಯ್ಯನ ಮಗನಾಗಿದ್ದ ಬೊಮ್ಮದೇವನು ಬರೆದನೆಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಹೆಸರಿಸಲಾಗಿರುವ ಮೊಳತೆಯು ದೊಡ್ಡ ಮೊಳತೆ (ಸೋಮವಾರಪೇಟೆ ತಾಲೂಕು) ಇರಬೇಕೆಂದು ಭಾವಿಸಬಹುದಾಗಿದೆ. ಸುಗ್ಗಿದೇವರಗುಡಿಯ ಉಯ್ಯಾಲೆ ಕಂಬಗಳ ಮೇಲೆ ಆನೆ, ಭಕ್ತ, ಖಡ್ಗ ಹಿಡಿದ ವೀರ ಮುಂತಾದವುಗಳನ್ನು ಪ್ರತಿನಿಧಿಸುವ ಉಬ್ಬುಶಿಲ್ಪಗಳಿವೆ. ಸುಗ್ಗಿದೇವರ ಗುಡಿಯಲ್ಲಿ ವರ್ಷದ ಆರಂಭದಲ್ಲಿ ಅಶ್ವಿನಿಮಳೆ ಹುಟ್ಟಿದ ಮೇಲೆ ಮತ್ತು ಭರಣಿ ಮಳೆ ಆಗುವ ಸಂದರ್ಭದಲ್ಲಿ ಸುಮಾರು ಹನ್ನೆರಡು ದಿನಗಳು ಜರುಗುವ ಸುಗ್ಗಿದೇವರ ಹಬ್ಬಕ್ಕೆ ಅಣಿಯಾಗುತ್ತಾರೆ. ಇಲ್ಲಿಯ ಸುಗ್ಗಿಹಬ್ಬದ ಜಾನಪದ ಚಟುವಟಿಕೆಗಳು ಕೊಡಗಿನ ಒಂದು ಮುಖ್ಯವಾದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಪ್ರತಿನಿಧಿಸುತ್ತದೆ. ಸುಗ್ಗಿದೇವರ ಗುಡಿಯ ಸಮೀಪವೇ ಬಸವೇಶ್ವರ, ಈಶ್ವರ ಹಾಗೂ ಬೀರೇದೇವರ ಗುಡಿಗಳಿವೆ. ಸುಗ್ಗಿ ಜಾತ್ರೆಯಲ್ಲಿ ಬಸವಣ್ಣನ ಉತ್ಸವವೂ ಜರುಗುತ್ತದೆ ಮತ್ತು ಅದೇ ಸಮಯಕ್ಕೆ ಕೆಂಡದ ಹೊಂಡವನ್ನು ಹಾಯುವ ಹಾಗೂ ಇತರ ಧಾರ್ಮಿಕ ಕ್ರಿಯೆಗಳು ಸಾಮಾನ್ಯವಾಗಿ ಎರಡು ವರ್ಷಗಳಿಗೊಮ್ಮೆ ಜರುಗುತ್ತವೆ. ಬೀರೆದೇವರ (ಭೈರವ) ಜಾತ್ರೆಯು ಸಂಕ್ರಾಂತಿಯ ಸಮಯದಲ್ಲಿ ಜರುಗುತ್ತದೆ.

### ವೀರರಾಜಪೇಟೆ

ಇದು ಮಡಿಕೇರಿಯಿಂದ 32 ಕಿ.ಮೀ. ದೂರದಲ್ಲಿರುವ ಪ್ರಮುಖ ಪಟ್ಟಣ ಹಾಗೂ ತಾಲೂಕು ಕೇಂದ್ರವಾಗಿದೆ (ಜನಸಂಖ್ಯೆ : 13,136). ವೀರರಾಜಪೇಟೆಯಿಂದ ಮಡಿಕೇರಿಗೆ ಎರಡು ಮಾರ್ಗಗಳಿಂದ ತಲುಪಬಹುದಾದ ಟಾರ್ ರಸ್ತೆಯ ಸೌಲಭ್ಯವಿದೆ. ಈ ನಗರವನ್ನು ದೊಡ್ಡವೀರರಾಜೇಂದ್ರನು ಕ್ರಿ.ಶ. 1791ರಲ್ಲಿ ಆತನ ಹಾಗೂ ಮುಂಬೈಯ ಗವರ್ನರ್ ಆಗಿದ್ದ ರಾಬರ್ಟ್ ಅಬರ್‌ಕ್ರಾಂಬಿಯ ನಡುವೆ ಮಗ್ಗುಲ ಗ್ರಾಮದ ಬಳಿಯ ಈ ಸ್ಥಳದಲ್ಲಿ ನಡೆದ ಭೇಟಿ ಹಾಗೂ ಮಾತುಕತೆಗಳ ಸ್ಮರಣಾರ್ಥವಾಗಿ 1792ರಲ್ಲಿ ಸ್ಥಾಪಿಸಿದನೆಂದು ತಿಳಿದುಬರುತ್ತದೆ (ಪುಟ 93 ನೋಡಿ). ಈ ಕಾರಣದಿಂದಲೇ ಮೊದಲು ವೀರರಾಜೇಂದ್ರಪೇಟೆ ಎಂದು ಕರೆಯಲಾಗುತ್ತಿದ್ದು ಅನಂತರ 'ವೀರರಾಜಪೇಟೆ' ಎಂದು ಮೊಟಕಾಯಿತು ಎಂದು ಹೇಳಬಹುದು. ಟಿಪ್ಪುಸುಲ್ತಾನನು ಬಲಾತ್ಕಾರದಿಂದ ಕರಾವಳಿಯಿಂದ ಅಧಿಕ ಸಂಖ್ಯೆಯಲ್ಲಿ ಕ್ರೈಸ್ತರನ್ನು ಶ್ರೀರಂಗಣಪಟ್ಟಣಕ್ಕೆ ತಂದಿರಲು, ಆತನ ಹತೋಟಿಯಿಂದ ತಪ್ಪಿಸಿಕೊಂಡು ಬಂದ ಕೊಂಕಣಿ ರೋಮನ್ ಕ್ಯಾಥೋಲಿಕ್ ಪಂಥದ ಕ್ರೈಸ್ತರು 1792ರಲ್ಲಿ ವೀರರಾಜಪೇಟೆಯಲ್ಲಿ ಕೊಡಗಿನ ರಾಜನ ಆಶ್ರಯದಿಂದ ಬಂದು ನೆಲಸಿದರೆಂದು ಪ್ರತೀತಿಯಿದೆ.* ತೆಲುಗರ ಬೀದಿ (ಚೆಟ್ಟಿಗಳು), ಬಂಗಾಳಿ ಬೀದಿ (ಬಂಗಾಳಿ ಮುಸಲ್ಮಾನರ ವಸತಿ) ಮುಂತಾದ ಸ್ಥಳಗಳಲ್ಲಿ ಬೇರೆ ಊರಿನ ಕಸಬುದಾರರನ್ನೂ ವ್ಯಾಪಾರಿಗಳನ್ನೂ ತಂದು ನೆಲೆ ನಿಲ್ಲಿಸುವ ಏರ್ಪಾಡು ಮಾಡಿದನು. ಪಿರಿಯಾಪಟ್ಟಣದಿಂದ ಲಿಂಗಾಯತ ವ್ಯಾಪಾರಿಗಳೂ ಬಂದರು. ವೀರರಾಜಪೇಟೆಯು ಆಗಿನಿಂದಲೂ ಪಶ್ಚಿಮ ಕರಾವಳಿಗೆ ಕಾಫಿ, ಅಕ್ಕಿ, ಏಲಕ್ಕಿ ಮತ್ತು ಮೆಣಸನ್ನು ವ್ಯಾಪಾರಕ್ಕಾಗಿ ರವಾನಿಸುವ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಈ ನಗರದಿಂದ ಕೇರಳದ ಕರಾವಳಿ ನಗರಗಳಾದ ಕಣ್ಣಾನೂರು ಮತ್ತು ತಲ್ಲೇರಿಗಳಿಗೆ ಈಗಲೂ ಉತ್ತಮವಾದ ರಸ್ತೆ ಇದೆ. ಮಲೆತಂಬೀರನ್ ಅಥವಾ ಈಶ್ವರ ಬೆಟ್ಟವೆಂದು ಸ್ಥಳೀಯವಾಗಿ ಕರೆಯಲ್ಪಡುವ ಬೆಟ್ಟದ ತಪ್ಪಲಲ್ಲಿ ಈ ನಗರವನ್ನು ನಿಯೋಜಿಸಲಾಗಿದೆ. ಬಹುಶಃ ಈ ನಗರದಲ್ಲಿ ಕಂಡುಬರುವ ಕೆಲವೇ ದೇವಾಲಯಗಳಲ್ಲಿ ಮುಖ್ಯವಾದುದೆಂದರೆ, ಬೆಟ್ಟದ ಮೇಲ್ಭಾಗದಲ್ಲಿರುವ ಈಶ್ವರ ದೇವಾಲಯ ಹಾಗೂ ಬೆಟ್ಟದ ಮಧ್ಯದಲ್ಲಿ ಸಿಗುವ ಅಯ್ಯಪ್ಪ ದೇವಾಲಯ. ಬೆಟ್ಟವನ್ನು ತಲುಪಬೇಕಾದರೆ ರಸ್ತೆಯ ಮೂಲಕ ಸ್ವಲ್ಪದೂರ ಹೋಗಬಹುದು ಹಾಗೂ ಅಲ್ಲಿಂದ ಮುಂದೆ ಕಾಲ್ನಡಿಗೆಯಲ್ಲಿ ಹೋದರೆ ಎತ್ತರವಾದ ಗೋಡೆಗಳಿಂದ ಆವೃತವಾಗಿರುವ ಹಾಗೂ ವಿಶಾಲವಾದ ಒಳಪ್ರಾಕಾರವನ್ನು ಹೊಂದಿರುವ ಚೌರಸವಾದ ಯೋಜಿತ ವಿನ್ಯಾಸದ ಕೊಡಗಿನ ರಾಜನ ಕಾಲದ ದೇವಾಲಯ ಕಂಡುಬರುತ್ತದೆ. ಗುಡ್ಡದ ಮೇಲ್ಭಾಗದಿಂದ ನಿಸರ್ಗವನ್ನು ವೀಕ್ಷಿಸಿದರೆ ವೀರರಾಜಪೇಟೆಯ ನಗರದ ವಿಹಂಗಮ ನೋಟವನ್ನು ಕಾಣಬಹುದಾಗಿದೆ. ಕೆಳಗೆ, ನಗರದಲ್ಲಿರುವ ಇತರೆ ದೇವಾಲಯಗಳೆಂದರೆ, ರಾಜರ ಕಾಲದ್ದೆಂದು ಹೇಳಲಾಗುವ ಬಸವಣ್ಣನ ಗುಡಿ, ಕ್ಲಾಕ್‌ಟವರ್ ಬಳಿ ಇರುವ ಪ್ರಾಚೀನ ಗಣಪತಿ ಗುಡಿ, ಚೌಡೇಶ್ವರಿ ಗುಡಿ, ಸರ್ಕಾರಿ ಬಸ್ ನಿಲ್ದಾಣದ ಬಳಿಯಿರುವ ಇನ್ನೂ ನಿರ್ಮಿಸುತ್ತಿರುವ ಮಾರಮ್ಮನ ದೇವಾಲಯ ಮುಂತಾದವು ಕಂಡು ಬರುತ್ತವೆ. ಬೆಟ್ಟದಿಂದ ಇಳಿದು ಬರುವಾಗ ಸುತ್ತುತ್ತಾ ಬರುವ ರಸ್ತೆಯಲ್ಲಿ ಹೇರ್‌ಪಿನ್ ತಿರುವಿನಲ್ಲಿ ನಿಂತು ನೋಡಿದರೆ

---

* ಡಿ. ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಪುಟ 244–245.

ಸೂರ್ಯಾಸ್ತದ ದೃಶ್ಯವು ಹೃನ್ಮನಗಳಿಗೆ ಆಹ್ಲಾದಕರವಾಗಿರುತ್ತದೆ.

ವೀರರಾಜಪೇಟೆಯಲ್ಲಿ ದೊಡ್ಡವೀರರಾಜೇಂದ್ರನು 1792ರಲ್ಲಿ ಅರಮನೆ ಮತ್ತು ಅದರ ಸುತ್ತಲೂ ಕೋಟೆಯನ್ನು ಕಟ್ಟುವುದಕ್ಕೆ ಆದೇಶಿಸಿದನೆಂದು ತಿಳಿದುಬರುತ್ತದೆ. ವೀರರಾಜೇಂದ್ರನು ಅರಮನೆ ಕಟ್ಟಿಸಿದ ಸ್ಥಳವು ಈಗ ಪ್ರವಾಸಿ ಮಂದಿರ ಇರುವ ಆವರಣವೇ ಆಗಿತ್ತು. ಪ್ರವಾಸಿಮಂದಿರದ ಹಿಂಭಾಗದಲ್ಲಿ ಇರುವ ಸ್ವಲ್ಪ ಎತ್ತರವಾದ ಸಮತಟ್ಟಾದ ಸ್ಥಳದಲ್ಲಿ ಅರಮನೆಯಿತ್ತೆಂದು ತೋರುತ್ತದೆ. ರಾಜನು ಈ ಅರಮನೆಯ ಮುಂಭಾಗದಲ್ಲಿ ಒಂದು ಚಿಕ್ಕ ಹೆಬ್ಬಾಗಿಲನ್ನೂ ಸುತ್ತಲೂ ಇಟ್ಟಿಗೆಯಿಂದ ಕೋಟೆಯ ಗೋಡೆಗಳನ್ನೂ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ಅರಮನೆಯ ಮುಂಭಾಗದ ಹೆಬ್ಬಾಗಿಲು ಇಂದಿಗೂ ಇದೆ. ಕೋಟೆಯ ಗೋಡೆಗಳ ಅವಶೇಷಗಳು ಅಲ್ಲಲ್ಲಿ ಕಾಣಸಿಗುತ್ತವೆ. ಕೆಲವು ವರ್ಷಗಳ ಹಿಂದೆ ಅರಮನೆಯ ಹಿಂಭಾಗದಲ್ಲಿ ಕೋವಿ ಮತ್ತು ಫಿರಂಗಿಗಳಿಗೆ ತುಂಬಿಸುವ ಮದ್ದನ್ನಿಡುವ ಒಂದು ಭದ್ರವಾದ ಸಣ್ಣ ಕಟ್ಟಡವು ಇತ್ತೆಂದು ಡಿ. ಎನ್. ಕೃಷ್ಣಯ್ಯನವರು ತಿಳಿಸುತ್ತಾರೆ.* ಈ ಅರಮನೆಯ ಗುಡ್ಡದ ಎಡಭಾಗದ ತಗ್ಗಿನಲ್ಲಿ ಎಂದರೆ, ಮೂರ್ನಾಡು–ಮಡಿಕೇರಿ ರಸ್ತೆಯ ಬಲಭಾಗದ ಹಳ್ಳದಲ್ಲಿ ಅರಮನೆಗೆ ಸರಿಯಾಗಿ ಕೆಳಗೆ ವೀರರಾಜೇಂದ್ರನು ಚಿಕ್ಕ ಕೊಳವನ್ನೂ ಒಂದು ಬಾವಿಯನ್ನೂ ತೋಡಿಸಿ ಅವುಗಳನ್ನು ಕೆತ್ತಿದ ಕಲ್ಲುಗಳಿಂದ ಸುತ್ತು ಕಟ್ಟಿಸಿದನು.

ವೀರರಾಜಪೇಟೆಯಲ್ಲಿರುವ ಸಾರ್ವಜನಿಕ ಕಟ್ಟಡಗಳಲ್ಲಿ ಪ್ರಮುಖವಾದುದೆಂದರೆ ಪ್ರಾಚೀನವಾದ ಸೈಂಟ್ ಆ್ಯನಿಸ್ ಚರ್ಚ್. ರೋಮನ್ ಕ್ಯಾಥಲಿಕ್ ಪಂಥದ ಈ ಚರ್ಚಿನ ಕಟ್ಟಡವು ಯೂರೋಪಿನ ಗಾಥಿಕ್ ವಾಸ್ತುಶಿಲ್ಪ ಶೈಲಿಯಲ್ಲಿ ಸುಮಾರು ಕ್ರಿ.ಶ. 19ನೇಯ ಶತಮಾನದ ಕೊನೆಯ ಭಾಗದಲ್ಲಿ ನವೀಕರಣಗೊಂಡಿತೆಂದು ತಿಳಿದು ಬರುತ್ತದೆ. ಅಂದರೆ ಮೂಲ ಕಟ್ಟಡವನ್ನು ಇದಕ್ಕೂ ಮೊದಲೇ ನಿರ್ಮಿಸಿರಬೇಕು. ಇದು 1792ರ ಸುಮಾರಿಗೇ ಇತ್ತೆಂದು ಒಂದು ಅಭಿಪ್ರಾಯ. ಜಾನ್‌ಡಿಕೋಸ್ಟ (ಜುವಾಂವು ಕೋಸ್ತ) ಎಂಬ ಪಾದ್ರಿಯನ್ನು ಕರೆಸಿ ಆತನಿಗೆ ದೊಡ್ಡವೀರರಾಜೇಂದ್ರನು ದಾನಗಳನ್ನು ನೀಡಿದ ಒಂದು ನಿರೂಪವಿದೆ. ಗಾಥಿಕ್ ಶೈಲಿಯ ಈ ಚರ್ಚ್‌ನ್ನು ಗುಲಿಯನ್ ಎಂಬ ಪಾದ್ರಿಯು ದುರಸ್ತಿ ಮಾಡಿಸಿ ಕಟ್ಟಿಸಿದನೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ಈ ಪಾದ್ರಿಯು ಒಳ್ಳೆಯ ಕಲಾವಿದನಾಗಿದ್ದುದರಿಂದ ಆತನೇ ಬರೆದಿರುವ ಆಕರ್ಷಕ ಚಿತ್ರಗಳು ಹಾಗೂ ಕೆತ್ತಿದ ವಿಗ್ರಹಗಳೂ ಈ ಚರ್ಚಿನಲ್ಲಿ ಕಂಡು ಬರುತ್ತವೆ. ಆರಂಭದಲ್ಲಿ ದೊಡ್ಡವೀರರಾಜೇಂದ್ರನು ಈ ಚರ್ಚಿಗೆ ಕೊಡುಗೆಯಾಗಿ ನೀಡಿರುವ ಎರಡು ಕಂಚಿನ ದೊಡ್ಡ ದೀಪಗಳು ಇಂದಿಗೂ ಇಲ್ಲಿ ಇವೆ. ಏಸುವಿನ ಮೂರ್ತಿಗೆ ಒಂದು ಚಿನ್ನದ ಕಿರೀಟವನ್ನೂ ನೀಡಿದ್ದನು. 1817ರಲ್ಲಿ ಪವಿತ್ರ ಸ್ನಾನ (ಬ್ಯಾಪ್ಟಿಸಂ) ಮಾಡಿಸಿರುವ ಬಗೆಗೆ ಇಲ್ಲಿಯ ದಾಖಲಾತಿ ಪುಸ್ತಕದಿಂದ ವ್ಯಕ್ತವಾಗುತ್ತದೆ. ಇದಕ್ಕೆ ಎತ್ತರವಾದ ಅಲಂಕಾರಿಕ ಕಮಾನುಗಳ ಕೋನಾಕಾರದ ಮೇಲ್ಭಾಗವನ್ನು ಹೊಂದಿರುವ ಚೌರಸ್ರವಾದ ಗೋಪುರವಿದೆ. ಈಗಿರುವ ಚರ್ಚು ತದನಂತರ ದುರಸ್ತಿಯಾದ ಕಟ್ಟಡವಾಗಿದೆ. ಇದರ ತುದಿಯಲ್ಲಿ ಬೃಹದಾಕಾರವಾದ ಕಂಚಿನ ಘಂಟೆಯನ್ನು ತೂಗು ಹಾಕಲಾಗಿದೆ; ಮತ್ತು ಇದನ್ನು 15ನೇಯ ಜನವರಿ 1893ರಲ್ಲಿ ನಿಧನರಾದ ಸಾಲ್ವಡೋರ್ ಪಿಂಟೋ ಎಂಬವರ ಜ್ಞಾಪಕಾರ್ಥವಾಗಿ ಹಾಕಿಸಲಾಯಿತೆಂದು ಅದರ ಮೇಲಿರುವ ಶಾಸನದಿಂದ ತಿಳಿದು ಬರುತ್ತದೆ. ಚರ್ಚಿನ ಒಳಭಾಗದಲ್ಲಿ ವಿಶಾಲವಾದ ಪ್ರಾರ್ಥನಾ ಮಂದಿರವಿದೆ. ಗೋಡೆಗಳಲ್ಲಿ ಪ್ರತ್ಯೇಕ ಉಬ್ಬು ಕೋಷ್ಟಗಳಲ್ಲಿ (ಹನ್ನೆರಡು) ಏಸುಕ್ರಿಸ್ತನ ಜೀವನದ ಘಟನೆಗಳ (ಸ್ಟೇಷನ್ಸ್)ಚಿತ್ರಗಳನ್ನು ಉತ್ತಮವಾಗಿ ನಿರ್ಮಿಸಲಾಗಿವೆ. ಪ್ರತೀ ವರ್ಷ ಫೆಬ್ರವರಿ 11ನೇಯ ದಿನಾಂಕದಂದು ದೇವತೆಯ ಉತ್ಸವ(ಫೀಸ್ಟ್)ವನ್ನು ವಿಜೃಂಭಣೆಯಿಂದ ನೆರವೇರಿಸಲಾಗುತ್ತದೆ. ಆ ಸಂದರ್ಭದಲ್ಲಿ ಜಾತಿ, ಮತ ಬೇಧವಿಲ್ಲದೇ ಎಲ್ಲಾ ನಾಗರಿಕರೂ ಕೈಗಳಲ್ಲಿ ಮೊಂಬತ್ತಿಯನ್ನು ಹಿಡಿದು 'ಕ್ಯಾಂಡಲ್ ಫೀಸ್ಟ್'ನಲ್ಲಿ ಭಾಗವಹಿಸುವುದು ಒಂದು ವಿಶೇಷ ಪದ್ಧತಿಯಾಗಿದೆ. ಈ ಚರ್ಚಿನ ಆಶ್ರಯದಲ್ಲಿ ಹಲವಾರು ಶಿಕ್ಷಣ ಸಂಸ್ಥೆ ಹಾಗೂ ಅನಾಥಾಶ್ರಮಗಳು ವೀರರಾಜಪೇಟೆಯಲ್ಲಿ ಹಾಗೂ ಇತರೆ ಸ್ಥಳಗಳಲ್ಲಿ ನಡೆಯುತ್ತಿವೆ. ವೀರರಾಜಪೇಟೆ ನಗರದ ಮಧ್ಯದಲ್ಲಿರುವ ಗಡಿಯಾರದ ಗೋಪುರವು ಈ ಸ್ಥಳದ ಮತ್ತೊಂದು ಮುಖ್ಯ ಆಕರ್ಷಣೆಯಾಗಿದೆ. ಈ ಗಡಿಯಾರದ ಗೋಪುರವು ಬ್ರಿಟನ್ನಿನ ಚಕ್ರವರ್ತಿ ಐದನೇಯ ಜಾರ್ಜ್‌ನ ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ 1911ರಲ್ಲಿ ನಿರ್ಮಿಸಲಾಯಿತು. ಇದರ ನಿರ್ಮಾಣದಲ್ಲಿ ಪ್ರಸಿದ್ಧ ಕಾಫಿ ಪ್ಲಾಂಟರ್ ಮತ್ತು ಕೊಡಗಿನ ಸಹಕಾರ ಚಳವಳಿಯ ಮುಂದಾಳು ಎಂದು

* ಡಿ. ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಪುಟ 244–245.

ಜನಪ್ರಿಯರಾಗಿದ್ದ ರಾವ್‌ಸಾಹೇಬ್ ಮುಕ್ಕಾಟಿರ ಅಯ್ಯಪ್ಪ ಪ್ರಮುಖ ಪಾತ್ರ ವಹಿಸಿದ್ದರು. ವೀರರಾಜಪೇಟೆಯ ನಗರಾಡಳಿತವನ್ನು 1870ರಲ್ಲಿ ರಚನೆಗೊಂಡ ಪುರಸಭೆಯು ನಡೆಸುತ್ತದೆ. ಇಲ್ಲಿರುವ ಪುರಭವನವನ್ನು 1935ರಲ್ಲಿ ನಗರ ಸಭೆಯು ನಿರ್ಮಿಸಿತೆಂದು ತಿಳಿದು ಬರುತ್ತದೆ. ಶ್ರೀ ಕಾವೇರಿ ಆಶ್ರಮ ಎಂಬ ಸಂಸ್ಥೆಯು ಈ ಊರಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಇಲ್ಲಿನ ಸಾರ್ವಜನಿಕ ಗಣೇಶ ಉತ್ಸವವು ಸಾವಿರಾರು ಜನರನ್ನು ಆಕರ್ಷಿಸುತ್ತದೆ.

ವೀರರಾಜಪೇಟೆಯಲ್ಲಿರುವ ಮುಸಲ್ಮಾನರ ವಾಸ್ತುಶಿಲ್ಪ ಕಟ್ಟಡಗಳು ಬಹಳ ಆಕರ್ಷಕವಾಗಿವೆ. ಈ ಊರಲ್ಲಿರುವ ಮಸೀದಿಗಳೆಂದರೆ, ಬಿಸ್ಮಿಲ್ಲಾ ಷಾವಲಿ ಮಕಾನ್, ಷಾಡ್‌ಲಿ ಷಾಫಿ ಜುಮ್ಮಾ ಮಸೀದಿ, ಖಾಜಿ ಮೊಹಲ್ಲಾದ ಜಾಮಿಯಾ ಮಸೀದಿ, ಬಂಗಾಳಿ ಮೊಹಲ್ಲಾದ ಮಸ್ಜಿದ್–ಎ–ಆಜಂ (1800ರಲ್ಲಿ ನಿರ್ಮಿತ) ಮತ್ತು ಅಯ್ಯಪ್ಪಸ್ವಾಮಿ ರಸ್ತೆಯಲ್ಲಿರುವ ಹನಫಿಗಳ ಜಾಮಿಯಾ ಮಸೀದಿ ಮುಂತಾದವುಗಳು. ಮಾರುಕಟ್ಟೆಯ ಬಳಿ ಇರುವ ಬಿಸ್ಮಿಲ್ಲಾ ಷಾವಲಿ ಮಕಾನ್ ಇದನ್ನು ಸುಮಾರು 200 ವರ್ಷಗಳ ಹಿಂದೆ ನಿರ್ಮಿಸಲಾಯಿತೆಂದು ಪ್ರತೀತಿಯಿದೆ. ವಿಶಾಲವಾದ ಆವರಣವನ್ನು ಹೊಂದಿರುವ ಈ ಮಸೀದಿಯು ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ಎತ್ತರವಾದ ಮಿನಾರ್‌ಗಳು, ಅರ್ಧಗೋಳಾಕಾರವಾಗ ಗುಮ್ಮಟವಿರುವ ಆಕರ್ಷಕ ವಾಸ್ತುವಿನ್ಯಾಸವನ್ನು ಹೊಂದಿದೆ. ಇದರಲ್ಲಿ ನುಣುಪಾದ ಗಾರೆಯ ಅಲಂಕಾರವಿರುವ ಕಿಟಕಿ–ಬಾಗಿಲುಗಳ ಕಮಾನುಗಳು ಸುಂದರವಾಗಿ ಮೂಡಿಬಂದಿವೆ. ಮಸೀದಿಯ ಪಕ್ಕದಲ್ಲಿ ಬಿಸ್ಮಿಲ್ಲಾ ಷಾವಲಿ ಮಕಾನ್ ಎಂಬ ದರ್ಗಾ ಇದೆ. ಇಲ್ಲಿ ವಾರ್ಷಿಕವಾಗಿ ರಜ್ಜಬ್ ತಿಂಗಳಿನಲ್ಲಿ ಉರುಸ್ ನಡೆಯುತ್ತದೆ. ಇದಲ್ಲದೇ ಊರಿನ ಒಳಗೆ ಅಕಟ್‌ಷಾ ಮಕ್ಕಟ್‌ಷಾ ವಲಿ ಎಂಬ ಅರೇಬಿಯಾದಿಂದ ಬಂದವರೆಂದು ಹೇಳಲಾಗುವ ಸಂತರ ದರ್ಗಾ ಇದೆ. ಇಲ್ಲಿಯೂ ಸಹ ರಜ್ಜಬ್ ತಿಂಗಳಿನಲ್ಲೇ ಉರುಸ್ ನಡೆಯುತ್ತದೆ. ಇದರ ಸಮೀಪವೇ ಹಸನ್‌ಷಾ ವಲಿಯ ದರ್ಗಾ ಇದೆ. ಮತ್ತು ಇಲ್ಲಿಯೂ ಸಹ ವಾರ್ಷಿಕವಾಗಿ ರಜ್ಜಬ್‌ನಲ್ಲಿ ಉರುಸ್ ಜರುಗುತ್ತದೆ. ಮೀನುಪೇಟೆಯಲ್ಲಿ ಇತ್ತೀಚೆಗೆ ನಿರ್ಮಿಸಲಾದ ಇನ್ನೊಂದು ಷಾಫಿ ಮಸೀದಿ ಇದೆ. ಬಂಗಾಳಿ ಮೊಹಲ್ಲಾದಲ್ಲಿರುವ ಅಜಂ–ಎ–ಮಸೀದಿ ಕೊಡಗಿನಲ್ಲೇ ದೊಡ್ಡದಾದ ಮಸೀದಿಯ ಕಟ್ಟಡವೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ದಕ್ಷಿಣ ಕೊಡಗಿನ ಕೇಂದ್ರಸ್ಥಳವಾದ ವೀರರಾಜಪೇಟೆಯು ಕೊಡವ ಸಂಸ್ಕೃತಿಯ ಕೇಂದ್ರವೆಂದು ಹೇಳಬಹುದು.

**ಶಾಂತಳ್ಳಿ**

ಸೋಮವಾರಪೇಟೆಯಿಂದ 11 ಕಿ. ಮೀ. ದೂರದಲ್ಲಿರುವ ಜೇನು ಸಾಕಣೆ ಮತ್ತು ಮಾರುಕಟ್ಟೆಗೆ ಹಿಂದಿನಿಂದಲೂ ಹೆಸರು ಗಳಿಸಿರುವ ಸ್ಥಳ ಶಾಂತಳ್ಳಿ. (ಸೋಮವಾರಪೇಟೆ ತಾಲೂಕು ; ಜನಸಂಖ್ಯೆ : 1,024). ಇಲ್ಲಿರುವ ಕುಮಾರ ಲಿಂಗೇಶ್ವರ ದೇವಾಲಯವು ಚೆಂಗಾಳ್ವರ ಕಾಲದಲ್ಲಿ (17ನೇಯ ಶತಮಾನದ ಸುಮಾರಿಗೆ) ನಿರ್ಮಿತವಾಗಿರುವ ವಾಸ್ತುಶಿಲ್ಪವಾಗಿದೆ. ಇದರಲ್ಲಿ ಗರ್ಭಗೃಹ, ಅರ್ಧಮಂಟಪ ಹಾಗೂ ವಿಶಾಲವಾದ ನವರಂಗಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಹೆಚ್ಚು ಎತ್ತರವಿಲ್ಲದ ದ್ರಾವಿಡ ಶೈಲಿಯ ಶಿಖರವಿದೆ. ಅರ್ಧಮಂಟಪದ ದ್ವಾರಬಂಧದ ಗೋಡೆಗಳ ಮೇಲೆ ಮಿಥುನ ಶಿಲ್ಪಗಳು ಹಾಗೂ ಹೂಬಳ್ಳಿಗಳ ಕೆತ್ತನೆಗಳು ಕಂಡುಬರುತ್ತವೆ. ನವರಂಗದಲ್ಲಿ ನಾಲ್ಕು ವಿಜಯನಗರೋತ್ತರ ಶೈಲಿಯ ಚೌಕಾಕಾರ ಕಂಬಗಳಿದ್ದು ಅವುಗಳ ಮೇಲೆ ನವಿಲು, ಶಿವಲಿಂಗ, ಆನೆ, ನಾಗಬಂಧ ಹಂಸ, ಸ್ತ್ರೀ ಮುಂತಾದ ಉಬ್ಬುಶಿಲ್ಪಗಳ ಅಲಂಕಾರವಿದೆ. ಹೊರಭಾಗದ ಗೋಡೆಯಲ್ಲಿ ಭಕ್ತ, ಕುದುರೆ ಮೇಲೆ ಕುಳಿತ ಸವಾರ, ಆನೆಯ ಮೇಲೆ ಕುಳಿತ ಸವಾರ, ಹನುಮಂತ, ಗಣೇಶ ಹಾಗೂ ಇತರೆ ಮಿಥುನ ದೃಶ್ಯಗಳನ್ನು ಪ್ರತಿನಿಧಿಸುವ ಉಬ್ಬು ಶಿಲ್ಪಗಳಿವೆ. ಮುಂದೆ ಎಡಗಡೆ ಪ್ರವೇಶ ದ್ವಾರದ ಬಳಿ ಒಂದು ಅಪ್ರಕಟಿತ ಶಾಸನವು ಕಂಡು ಬರುತ್ತದೆ. ಪ್ರವೇಶದ್ವಾರದ ಮೇಲೆ ಕೊಡಗಿನ ಅರಸರ ಕಾಲದ್ದೆಂದು ಹೇಳಲಾಗುವ ರಾಯಗೋಪುರವಿದೆ. ಇದರ ಮುಂಭಾಗದಲ್ಲಿ ಅರ್ಧಕಟ್ಟಿರುವ ಆಧುನಿಕ ಕಲ್ಯಾಣ ಮಂಟಪವಿದೆ. ಮಕರ ಸಂಕ್ರಮಣದ ಸಮಯಕ್ಕೆ ಈ ದೇವಾಲಯದ ರಥೋತ್ಸವವು ನಡೆಯುತ್ತದೆ. ಇಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ 'ಎಮ್ಮೆಸುಗ್ಗಿ'ಯಲ್ಲಿ, ಇಡೀ ಹೋಬಳಿಯ ಎಲ್ಲಾ ರೈತಬಂಧುಗಳೂ ಒಂದೆಡೆ ಸೇರಿ ಈ ಊರ ಹಬ್ಬವನ್ನು ಜಾತ್ರೆಯೋಪಾದಿಯಲ್ಲಿ ವಿಶೇಷ ಶ್ರದ್ಧೆಯಿಂದ ಆಚರಿಸುತ್ತಾರೆ. ಶಾಂತಳ್ಳಿಯಲ್ಲಿ ಜೇನುಸಾಕಣೆ ತರಬೇತಿ ಕೇಂದ್ರವಿದ್ದು, ಇಲ್ಲಿ ಹಲವಾರು ಪ್ರತಿಷ್ಠಿತ ಜೇನು ಸಂಗ್ರಹಣೆಯ ಸಾರ್ವಜನಿಕ ಪ್ರದರ್ಶನಗಳನ್ನು ಆಗಿಂದಾಗ್ಗೆ ನಡೆಸಲಾಗುತ್ತದೆ.

**ಸೂರಲಬ್ಬಿ**

ಗರವಾಲೆಯಿಂದ ಎಂಟು ಕಿ. ಮೀ. ದೂರದಲ್ಲಿರುವ ಉತ್ತರ ಕೊಡಗಿನ ಮೇರೆಯ ಕೊನೆಯ ಗ್ರಾಮ ಸೂರಲಬ್ಬಿ. (ಸೋಮವಾರಪೇಟೆ ತಾಲೂಕು : ಜನಸಂಖ್ಯೆ : 1,069) ಈ ಊರಿನ ಮುಂಭಾಗದಲ್ಲಿ ಗೌಡಂಡ, ನಾಪಂಡ, ಮುದ್ದಂಡ ಉದಿಯಾಂಡ, ಐಮುಡಿಯಂಡ ಮುಂತಾದ ಕುಟುಂಬಗಳದೆಂದು ಹೇಳಲಾದ ಹೆಣ್ಣುಗಂಡು ಇರುವ 50ಕ್ಕೂ ಮೀರಿದ ವೀರ

ಗಲ್ಲು (ಕೊಲೆಕಲ್ಲು ?) ಗಳು ಕಂಡು ಬರುತ್ತವೆ. ಇವು ಒಂದೇ ಸ್ಥಳದಲ್ಲಿ ಗುಂಪಾಗಿ ಇವೆ. ಈ ಊರಿಗೆ ಸಮೀಪದಲ್ಲಿರುವ (10 ಕಿ. ಮೀ.) ಕೋಟೆಬೆಟ್ಟದಲ್ಲಿ ಪುರಾತನ ಶಿವಾಲಯವಿದೆ. ಹಾಗೂ ಪಾಂಡವರ ಪಾರೆಗಳೆಂದು ಸ್ಥಳೀಯವಾಗಿ ಕರೆಯಲಾಗುವ ಪೂರ್ವೇತಿಹಾಸದ (ಮೆಗಾಲಿಥಿಕ್) ಶಿಲಾಗೋರಿಗಳು ಕಂಡುಬರುತ್ತವೆಂದು ಹೇಳಲಾಗುತ್ತದೆ. ಇಲ್ಲಿ ಬಂಡೆಗಳ ನಡುವೆ ನೈಸರ್ಗಿಕವಾದ ಸುಮಾರು 100 ಅಡಿ ಆಳವಿರುವ ಗುಹೆಯು ಇದ್ದು ಒಳಗೆ ಬಾವಲಿಗಳು ತುಂಬಿವೆ. ಬಹುಶಃ ಕೋಟೆಬೆಟ್ಟದ ಪರಿಸರವನ್ನು ಸೂಕ್ಷ್ಮವಾಗಿ ಪರಿಶೋಧನೆ ಮಾಡಿದರೆ ಪೂರ್ವೇತಿಹಾಸದ ಇನ್ನೂ ಹಲವಾರು ವಿವರಗಳು ಬೆಳಕಿಗೆ ಬರುವ ಸಾಧ್ಯತೆಯಿದೆ. ಸೂರಲಬ್ಬಿಯ ಸಮೀಪದಲ್ಲಿ ಗರವಾಲೆ ರಸ್ತೆಯಲ್ಲಿ (ಎರಡು ಕಿ. ಮೀ. ದೂರದಲ್ಲಿ) ರಸ್ತೆಯ ಪಕ್ಕದಲ್ಲೇ ಸೇತುವೆಯ ಹಿಂಭಾಗದಲ್ಲಿ ಕಡಿದಾದ ಬಂಡೆಗಳ ನಡುವಿನಿಂದ ಭರದಿಂದ ಧುಮುಕುವ ಜಲಪಾತವು ಕಂಡುಬರುತ್ತದೆ. ಈ ಹೊಳೆಯನ್ನು ಮೇದರಹೊಳೆ ಎನ್ನುತ್ತಾರೆ. ಬೇಸಿಗೆಯಲ್ಲಿ ಇಲ್ಲಿ ನೀರಿರುವುದಿಲ್ಲ. ಮಳೆಗಾಲ ಕಳೆದ ಮೇಲೆ (ಅಕ್ಟೋಬರ್‌ನಲ್ಲಿ) ಹೋದರೆ ಈ ಜಲಪಾತವು ರಮ್ಯವಾಗಿ ಕಾಣಬರುತ್ತದೆ.

ಸೋಮವಾರಪೇಟೆ

ಮಡಿಕೇರಿಯಿಂದ 40 ಕಿ. ಮೀ. ದೂರದಲ್ಲಿರುವ ಉತ್ತರ ಕೊಡಗಿನ ಪ್ರಮುಖ ಪಟ್ಟಣ ಹಾಗೂ ತಾಲೂಕು ಕೇಂದ್ರವಾಗಿ ಸೋಮವಾರಪೇಟೆ ಇದೆ (ಜನಸಂಖ್ಯೆ ; 7,092). ಪ್ರತೀ ಸೋಮವಾರ ನಡೆಯುವ ಸಂತೆಯಿಂದಾಗಿ, ಸೋಮವಾರಪೇಟೆ ಎಂದು ಜನಪ್ರಿಯವಾಯಿತೆಂದು ಹೇಳಲಾಗುತ್ತದೆ. ಗಂಗರ ಆಳ್ವಿಕೆಗೆ ಕ್ರಿ. ಶ. 9 ಮತ್ತು 10ನೇಯ ಶತಮಾನಗಳಲ್ಲಿ ಒಳಪಟ್ಟಿದ್ದು ಅನಂತರ, ಚೋಳರ ಮಾಂಡಲಿಕರಾಗಿದ್ದ 'ಕೊಂಗಾಳ್ವ' ವಂಶದ ಕೈಗೆ ಈ ಪ್ರದೇಶವು ಬಂದಿತು. ಕ್ರಿ.ಶ. 12ನೇಯ ಶತಮಾನದ ಚೆಂಗಾಳ್ವರೂ (ಹೊಯ್ಸಳರ ಮಾಂಡಲಿಕರು), ಅನಂತರ ವಿಜಯನಗರದ ಅರಸರೂ ಹಾಗೂ 1600 ರಿಂದ 1834ರವರೆಗೆ ಹಾಲೇರಿ ವಂಶದವರು ಈ ಭಾಗದಲ್ಲಿ ಆಳಿದರು. 1834ರ ತರುವಾಯ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಾಗ ಸೋಮವಾರಪೇಟೆಯು ನಗರ ಕೇಂದ್ರವಾಗಿ ಮತ್ತು ತಾಲೂಕು ಕೇಂದ್ರವಾಗಿ ಬೆಳೆಯ ತೊಡಗಿತು. ಕೊಡಗು ಜಿಲ್ಲೆಯ ಉತ್ತರ ಮತ್ತು ಪೂರ್ವದ ನಡುವೆ ಇರುವ ಈ ತಾಲೂಕಿನ ಹೆಚ್ಚು ಭಾಗ ಪ್ರಸ್ಥಭೂಮಿಯಿಂದ ಕೂಡಿದೆ. ಇಲ್ಲಿ ಹೆಚ್ಚು ಎತ್ತರವಾದ ಬೆಟ್ಟಗಳಿಲ್ಲ. ತಾಲೂಕಿನ ಉತ್ತರದ ಮೇರೆಯಲ್ಲಿ ಕುಮಾರ ಪರ್ವತ (ಪುಷ್ಪಗಿರಿ) ಮಾತ್ರ ಕಂಡು ಬರುತ್ತದೆ. ಹೇಮಾವತಿ, ಕಾವೇರಿ ಮತ್ತು ಹಾರಂಗಿ ನದಿಗಳು ಸೋಮವಾರಪೇಟೆ ತಾಲೂಕಿನಲ್ಲಿ ಹರಿಯುತ್ತವೆ. ಈ ನಗರದ ಸುತ್ತಲಿನ ಪರಿಸರವು ಏರು ತಗ್ಗುಗಳಿಂದ, ಕಾಫಿ, ಏಲಕ್ಕಿ ಹಾಗೂ ಕಿತ್ತಳೆ ತೋಟಗಳಿಂದ ಆವೃತವಾಗಿದೆ. ಈ ಊರಿನಲ್ಲಿ ಬಸವೇಶ್ವರ, ಸೋಮೇಶ್ವರ, ಗಣೇಶ, ಅಂಜನೇಯ ಮುಂತಾದ ದೇವಾಲಯಗಳಿವೆ. ಬಸವೇಶ್ವರ ಹಾಗೂ ಸೋಮೇಶ್ವರ ದೇವಾಲಯಗಳು ವಿಶಾಲವಾದ ನಿವೇಶನದಲ್ಲಿವೆ. ಬಸವೇಶ್ವರ ದೇವಾಲಯದಲ್ಲಿ ಚೌರಸ್ರ ಗರ್ಭಗೃಹ(ಆಧುನಿಕ) ವಿಶಾಲ ನವರಂಗ ಹಾಗೂ ಪಕ್ಕದಲ್ಲಿ ಮಹಾದ್ವಾರವಿದೆ. ಛಾವಣಿಯು ಕಮಾನಾಕಾರವಾಗಿದ್ದು, ಹಂಚುಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಮೇಲ್ಭಾಗದ ಚೌರಸ್ರ ಛಾವಣಿಯು ಇಳಿಜಾರಾಗಿದ್ದು, ಮೇಲ್ಭಾಗದಲ್ಲಿ ಕಲಶವನ್ನು ಹೊಂದಿದೆ. ಕಾರ್ತಿಕ ಮಾಸದ ಕೊನೆಯ ಭಾಗದಲ್ಲಿ ಬರುವ ಬಸವೇಶ್ವರ ದೇವರ ಉತ್ಸವ ಹಾಗೂ ಭಾದ್ರಪದ ಮಾಸದಲ್ಲಿ ಗಣೇಶೋತ್ಸವಗಳು ಅದ್ದೂರಿಯಾಗಿ ನಡೆಯುತ್ತವೆ. ಇಲ್ಲಿನ ಆನೆಕೆರೆಯಲ್ಲಿ (ನೀರಿನಿಂದ ತುಂಬಿದ ವರ್ಷ ಮಾತ್ರ) ತೆಪ್ಪೋತ್ಸವವು ನಡೆಯುತ್ತದೆ. ಚಿತ್ರದುರ್ಗದ ಮುರಘ ರಾಜೇಂದ್ರ ಸ್ವಾಮಿಗಳ ವಿರಕ್ತ ಮಠವಿದೆ. ಸೋಮವಾರಪೇಟೆಯಲ್ಲಿ ಪ್ರತೀವರ್ಷ ಬೇಟೆಗಾರ ಮುತ್ತಪ್ಪ ದೇವರ ಜಾತ್ರೆ ನಡೆಯುತ್ತದೆ.

ಸೋಮವಾರಪೇಟೆಯ ಸಾರ್ವಜನಿಕ ಕಟ್ಟಡಗಳ ಪೈಕಿ ಪ್ರಮುಖವಾದುದುದೆಂದರೆ ಯೂರೋಪಿಯನ್ ಶೈಲಿಯಲ್ಲಿ ಕಟ್ಟಲಾಗಿರುವ ಬೃಹದಾಕಾರವಾದ, ಕೊಡಗಿನ ಪ್ರಸಿದ್ಧ ಕಾಫಿ ಬೆಳೆಗಾರರಾಗಿದ್ದ ಸಾಕಮ್ಮನವರ ಬಂಗಲೆ. ಇಳಿಜಾರಾದ ಹಂಚಿನ ಛಾವಣಿಯು ದೈತ್ಯಾಕಾರವಾದ ಕಬ್ಬಿಣದ ದಿಮ್ಮಿಗಳ ಮೇಲೆ ಆಧಾರಿತವಾಗಿ, ಎತ್ತರವಾದ ಕಂಬಗಳನ್ನು ಹೊಂದಿರುವ ವಿಶೇಷವಾಗಿ ಆಂಗ್ಲ ಶೈಲಿಯು ಈ ಕಟ್ಟಡದ ರಚನೆಯಲ್ಲಿ ಕಂಡುಬರುತ್ತದೆ. ಈ ಊರಲ್ಲಿ 1866ರಲ್ಲಿ ನಿರ್ಮಿಸಿರುವರೆನ್ನಲಾದ ಲೇಡಿ ವಿಕ್ಟೋರಿಯಾ ಚರ್ಚ್‌ಯಿದೆ. ಈ ರೋಮನ್ ಕ್ಯಾಥಲಿಕ್ ಸಂಪ್ರದಾಯದ ಚರ್ಚು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಹಾಗೂ ಅನಾಥಾಶ್ರಮವನ್ನು ಸೋಮವಾರಪೇಟೆ ಹಾಗೂ ಇತರ ಗ್ರಾಮೀಣ ಪ್ರದೇಶಗಳಲ್ಲೂ ನಡೆಸುತ್ತಿದೆ. ಪ್ರಾಟೆಸ್ಟಂಟ್ ಪಂಥದವರ ಒಂದು ಆಧುನಿಕ ಚರ್ಚ್ ಈ ಸ್ಥಳದಲ್ಲಿ ಕಂಡುಬರುತ್ತದೆ. ಈ ಊರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಎರಡು ಮಸೀದಿಗಳಿವೆ–ಒಂದು ಹನಫಿ ಹಾಗೂ ಇನ್ನೊಂದು ಷಾಫಿ. ಮಲಂಗ್ ಷಾ ವಲಿ ಎಂಬ ಪೀರ್‌ನ ದರ್ಗಾಯಿದ್ದು,

ಸುಮಾರು 300 ವರ್ಷ ಪ್ರಾಚೀನವೆಂದು ಸ್ಥಳೀಯರು ಹೇಳುತ್ತಾರೆ. ಈ ದರ್ಗಾದಲ್ಲಿ ಷಾಬಾನ್ ತಿಂಗಳಲ್ಲಿ ಉರುಸ್ ನಡೆಯುತ್ತದೆ. ಇದೇ ಸಂದರ್ಭದಲ್ಲಿ ಕವ್ವಾಲಿ ಕಾರ್ಯಕ್ರಮ ನಡೆಯುತ್ತದೆ.

**ಹರಿಹರ**

ಬೆಳ್ಳೂರಿನಿಂದ ನಾಲ್ಕು ಕಿ.ಮೀ. (ಪೊನ್ನಂಪೇಟೆಯಿಂದ 15 ಕಿ.ಮೀ.) ದೂರದಲ್ಲಿರುವ ಹರಿಹರವು (ವೀರರಾಜಪೇಟೆ ತಾ|| ; ಜನಸಂಖ್ಯೆ 811) ಜಿಲ್ಲೆಯ ಪುಣ್ಯಕ್ಷೇತ್ರವಾಗಿದೆ. ಸಂಪೂರ್ಣವಾಗಿ ನವೀಕರಿಸಲಾಗಿರುವ ಶ್ರೀ ಸುಬ್ರಹ್ಮಣ್ಯ ದೇವಾಲಯವು ಇಲ್ಲಿನ ಮುಖ್ಯ ಆಕರ್ಷಣೆಯಾಗಿದೆ. ಇದರ ಗರ್ಭಗೃಹದಲ್ಲಿ ಸುಬ್ರಹ್ಮಣ್ಯನ ವಿಗ್ರಹವಿದ್ದು ಶಿವಲಿಂಗವೂ ಸಹ ಇದೆ. ಗರ್ಭಗೃಹದ ಮೇಲ್ಭಾಗದಲ್ಲಿ ಆಧುನಿಕ ಶಿಖರ ವಿದೆ. ದೇವಾಲಯದ ಪಕ್ಕದಲ್ಲಿ ಚಿಕ್ಕಗುಡಿಯಿದ್ದು ಒಳಗೆ ಬಲಮುರಿ ಗಣೇಶನ ಕುಳಿತ ಭಂಗಿಯ ವಿಗ್ರಹವಿದೆ. ಇದರ ಸಮೀಪವೇ ಇನ್ನೊಂದು ಚಿಕ್ಕಗುಡಿ ಇದ್ದು ಒಳಗೆ ಕುಳಿತ ಭಂಗಿಯ ದುರ್ಗಾ (ಆಧುನಿಕ) ವಿಗ್ರಹವು ಕಂಡುಬರುತ್ತದೆ. ಇಲ್ಲಿ ಜುಲೈ ತಿಂಗಳಲ್ಲಿ ವಾರ್ಷಿಕವಾಗಿ ಜಾತ್ರೆ ನಡೆಯುತ್ತದೆ. ಸುಬ್ರಹ್ಮಣ್ಯ ಷಷ್ಠಿಯ ದಿನದಂದು ಸಾವಿರಾರು ಜನ ಭಕ್ತಾದಿಗಳು ಸೇರಿ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. **ಕೋತೂರು** (ವೀರರಾಜಪೇಟೆ ತಾಲೂಕು ; ಜನಸಂಖ್ಯೆ : 2,070) ಪೊನ್ನಂಪೇಟೆಯಿಂದ ಆರು ಕಿ. ಮೀ. ದೂರದಲ್ಲಿದ್ದು ಹರಿಹರದಿಂದಲೂ ತಲುಪಬಹುದಾದ ಪ್ರಾಚೀನ ಸ್ಥಳ. ಊರಿನಲ್ಲಿ ಬಸವಣ್ಣ, ಕಾಳಿಕಾ, ಮಾರಮ್ಮ, ಮಾದೇವ ಮುಂತಾದ ಗುಡಿಗಳಿವೆ. ಮಾರಮ್ಮ ಅಥವಾ ಭದ್ರಕಾಳಿ ಗುಡಿಯು ಪುರಾತನವೆಂದು ಹೇಳಬಹುದು. ಇಲ್ಲಿ ಮೇ ತಿಂಗಳಲ್ಲಿ ಏಳು ದಿನಗಳ ಭಾರಿ ಜಾತ್ರೆ ನಡೆಯುತ್ತದೆ. ಈ ಗುಡಿಯ ಬಳಿ ಮಾಂಧಾರಮ್ಮನ ಗುಡಿಯು ತೆರೆದ ಕಟ್ಟೆಯ ಮೇಲೆ ಕಿರಿದಾದ ಮಂಟಪದಲ್ಲಿದೆ. ಈ ಜಾಗದಲ್ಲಿ (ಬಹುಶಃ ಹಿಂದೆ, ಲಕ್ಕುಂದ ಕಾಡು ಎಂದು ಹೇಳಲಾಗುತ್ತಿದ್ದ ಸ್ಥಳದಲ್ಲಿ) ಆನೆಯ ಲಾಂಛನವಿರುವ ಗಂಗರ ಕಾಲದ ಶಾಸನ ವಿದೆ. ಇದು ಕ್ರಿ.ಶ. 9ನೇಯ ಶತಮಾನಕ್ಕೆ ಸೇರಿದ್ದು ಗಂಗರ ರಾಜ ಸತ್ಯವಾಕ್ಯ ಕೊಂಗುಣಿವರ್ಮ (ರಾಚಮಲ್ಲ)ನು ಆಗ ಈ ಭಾಗವನ್ನು ಆಳುತ್ತಿದ್ದ ಎರೆಯಂಗಗಾವುಂಡನೆಂಬ ಅಧಿಕಾರಿಗೆ ನೀಡಿದ ಕೆಲವು ಭೂದಾನಗಳನ್ನು ಕುರಿತು ತಿಳಿಸುತ್ತದೆ. ರಾಜನು ಈ ದಾನವನ್ನು 'ಪೆರ್ಮಡಿವಟ್ಟಂ' (ಅಂದರೆ, ದಾನಪತ್ರವನ್ನು ಹಣೆಗೆ ಕಟ್ಟಿಕೊಂಡು ಮಾಡುವ) ಎಂಬ ಪದ್ಧತಿಯ ಮೂಲಕ ದಾನವನ್ನು ನೀಡಿದನೆಂದೂ ಹಾಗೂ ಈ ಶಾಸನವನ್ನು ಬೂವಯ್ಯನೆಂಬುವನು ಕೆತ್ತಿದನೆಂದೂ ಈ ದಾಖಲೆಯು ತಿಳಿಸುತ್ತದೆ. ಲಕ್ಕುಂದ ಕಾಫಿ ಎಸ್ಟೇಟ್‌ನಲ್ಲಿ ಅಯ್ಯಪ್ಪ ಸನ್ನಿಧಿಯಿದ್ದು ಸಮೀಪದಲ್ಲಿ ದೇವರ ಕಾಡೂ ಇದೆ. ಕೋತೂರಿನಲ್ಲಿ ಬೇರೆ ಯಾವುದೇ ಪ್ರಾಚೀನ ಅವಶೇಷಗಳೂ ಕಂಡು ಬರುವುದಿಲ್ಲ.

**ಹಾರಂಗಿ**

ಕುಶಾಲನಗರದಿಂದ ಎಂಟು ಕಿ.ಮೀ. ದೂರದಲ್ಲಿರುವ ಹಾರಂಗಿಯು (ಸೋಮವಾರಪೇಟೆ ತಾಲೂಕು) ಇಲ್ಲಿನ ಹಾರಂಗಿ ನದಿಯ ಜಲಾಶಯದಿಂದ ಪ್ರಸಿದ್ಧವಾಗಿರುವ ಸ್ಥಳ. ಈ ಸ್ಥಳವನ್ನು ತಲುಪಬೇಕಾದರೆ ಯಡವನಾಡಿನಿಂದ ಕಾಜೂರು ರಸ್ತೆಯ ಮೂಲಕ ಹೋಗಬೇಕಾಗುತ್ತದೆ. ಹಾರಂಗಿಯ ಬಳಿ ನಿರ್ಮಿಸಲಾಗಿರುವ ಅಣೆಕಟ್ಟಿನ ಹಿಂಭಾಗದಲ್ಲಿ ಮುಳುಗಡೆಯಾಗಿರುವ ಪ್ರದೇಶದ ದಡದಲ್ಲಿ ಆಧುನಿಕ ಹಂಚಿನ ಕಟ್ಟಡವನ್ನು ಹೊಂದಿರುವ ಬಸವಣ್ಣನ ದೇವಾಲಯ ವಿದೆ. ಚೌರಸ ಗರ್ಭಗೃಹ ಹಾಗೂ ಮುಂಭಾಗದಲ್ಲಿ ವಿಶಾಲ ವಾದ ಮುಕ್ತ ಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಪಕ್ಕದಲ್ಲಿ (ಬಲಭಾಗಕ್ಕೆ) ಕನ್ನಂಬಾಡಿ ಅಮ್ಮನ ಚಿಕ್ಕದಾದ ಗುಡಿಯಿದೆ. ಹಾಗೂ, ಇದರ ಎಡಭಾಗಕ್ಕೆ ಖಾಲಿ ಕೊಠಡಿಯಿದ್ದು ಒಳಗೆ ಕೆಲವು ಖಡ್ಗಗಳು ಕಂಡು ಬರುತ್ತವೆ. ಈ ದೇವಾಲಯದ ಆವರಣದಲ್ಲಿರುವ ಹನುಮಂತನ ವಿಗ್ರಹವನ್ನು ಬೇರೆ ಕಡೆಯಿಂದ ತಂದಿರುವುದೆಂದು ಸ್ಥಳೀಕರು ಹೇಳುತ್ತಾರೆ. ಈ ಪ್ರದೇಶವು ಮಳೆಗಾಲದಲ್ಲಿ ಮುಳುಗಿರುತ್ತದೆ. ಹಾರಂಗಿಯ ಗ್ರಾಮದಲ್ಲಿರುವ ಚಿಕ್ಕ ಮಠದ ಬಳಿ ಕಾಡಿನಲ್ಲಿರುವ ವೀರಗಲ್ಲು ಶಾಸನವು ಸುಮಾರು ಕ್ರಿ.ಶ. 12ನೇಯ ಶತಮಾನಕ್ಕೆ ಸೇರಿದ್ದು 'ಕಲಿಯುಗ ಬ್ರಹ್ಮನೆಂಬ' ಬಿರುದನ್ನು ಹೊಂದಿದ್ದ ಷಣ್ಮೇದೊಕೋಕ ಎಂಬ ಹಿರಿಯ ವ್ಯಕ್ತಿಯ ಅವಸಾನವನ್ನು ತಿಳಿಸುತ್ತದೆ. ಉಳಿದ ವಿವರಗಳು ತಿಳಿಯಲು ಸಾಧ್ಯವಾಗಿಲ್ಲ. ಹಾರಂಗಿಯಲ್ಲಿ ಜಲಾಶಯದ ಬಳಿ ಒಂದು ಕಾವೇರಿಯ ಮೂರ್ತಿ ಇದ್ದು ಇದಕ್ಕೆ ನಿತ್ಯ ಪೂಜೆ ನಡೆಯುತ್ತದೆ. ಐಗೂರು (ಸೋಮವಾರಪೇಟೆ ತಾಲೂಕು) ಹಾರಂಗಿಯ ಸಮೀಪವೇ ಇರುವ ಸ್ಥಳ. ಇಲ್ಲಿ ಬಸವಣ್ಣನ ಹಂಚಿನ ಕಟ್ಟಡವಿರುವ ಇತ್ತೀಚಿನ ದೇವಾಲಯವಿದೆ. ಇದರ ಬಳಿ ಒಂದು ಅಪ್ರಕಟಿತ ಶಾಸನ ವಿದೆ. ಇದರ ಸಮೀಪವೇ ಐಗೂರು ಹೊಳೆಯಿದೆ. ಬಹುಶಃ ಐಗೂರು ಚೆಂಗಾಳ್ವರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿರಬೇಕು. ಬಸವನ ಭಿನ್ನವಾದ ಮೂರ್ತಿಯು ಗರ್ಭಗುಡಿಯ ಎದುರಿನಲ್ಲಿದ್ದು ಸಮೀಪವೇ ಕುಳಿತ ಭಂಗಿಯಲ್ಲಿರುವ ವೀಣಾಧರ ವಿಗ್ರಹವಿದೆ. ಐಗೂರಿನ ಈಶ್ವರ ದೇವಾಲಯವು ಪುರಾತನ ಗುಡಿ ಎನ್ನಬಹುದಾಗಿದೆ. ಮಹಾ

ದ್ವಾರದ ಎರಡೂ ಕಡೆಗಳಲ್ಲಿ ಆಕರ್ಷಕವಾದ ದ್ವಾರಪಾಲಕರ ಶಿಲ್ಪಗಳು ಕಂಡು ಬರುತ್ತವೆ. ಸಮೀಪವೇ ಆಧುನಿಕವಾಗಿ ಚಿಕ್ಕದಾದ ಬೇಟೆಗಾರ ಮುತ್ತಪ್ಪನ ಗುಡಿ ಕಂಡುಬರುತ್ತದೆ. ಇದರ ಹಿಂಭಾಗದಲ್ಲಿ ಮೆಗಾಲಿಥಿಕ್ ಕಾಲದ ಒಂದು ಶಿಲಾಗೋರಿಯಿದ್ದು ಅದಕ್ಕೆ ನೇರವಾದ ಚಪ್ಪಡಿಗಳ ರಚನೆಯಿದೆ. ಮುಂಭಾಗದಲ್ಲಿ ಅರ್ಧಚಂದ್ರಾಕಾರವಾದ ಕಿಂಡಿ ಇದೆ. ಹುದಗೂರು (ಸೋಮವಾರಪೇಟೆ ತಾಲೂಕು) ಹಾರಂಗಿ ಅಣೆಕಟ್ಟನ್ನು ತಲುಪುವ ಮುಖ್ಯ ರಸ್ತೆಯಲ್ಲಿರುವ ಹುದಗೂರಿನಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಉಮಾಮಹೇಶ್ವರ ದೇವಾಲಯವಿದೆ. ಹೊಸದಾಗಿ ಕಟ್ಟಲಾಗಿರುವ ಈ ದೇವಾಲಯದಲ್ಲಿ ಕೊಡಗಿನ ಅರಸರ ಕಾಲದ ಲಕ್ಷಣಗಳನ್ನು ಹೊಂದಿರುವ ಗಣಪತಿ, ಸುಬ್ರಹ್ಮಣ್ಯ, ನಾಗ ಮುಂತಾದ ಶಿಲಾಮೂರ್ತಿಗಳ ಚಿಕ್ಕ ಚಿಕ್ಕ ಗುಡಿಗಳಿವೆ. ಈ ದೇವಾಲಯದ ಪಕ್ಕದಲ್ಲೇ ದೊಡ್ಡ ಆಲದ ಮರವಿದೆ. ಈ ಊರಿನಿಂದ ನಾಲೆಯ ರಸ್ತೆಯಲ್ಲೇ ಹೋದರೆ ಹಾರಂಗಿ ಜಲಾಶಯದ ಕೆಳಭಾಗವನ್ನು ತಲುಪಬಹುದು. ಜಲಾಶಯದ ಮೇಲ್ಭಾಗದಲ್ಲಿ ಯಾತ್ರಿಕರು ಉಳಿದುಕೊಳ್ಳಲು ಅತಿಥಿ ಗೃಹವಿದೆ. ಜಲಾಶಯದ ಪರಿಸರವು ಅತ್ಯುತ್ತಮವಾದ ವಿಹಾರ ಕೇಂದ್ರವೆಂದು ಜನಪ್ರಿಯವಾಗಿದೆ.

**ಹಾಲುಗುಂದ**

ಚೆಂಬೆ ಬೆಳ್ಳೂರಿನಿಂದ ಎರಡು ಕಿ. ಮೀ. ದೂರದಲ್ಲಿರುವ ಒಂದು ಪ್ರಾಚೀನ ಸ್ಥಳ ಹಾಲುಗುಂದ (ವೀರರಾಜಪೇಟೆ : ಜನಸಂಖ್ಯೆ : 1,678). ಈ ಊರಿನಲ್ಲಿರುವ ದೇವಾಲಯಗಳೆಂದರೆ ಮಹಾದೇವ (ಹಳೆಯದು), ಭದ್ರಕಾಳಿ, ಭಗವತೀ, ಅಯ್ಯಪ್ಪ, ಬೇಟೆಗಾರ ಮುತ್ತಪ್ಪ ಮುಂತಾದವುಗಳು. ಮಹಾದೇವ ದೇವಾಲಯವು ವಿಶಾಲವಾದ ಆವರಣವನ್ನು ಹೊಂದಿದೆ. ಇದರ ಗರ್ಭಗೃಹವು ವೃತ್ತಾಕಾರವಾಗಿದ್ದು ಜಂಬಿಟ್ಟಿಗೆಯಿಂದ ಕಟ್ಟಲಾಗಿದ್ದು ಈಗ ಶಿಥಿಲವಾಗಿದೆ. ಒಳಗೆ ಪಾಣಿಪೀಠದ ಮೇಲಿರುವ ಶಿವಲಿಂಗವನ್ನು ಸಡಿಲವಾಗಿ ಇಡಲಾಗಿದೆ. ಮುಂಭಾಗದಲ್ಲಿ ಮುಕ್ತ ಮುಖಮಂಟಪವಿದೆ ಹಾಗೂ ಇದನ್ನೂ ಸಹ ಜಂಬಿಟ್ಟಿಗೆಯಿಂದ ನಿರ್ಮಿಸಲಾಗಿದೆ. ದೇವಾಲಯದ ಸುತ್ತಲೂ ಸಂರಕ್ಷಣಾ ಗೋಡೆಯಿದೆ. ಇದರ ಸಮೀಪದಲ್ಲೇ ಇರುವ ಭಗವತೀ (ಪೊವ್ವೆದಿ) ದೇವಾಲಯವು ಸುಮಾರು ನೂರು ವರ್ಷ ಹಳೆಯದಾಗಿದ್ದು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಭಗವತಿಯ ಮೂಲ ಮೂರ್ತಿಯು ಕಲ್ಲಿನದ್ದಾಗಿದ್ದು ನಾಲ್ಕು ಕೈಗಲ್ಲಿ ಶಂಖ, ಚಕ್ರ, ಅಭಯ ಮತ್ತು ವರದ ಹಸ್ತ ಮುದ್ರೆಯಲ್ಲಿರುವ ಸೌಮ್ಯ ವಿಗ್ರಹವಾಗಿದೆ. ಇಲ್ಲಿ ಹೆಂಗಸರಿಗೆ ಪ್ರವೇಶವನ್ನು ನಿಷೇಧಿಸಲಾಗಿದ್ದು ಇದು ಇಲ್ಲಿಯ ಧಾರ್ಮಿಕ ಪದ್ಧತಿಯಾಗಿದೆ. ಈ ದೇವಿಯ ಜಾತ್ರೆಯು ವಾರ್ಷಿಕವಾಗಿ ಮಾಘ (ಫೆಬ್ರವರಿ–ಮಾರ್ಚ್) ಮಾಸದಲ್ಲಿ ನಡೆಯುತ್ತದೆ. ಊರಿನ ಹೊರಗೆ ಇರುವ ಅಯ್ಯಪ್ಪನ ಗುಡಿಯು ಚಿಕ್ಕದಾಗಿದೆ. ಪಕ್ಕದಲ್ಲಿ ಮುಖ್ಯ ಗುಡಿಯೊಂದರಲ್ಲಿ ಕುಳಿತಿರುವ ವಿಷ್ಣುಮೂರ್ತಿಯಿದೆ. ವಿಷ್ಣುವು ಮಂಡಿಯ ಮೇಲೆ ಕೈಚಾಚಿ ಕುಳಿತಿರುವ ಭಂಗಿಯು ಕೇರಳ ಶೈಲಿಯನ್ನು ಹೋಲುತ್ತದೆ. ಇಲ್ಲಿದ್ದಂತಹ ಹಳೆಯ ವಿಷ್ಣುಮೂರ್ತಿಯನ್ನು (ಭಿನ್ನವಾಗಿದ್ದ ಕಾರಣ) 1968ರಲ್ಲಿ ಕಾವೇರಿಯಲ್ಲಿ ವಿಸರ್ಜಿಸಲಾಯಿತೆಂದು ತಿಳಿದು ಬರುತ್ತದೆ. ಅಯ್ಯಪ್ಪ ದೇವಾಲಯದ ಮುಂಭಾಗದಲ್ಲಿ ಮುಕ್ತ ಜಗತಿಯ ಮೇಲೆ ದೇವರಿಗೆ ಅರ್ಪಿಸಿರುವ ನೂರಾರು ಮಣ್ಣಿನ ನಾಯಿಗಳ ದೊಡ್ಡ ರಾಶಿಯೇ ಇದೆ. ಸ್ಥಳೀಯ ಸಂಪ್ರದಾಯದ ಪ್ರಕಾರ ನಾಯಿಗಳನ್ನು ಸಾಕಿರುವವರು ತಮ್ಮ ನಾಯಿಗಳ ಆಯುರಾರೋಗ್ಯಕ್ಕಾಗಿ ದೇವರಲ್ಲಿ ಹರಕೆ ಹೊತ್ತು ಮಣ್ಣಿನ ನಾಯಿಯ ರೂಪದಲ್ಲಿ ದೇವರಿಗೆ ಅರ್ಪಣೆ ಮಾಡುವ ಪದ್ಧತಿಯು ಆಚರಣೆಯಲ್ಲಿದೆ ಎಂದು ತಿಳಿದು ಬರುತ್ತದೆ. ಬೇಟೆಗಾರ ಅಥವಾ ಮುತ್ತಪ್ಪನೆಂದೂ ಕರೆಯಲಾಗುವ ದೇವಾಲಯದಲ್ಲಿ ಹೇರಳವಾಗಿ ತ್ರಿಶೂಲಗಳು, ದೊಡ್ಡ ಕತ್ತಿಗಳು ದೇವರಿಗೆ ಅರ್ಪಿಸಿರುವುದು ಕಂಡುಬರುತ್ತದೆ. ಮೇಷ ಸಂಕ್ರಾಂತಿಯಲ್ಲಿ ಇಲ್ಲಿ ಜಾತ್ರೆ ಮತ್ತು ವಿಶೇಷ ಧಾರ್ಮಿಕ ಆಚರಣೆಗಳು ನಡೆಯುತ್ತವೆ. ಈ ದೇವಾಲಯದ ಎದುರಿಗೆ ಭಗವತೀ ಕಟ್ಟೆಯ ಮೇಲೆ ಜಾತ್ರೆಯ ಹೊತ್ತಿಗೆ ಬಾಳೆಹಣ್ಣಿನ ಕಾಣಿಕೆ ಸಲ್ಲಿಸುತ್ತಾರೆ. ಹಾಗೂ ಅದನ್ನೇ ಬೆರಸಿ ಪ್ರಸಾದ ಮಾಡಿ ಹಂಚುತ್ತಾರೆ. ಕೇರಳದಿಂದ ಬಂದ ಭಕ್ತಾದಿಗಳು (ಪಾತ್ರಧಾರಿಗಳು) ವೇಷ ಕಟ್ಟಿ ಕುಣಿಯುತ್ತಾರೆ. ಈ ಊರಿನ ಸಮೀಪವೇ ನಂದಿಕಂಡ ತೋಟದ ಬಳಿ ಕಾಡಿನ ಮಧ್ಯದಲ್ಲಿ ದೇವರ ಕಾಡಿನಲ್ಲಿ ಒಂದು ಪೂರ್ಣವಾಗಿ ಶಿಥಿಲವಾದ ದೇವಾಲಯ ಮತ್ತು ಒಂದು ಎತ್ತರವಾದ ಜಗಲಿಯ ಮೇಲೆ ಶಿಖರದ ಸ್ತೂಪಿಕೆ, ಹಾಗೂ ಇತರೆ ಕಲ್ಲಿನ ಕಟ್ಟಡದ ಅವಶೇಷಗಳು ಕಂಡುಬರುತ್ತವೆ.

**ಹಾಲೇರಿ**

ಮಡಿಕೇರಿಯಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿ ಮಡಿಕೇರಿ–ಮಾದಾಪುರ ರಸ್ತೆಯಲ್ಲಿರುವ ಕೊಡಗು ರಾಜರ ಮೂಲ ರಾಜಧಾನಿ ಹಾಲೇರಿ (ಮಡಿಕೇರಿ ತಾಲೂಕು) ಎಂದು ಹೆಸರು ಪಡೆದಿರುವ ಸ್ಥಳವಿದೆ. ಈಗ ಹಾಲೇರಿಯ ಪ್ರದೇಶವು ಕಾಫಿ ತೋಟಗಳಿಗೆ ಜನಪ್ರಿಯವಾಗಿದೆ. ಶಿವಮೊಗ್ಗ ಜಿಲ್ಲೆಯ ಇಕ್ಕೇರಿಯಿಂದ ಕೊಡಗಿನ ಹಾಲೇರಿಗೆ ಬಂದು ನೆಲಸಿ ಕೆಲವು ವರ್ಷಗಳಲ್ಲೇ ಕೊಡಗಿನ ಅರಸೊತ್ತಿಗೆಯನ್ನು ಇಕ್ಕೇರಿಯ

ರಾಜಕುಮಾರನೊಬ್ಬನು ಸ್ಥಾಪಿಸಿದನು. ಹಾಲೇರಿಯೇ ಇವನ ರಾಜಧಾನಿಯಾಗಿದ್ದುದರಿಂದ ಈತನು ಸ್ಥಾಪಿಸಿದ ರಾಜ ವಂಶಕ್ಕೆ 'ಹಾಲೇರಿ ಅರಸರು' ಎಂದು ಹೆಸರಾಯಿತು. ಈ ವಂಶದಲ್ಲಿ ಬಂದ ಮುದ್ದುರಾಜನು 1681 ರಲ್ಲಿ ಹಾಲೇರಿಯಿಂದ ಮಡಿಕೇರಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದನು. ಈ ಅರಸರು ತಮ್ಮ ಕೆಲವು ಶಾಸನಗಳಲ್ಲಿ ಹಾಲೇರಿಯನ್ನು ಸಂಸ್ಕೃತದಲ್ಲಿ 'ಕ್ಷೀರಸಾಗರ'ವೆಂದು ಕರೆದಿದ್ದಾರೆ. ಈ ವಂಶದ ಅರಸರು ಹಾಲೇರಿಯಲ್ಲಿ ಅರಮನೆಯನ್ನು ಕಟ್ಟಿದುದರ ಬಗೆಗೆ ಪ್ರತೀತಿಯಿದೆ. ಆದರೆ ಈಗ 'ಹಾಲೇರಿ ಎಸ್ಟೇಟ್' ಎಂಬ ಖಾಸಗಿ ಕಾಫಿ ತೋಟದಲ್ಲಿ ಅರಮನೆಯ ಕೆಲವೇ ಅವಶೇಷಗಳನ್ನು ಕಾಣಬಹುದು. ಹಳೆಯ ಅರಮನೆಯ ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ ಆಧುನಿಕ ಬಂಗಲೆಯನ್ನು ನಿರ್ಮಿಸಿರುವುದು ವ್ಯಕ್ತವಾಗುತ್ತದೆ. ಎರಡು ಆನೆಯ ಮೂದರಿಗಳನ್ನು ಪ್ರತಿನಿಧಿಸುವ ತಾಳವಾರಗಳು ಎಸ್ಟೇಟಿನ ಕಚೇರಿಯ ಎದುರು ಕಂಡುಬರುತ್ತವೆ. ಹಾಲೇರಿಯ ಗ್ರಾಮದಲ್ಲಿರುವ ವೀರಭದ್ರ ಹಾಗೂ ಭದ್ರಕಾಳಿಯ ದೇವಾಲಯಗಳು ಇತ್ತೀಚೆಗೆ ನವೀಕರಿಸಲ್ಪಟ್ಟಿವೆ. ಹಾಲೇರಿ ಎಸ್ಟೇಟಿನ ವ್ಯಾಪ್ತಿಯಲ್ಲೇ ದೇವರ ಕಾಡಿನಲ್ಲಿ ಈಗ ಅಯ್ಯಪ್ಪ (ಆಧುನಿಕ) ಗುಡಿಯಿದೆ. ಈ ದೇವಾಲಯದಲ್ಲಿ ವರ್ಷಕ್ಕೊಮ್ಮೆ ವಿಶೇಷ ಉತ್ಸವವು ಜರುಗುತ್ತವೆ.

ಹುದಿಕೇರಿ

ಕಲ್ಲುಗೋಶ್ವರದ ಸಮೀಪವಿರುವ (ಪೊನ್ನಂಪೇಟೆಯಿಂದ 7 ಕಿ.ಮೀ.) ಪುರಾತನ ಸ್ಥಳವಾದ ಹುದಿಕೇರಿ (ವೀರರಾಜಪೇಟೆ ತಾಲೂಕು; ಜನಸಂಖ್ಯೆ : 2,165)ಯು ಪ್ರಾಚೀನ ಕಾಲದಲ್ಲಿ ಕಿಗ್ಗಟ್ಟುನಾಡು ಎಂಬ ಆಡಳಿತ ವಿಭಾಗದ ಕೇಂದ್ರ ಸ್ಥಾನವಾಗಿದ್ದಿತು. ಈ ಊರಿನಲ್ಲಿರುವ ಬೃಹದಾಕಾರವಾದ ವೃತ್ತಾಕಾರದ ಗರ್ಭಗೃಹ ಹೊಂದಿರುವ ಮಹಾದೇವ ದೇವಾಲಯವು ಹೊರಭಾಗಕ್ಕೆ ಸುಂದರ ದೇವಕೋಷ್ಠಗಳನ್ನು ಹೊಂದಿದೆ. ಗರ್ಭಗುಡಿಗೆ ವೃತ್ತಾಕಾರವಾದ ಸಾಂಧಾರ ಪ್ರದಕ್ಷಿಣಾಪಥವಿದೆ. ದೇವಾಲಯದ ಬಲಗಡೆ ಸಣ್ಣ ಗಣಪತಿಯ ಗುಡಿ ಇದೆ. ಊರಿನೊಳಗೆ ಇತ್ತೀಚೆಗೆ ನಿರ್ಮಿಸಲಾಗಿರುವ ಜುಮ್ಮಾ ಮಸೀದಿ ಇದೆ. ಅಯಟ್ಟಿ ಹುದಿಕೇರಿ ಗ್ರಾಮದಿಂದ ಐದು ಕಿ.ಮೀ. ದೂರದಲ್ಲಿರುವ ಸ್ಥಳ. (ವೀರರಾಜಪೇಟೆ ತಾ||). ಈ ಊರಿನಲ್ಲಿ ಸೈಯದ್ ಷೇಕ್‌ಮಾರ್ ಹಜರತ್ ದರ್ಗಾ ಇರುವುದರಿಂದ ಮುಸ್ಲಿಮರಿಗೆ ಬಹಳ ಜನಪ್ರಿಯವಾದ ಯಾತ್ರಾಸ್ಥಳವಾಗಿದೆ. ವಾರ್ಷಿಕವಾಗಿ ರಜ್ಜಬ್ ಮಾಹೆಯಲ್ಲಿ ಉರುಸ್ ನಡೆಯುತ್ತದೆ. ಮತ್ತು ಈ ಸಂದರ್ಭದಲ್ಲಿ ಸಾವಿರಾರು ಜನರು ಜಿಲ್ಲೆಯ ನಾನಾ ಭಾಗಗಳಿಂದ ಬಂದು ಸೇರುತ್ತಾರೆ. ಇದರ ಸಮೀಪವೇ ಕೊಂಡಂಗೇರಿ ಎಂಬ ಸ್ಥಳದಲ್ಲಿ ಸುಮಾರು ನೂರು ವರ್ಷ ಹಳೆಯದಾದ ಸೈಯದ್ ಅಬ್ದುಲ್ ಷಾವಲಿ ಷರೀಫ್ ದರ್ಗಾ ಇದೆ. ಕೊಂಡಂಗೇರಿಯಲ್ಲಿ ಟಿಪ್ಪುವಿನ ಕಾಲದ್ದೆಂದು ಸ್ಥಳೀಯವಾಗಿ ಹೇಳಲಾಗುವ ಜುಮ್ಮಾ ಮಸೀದಿ ಇದೆ.